# ಜನತಾ ಪ್ರಾತಿನಿಧ್ಯ ಅಧಿನಿಯಮ, 1951

(1951ರ ಅಧಿನಿಯಮ ಸಂಖ್ಯೆ 43)

**[7.1.2005ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 31ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 195 ರಿಂದ 268ರವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು**

**ಭಾಗ - I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು
2. ಅರ್ಥ ವಿವರಣೆ

**ಭಾಗ - II**

**ಅರ್ಹತೆಗಳು ಮತ್ತು ಅನರ್ಹತೆಗಳು**

**ಅಧ್ಯಾಯ I - ಸಂಸತ್ ಸದಸ್ಯತ್ವದ ಅರ್ಹತೆಗಳು**

3. ರಾಜ್ಯಸಭಾ ಸದಸ್ಯತ್ವಕ್ಕಾಗಿ ಅರ್ಹತೆಗಳು
4. ಲೋಕಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು

**ಅಧ್ಯಾಯ II - ರಾಜ್ಯ ವಿಧಾನಮಂಡಲಗಳ ಸದಸ್ಯತ್ವಕ್ಕಾಗಿ ಅರ್ಹತೆಗಳು**

5. ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು

5ಎ. ಸಿಕ್ಕಿಂ ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು

6. ವಿಧಾನಪರಿಷತ್ತಿನ ಸದಸ್ಯತ್ವಕ್ಕಾಗಿ ಅರ್ಹತೆಗಳು

**ಅಧ್ಯಾಯ III - ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯತ್ವಕ್ಕಾಗಿ ಅನರ್ಹತೆಗಳು**

7. ಪರಿಭಾಷೆಗಳು
8. ಕೆಲವು ಅಪರಾಧಗಳ ಬಗ್ಗೆ ಅಪರಾಧ ನಿರ್ಣಯವಾದ ಮೇಲೆ ಅನರ್ಹತೆ

8ಎ. ಭ್ರಷ್ಟಾಚಾರಗಳ ಆಧಾರದ ಮೇಲೆ ಅನರ್ಹತೆ

9. ಭ್ರಷ್ಟಾಚಾರ ಅಥವಾ ದ್ರೋಹದ ಸಲುವಾಗಿ ವಜಾ ಮಾಡಿದ್ದಕ್ಕಾಗಿ ಅನರ್ಹತೆ

9ಎ. ಸರ್ಕಾರಿ ಕರಾರುಗಳು, ಇತ್ಯಾದಿಗಳಿಗಾಗಿ ಅನರ್ಹತೆ

10. ಸರ್ಕಾರಿ ಕಂಪನಿಯ ಅಧೀನದಲ್ಲಿನ ಹುದ್ದೆಗಾಗಿ ಅನರ್ಹತೆ

10ಎ. ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಲು ತಪ್ಪಿದ್ದಕ್ಕಾಗಿ ಅನರ್ಹತೆ

11. ಅನರ್ಹತೆಯ ಅವಧಿಯನ್ನು ತೆಗೆದುಹಾಕುವುದು ಅಥವಾ ಕಡಿಮೆ ಮಾಡುವುದು

**ಅಧ್ಯಾಯ IV - ಮತದಾನಕ್ಕಾಗಿ ಅನರ್ಹತೆಗಳು**

11ಎ. ಅಪರಾಧ ನಿರ್ಣಯ ಮತ್ತು ಭ್ರಷ್ಟ ಆಚರಣೆಗಳಿಂದ ಉದ್ಭವಿಸುವ ಅನರ್ಹತೆ

11ಬಿ. ಅನರ್ಹತೆಗಳ ನಿವಾರಣೆ

**ಭಾಗ - III**

**ಸಾರ್ವತ್ರಿಕ ಚುನಾವಣೆಗಳ ಅಧಿಸೂಚನೆ**

12. ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆಗಾಗಿ ಅಧಿಸೂಚನೆ

12ಎ. ರಾಜ್ಯಸಭೆಯಲ್ಲಿ ಸಿಕ್ಕಿಂ ರಾಜ್ಯಕ್ಕೆ ಹಂಚಿಕೊಟ್ಟಿರುವ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಗಾಗಿ ಅಧಿಸೂಚನೆ

13. (ನಿರಸನಗೊಳಿಸಲಾಗಿದೆ)

14. ಲೋಕಸಭೆಯ ಸಾರ್ವತ್ರಿಕ ಚುನಾವಣೆಗಾಗಿ ಅಧಿಸೂಚನೆ

14ಎ. ಅಸ್ತಿತ್ವದಲ್ಲಿರುವ ಲೋಕಸಭೆಗೆ ಸಿಕ್ಕಿಂ ರಾಜ್ಯದ ಪ್ರತಿನಿಧಿಯನ್ನು ಆಯ್ಕೆ ಮಾಡುವುದಕ್ಕಾಗಿ ಅಧಿಸೂಚನೆ

15. ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗಾಗಿ ಅಧಿಸೂಚನೆ

15ಎ. ವಿಧಾನಪರಿಷತ್ತುಗಳ ಕೆಲವು ಚುನಾವಣೆಗಳಿಗಾಗಿ ಅಧಿಸೂಚನೆ

16. ರಾಜ್ಯ ವಿಧಾನಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗಾಗಿ ಅಧಿಸೂಚನೆ


## ಭಾಗ – IV

## ಚುನಾವಣೆಗಳನ್ನು ನಡೆಸುವುದಕ್ಕಾಗಿ ಆಡಳಿತ ಯಂತ್ರ


19. ಪರಿಭಾಷೆ

19ಎ. ಚುನಾವಣಾ ಆಯೋಗದ ಪ್ರಕಾರ್ಯಗಳ ಪ್ರತ್ಯಾಯೋಜನೆ

20. ಮುಖ್ಯ ಚುನಾವಣಾ ಅಧಿಕಾರಿಗಳ ಸಾಮಾನ್ಯ ಕರ್ತವ್ಯಗಳು

20ಎ. ಜಿಲ್ಲಾ ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯಗಳು

20ಬಿ. ಪರಿವೀಕ್ಷಕರು

21. ಚುನಾವಣಾಧಿಕಾರಿಗಳು

22. ಸಹಾಯಕ ಚುನಾವಣಾ ಅಧಿಕಾರಿಗಳು

23. ಚುನಾವಣಾ ಅಧಿಕಾರಿ ಎಂಬುದು ಚುನಾವಣಾ ಪ್ರಕಾರ್ಯಗಳನ್ನು ನಿರ್ವಹಿಸುವ ಸಹಾಯಕ ಚುನಾವಣಾ ಅಧಿಕಾರಿಗಳನ್ನು ಒಳಗೊಳ್ಳುವುದು.

24. ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯ

25. ಚುನಾವಣಾ ಕ್ಷೇತ್ರಗಳಿಗಾಗಿ ಮತದಾನ ಕೇಂದ್ರಗಳ ವ್ಯವಸ್ಥೆ

26. ಮತದಾನ ಕೇಂದ್ರಗಳಿಗೆ ಪೀಠಾಸೀನಾಧಿಕಾರಿಗಳ ನೇಮಕ

27. ಪೀಠಾಸೀನ ಅಧಿಕಾರಿಯ ಸಾಮಾನ್ಯ ಕರ್ತವ್ಯ

28. ಮತದಾನಾಧಿಕಾರಿಯ ಕರ್ತವ್ಯಗಳು

28ಎ. ಚುನಾವಣಾ ಅಧಿಕಾರಿ, ಪೀಠಾಸೀನ ಅಧಿಕಾರಿ, ಮೊದಲಾದವರು ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾದವರೆಂದು ಭಾವಿಸುವುದು

29. ಕೆಲವು ಚುನಾವಣೆಗಳ ಸಂದರ್ಭದಲ್ಲಿ ವಿಶೇಷ ವ್ಯವಸ್ಥೆಗಳು


## ಭಾಗ – IV ಎ

## ರಾಜಕೀಯ ಪಕ್ಷಗಳ ನೋಂದಣಿ


29ಎ. ಸಂಘಗಳು ಮತ್ತು ನಿಕಾಯಗಳನ್ನು ರಾಜಕೀಯ ಪಕ್ಷಗಳೆಂದು ಚುನಾವಣಾ ಆಯೋಗದಲ್ಲಿ ನೋಂದಾಯಿಸುವುದು

29ಬಿ. ರಾಜಕೀಯ ಪಕ್ಷಗಳು ವಂತಿಗೆಯನ್ನು ಸ್ವೀಕರಿಸುವ ಹಕ್ಕು

29ಸಿ. ರಾಜಕೀಯ ಪಕ್ಷಗಳು ಸ್ವೀಕರಿಸಿದ ದೇಣಿಗೆಯ ಘೋಷಣೆ


## ಭಾಗ – V

## ಚುನಾವಣೆಗಳನ್ನು ನಡೆಸುವುದು

### ಅಧ್ಯಾಯ I - ಅಭ್ಯರ್ಥಿಗಳ ನಾಮ ನಿರ್ದೇಶನ


30. ನಾಮನಿರ್ದೇಶನ ಪತ್ರಗಳು, ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು

31. ಚುನಾವಣೆಯ ಬಗ್ಗೆ ಸಾರ್ವಜನಿಕ ನೋಟೀಸು

32. ಚುನಾವಣೆಗಾಗಿ ಅಭ್ಯರ್ಥಿಗಳ ನಾಮನಿರ್ದೇಶನ

33. ನಾಮ ನಿರ್ದೇಶನ ಪತ್ರವನ್ನು ಸಲ್ಲಿಸುವುದು ಮತ್ತು ಕಾನೂನು ಮಾನ್ಯ ನಾಮನಿರ್ದೇಶನ ಪತ್ರಕ್ಕಾಗಿನ ಅಗತ್ಯತೆಗಳು

33ಎ. ಮಾಹಿತಿ ಪಡೆಯುವ ಹಕ್ಕು

33ಬಿ. ಅಭ್ಯರ್ಥಿಯು ಅಧಿನಿಯಮ ಮತ್ತು ನಿಯಮಗಳ ಮೇರೆಗೆ ಮಾತ್ರ ಮಾಹಿತಿಯನ್ನು ಒದಗಿಸುವುದು

34. ಠೇವಣಿಗಳು

35. ನಾಮನಿರ್ದೇಶನ ಪತ್ರಗಳು ಮತ್ತು ಅವುಗಳ ಪರಿಶೀಲನೆಯ ಕಾಲ ಮತ್ತು ಸ್ಥಳದ ಬಗ್ಗೆ ನೋಟೀಸು

36. ನಾಮನಿರ್ದೇಶನ ಪತ್ರಗಳ ಪರಿಶೀಲನೆ

37. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು

38. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ

39. ಇತರ ಚುನಾವಣೆಗಳಲ್ಲಿ ಅಭ್ಯರ್ಥಿಗಳ ನಾಮ ನಿರ್ದೇಶನ

39ಎ. ಸಮಯದ ನ್ಯಾಯ ಸಮ್ಮತ ಭಾಗದ ಹಂಚಿಕೆ

## ಅಧ್ಯಾಯ II – ಅಭ್ಯರ್ಥಿಗಳು ಮತ್ತು ಅವರ ಏಜೆಂಟರು

40. ಚುನಾವಣಾ ಏಜೆಂಟರು

41. ಚುನಾವಣಾ ಏಜೆಂಟನಾಗಿರಲು ಅನರ್ಹತೆ

42. ಚುನಾವಣಾ ಏಜೆಂಟನ ನೇಮಕದ ರದ್ದಿಯಾತಿ ಅಥವಾ ಅವನ ಮರಣ

43–44. [ನಿರಸನಗೊಳಿಸಲಾಗಿದೆ]

45. ಚುನಾವಣಾ ಏಜೆಂಟರ ಪ್ರಕಾರ್ಯಗಳು

46. ಮತದಾನ ಏಜೆಂಟರ ನೇಮಕ

47. ಎಣಿಕೆ ಏಜೆಂಟರ ನೇಮಕ

48. ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನ ನೇಮಕದ ರದ್ದಿಯಾತಿ ಅಥವಾ ಅವನ ಮರಣ

49. ಮತದಾನ ಏಜೆಂಟರ ಮತ್ತು ಎಣಿಕೆ ಏಜೆಂಟರ ಪ್ರಕಾರ್ಯಗಳು

50. ಸ್ಪರ್ಧಿಸಿರುವ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತದಾನ ಕೇಂದ್ರಗಳಲ್ಲಿ ಹಾಜರಿರುವುದು, ಮತ್ತು ಅವನು ಮತದಾನ ಏಜೆಂಟನ ಅಥವಾ ಎಣಿಕೆ ಏಜೆಂಟನ ಪ್ರಕಾರ್ಯಗಳನ್ನು ನಿರ್ವಹಿಸುವುದು

51. ಮತದಾನ ಅಥವಾ ಎಣಿಕೆ ಏಜೆಂಟರ ಗೈರುಹಾಜರಿ

## ಅಧ್ಯಾಯ III – ಚುನಾವಣೆಗಳಲ್ಲಿ ಸಾಮಾನ್ಯ ಪ್ರಕ್ರಿಯೆ

52. ಮತದಾನಕ್ಕೆ ಮುಂಚೆ ಮನ್ನಣೆ ಪಡೆದ ರಾಜಕೀಯ ಪಕ್ಷದ ಅಭ್ಯರ್ಥಿಯ ಮರಣ

53. ಸ್ಪರ್ಧೆ ಇರುವ ಮತ್ತು ಸ್ಪರ್ಧೆ ಇಲ್ಲದ ಚುನಾವಣೆಗಳಲ್ಲಿ ಪ್ರಕ್ರಿಯೆ

54. [ನಿರಸನಗೊಳಿಸಲಾಗಿದೆ]

55. ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸದಸ್ಯರು ಆ ಜಾತಿಗಳು ಅಥವಾ ಬುಡಕಟ್ಟುಗಳಿಗಾಗಿ ಮೀಸಲಿರಿಸದ ಸ್ಥಾನಗಳನ್ನು ಹೊಂದಲು ಅರ್ಹತೆ

55ಎ. [ನಿರಸನಗೊಳಿಸಲಾಗಿದೆ]

## ಅಧ್ಯಾಯ IV – ಮತದಾನ

56. ಮತದಾನಕ್ಕಾಗಿ ಕಾಲವನ್ನು ನಿಗದಿಪಡಿಸುವುದು

57. ತುರ್ತು ಪರಿಸ್ಥಿತಿಗಳಲ್ಲಿ ಮತದಾನದ ಮುಂದೂಡಿಕೆ

58. ಮತಪೆಟ್ಟಿಗೆಗಳ ನಾಶ, ಇತ್ಯಾದಿ ಸಂದರ್ಭದಲ್ಲಿ ಹೊಸ ಮತದಾನ

58ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಆಧಾರದ ಮೇಲೆ ಮತದಾನವನ್ನು ಮುಂದೂಡುವುದು ಅಥವಾ ಚುನಾವಣೆಯನ್ನು ಪ್ರತ್ಯಾದೇಶಿಸುವುದು

59. ಚುನಾವಣೆಗಳಲ್ಲಿ ಮತ ನೀಡುವ ವಿಧಾನ

60. ಕೆಲವು ವರ್ಗಗಳ ವ್ಯಕ್ತಿಗಳು ಮತದಾನ ಮಾಡುವುದಕ್ಕೆ ವಿಶೇಷ ಕಾರ್ಯವಿಧಾನ

61. ಮತದಾರರಂತೆ ನಟಿಸುವವರನ್ನು ತಡೆಗಟ್ಟುವುದಕ್ಕಾಗಿ ವಿಶೇಷ ಪ್ರಕ್ರಿಯೆ

61ಎ. ಚುನಾವಣೆಗಳಲ್ಲಿ ಮತದಾನ ಯಂತ್ರಗಳು

62. ಮತ ನೀಡುವ ಹಕ್ಕು

63. [ನಿರಸನಗೊಳಿಸಲಾಗಿದೆ]

## ಅಧ್ಯಾಯ V – ಮತಗಳ ಎಣಿಕೆ

64. ಮತಗಳ ಎಣಿಕೆ

64ಎ. ಎಣಿಕೆ ಸಮಯದಲ್ಲಿ ಮತಪತ್ರಗಳ ನಾಶ, ನಷ್ಟ, ಇತ್ಯಾದಿ

65. ಸಮಾನ ಮತಗಳು

66. ಫಲಿತಾಂಶಗಳ ಘೋಷಣೆ

67. ಫಲಿತಾಂಶದ ವರದಿ

67ಎ. ಅಭ್ಯರ್ಥಿಯು ಆಯ್ಕೆಯಾದ ದಿನಾಂಕ

## ಅಧ್ಯಾಯ VI – ಬಹುಪದೀಯ ಚುನಾವಣೆ

68. ಸಂಸತ್ತಿನ ಉಭಯ ಸದನಗಳಿಗೆ ಆಯ್ಕೆಯಾದಾಗ ಸ್ಥಾನಗಳನ್ನು ತೆರವು ಮಾಡುವುದು

69. ಈಗಾಗಲೇ ಒಂದು ಸದನದ ಸದಸ್ಯರಾಗಿರುವ ವ್ಯಕ್ತಿಗಳು ಸಂಸತ್ತಿನ ಇನ್ನೊಂದು ಸದನಕ್ಕೆ ಚುನಾಯಿತರಾದಾಗ ಸ್ಥಾನಗಳನ್ನು ತೆರವು ಮಾಡುವುದು

70. ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಎರಡು ಸದನಗಳ ಪೈಕಿ ಯಾವುದೇ ಸದನದಲ್ಲಿನ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಗೊಳ್ಳುವುದು

## ಅಧ್ಯಾಯ VII – ಚುನಾವಣಾ ಫಲಿತಾಂಶಗಳು ಮತ್ತು ನಾಮನಿರ್ದೇಶನಗಳ ಪ್ರಕಟಣೆ

71. ರಾಜ್ಯಸಭೆಯ ಚುನಾವಣೆಗಳ ಫಲಿತಾಂಶಗಳು ಮತ್ತು ರಾಷ್ಟ್ರಪತಿಯು ನಾಮನಿರ್ದೇಶನ ಮಾಡಿದ ವ್ಯಕ್ತಿಗಳ ಹೆಸರುಗಳ ಪ್ರಕಟಣೆ

72. [ನಿರಸನಗೊಳಿಸಲಾಗಿದೆ]

73. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಸಾರ್ವತ್ರಿಕ ಚುನಾವಣಾ ಫಲಿತಾಂಶಗಳ ಪ್ರಕಟಣೆ

73ಎ. ಕೆಲವು ಚುನಾವಣೆಗಳ ಬಗ್ಗೆ ವಿಶೇಷ ಉಪಬಂಧ

74. ರಾಜ್ಯ ವಿಧಾನಪರಿಷತ್ತುಗಳ ಚುನಾವಣೆಗಳ ಫಲಿತಾಂಶಗಳನ್ನು ಮತ್ತು ಅಂಥ ಪರಿಷತ್ತುಗಳಿಗೆ ನಾಮನಿರ್ದೇಶಿತರಾದ ವ್ಯಕ್ತಿಗಳ ಹೆಸರುಗಳನ್ನು ಪ್ರಕಟಿಸುವುದು

## ಅಧ್ಯಾಯ VIIಎ – ಆಸ್ತಿಗಳ ಮತ್ತು ಹೊಣೆಗಳ ಘೋಷಣೆ

75ಎ. ಆಸ್ತಿಗಳ ಮತ್ತು ಹೊಣೆಗಳ ಘೋಷಣೆ

## ಅಧ್ಯಾಯ VIII – ಚುನಾವಣಾ ವೆಚ್ಚಗಳು

76. ಅಧ್ಯಾಯದ ಅನ್ವಯ

77. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳು ಮತ್ತು ಅದರ ಪರಮಾವಧಿ

78. ಜಿಲ್ಲಾ ಚುನಾವಣಾ ಅಧಿಕಾರಿಯ ಬಳಿ ಲೆಕ್ಕಪತ್ರವನ್ನು ದಾಖಲು ಮಾಡುವುದು

78ಎ. ಮತದಾರ ಪಟ್ಟಿಗಳ ಪ್ರತಿಗಳ ಉಚಿತ ಪೂರೈಕೆ

78ಬಿ. ಅಭ್ಯರ್ಥಿಗಳಿಗೆ ಕೆಲವು ಬಾಬುಗಳನ್ನು ಒದಗಿಸುವುದು, ಇತ್ಯಾದಿ

# ಭಾಗ – VI

# ಚುನಾವಣೆಗಳಿಗೆ ಸಂಬಂಧಿಸಿದ ವಿವಾದಗಳು

## ಅಧ್ಯಾಯ I – ಅರ್ಥ ವಿವರಣೆ

79. ಪರಿಭಾಷೆಗಳು

## ಅಧ್ಯಾಯ II – ಚುನಾವಣಾ ಆಯೋಗಕ್ಕೆ ಚುನಾವಣಾ ಅರ್ಜಿಗಳನ್ನು ಸಲ್ಲಿಸುವುದು

80. ಚುನಾವಣಾ ಅರ್ಜಿಗಳು

80ಎ. ಉಚ್ಚ ನ್ಯಾಯಾಲಯವು ಚುನಾವಣಾ ಅರ್ಜಿಗಳನ್ನು ಅಧಿವಿಚಾರಣೆ ಮಾಡುವುದು

81. ಅರ್ಜಿಗಳನ್ನು ಸಲ್ಲಿಸುವುದು

82. ಅರ್ಜಿಯ ಪಕ್ಷಕಾರರು

83. ಅರ್ಜಿಯ ಒಳಾಂಶಗಳು

84. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ

85. [ನಿರಸನಗೊಳಿಸಲಾಗಿದೆ]

## ಅಧ್ಯಾಯ III – ಚುನಾವಣಾ ಅರ್ಜಿಗಳ ಅಧಿವಿಚಾರಣೆ

86. ಚುನಾವಣಾ ಅರ್ಜಿಗಳ ಅಧಿವಿಚಾರಣೆ

87. ಉಚ್ಚ ನ್ಯಾಯಾಲಯದಲ್ಲಿ ಪ್ರಕ್ರಿಯೆ

88-92. [ನಿರಸಿತ]

93. ದಸ್ತಾವೇಜೀಯ ಸಾಕ್ಷ್ಯ

94. ಮತದಾನದ ರಹಸ್ಯವನ್ನು ಉಲ್ಲಂಘಿಸದಿರುವುದು

95. ಅಪರಾಧದಲ್ಲಿ ಸಿಕ್ಕಿಸುವ ಪ್ರಶ್ನೆಗಳನ್ನು ಉತ್ತರಿಸುವುದು ಮತ್ತು ನಷ್ಟಭರ್ತಿ ಪ್ರಮಾಣ ಪತ್ರ

96. ಸಾಕ್ಷಿದಾರರ ವೆಚ್ಚಗಳು

97. ಸ್ಥಾನವನ್ನು ಕ್ಲೇಮು ಮಾಡಿದಾಗ ಪ್ರತ್ಯಾರೋಪ

98. ಉಚ್ಚ ನ್ಯಾಯಾಲಯದ ತೀರ್ಮಾನ

99. ಉಚ್ಚ ನ್ಯಾಯಾಲಯವು ಮಾಡಬೇಕಾದ ಇತರೆ ಆದೇಶಗಳು

100. ಚುನಾವಣೆಯನ್ನು ಶೂನ್ಯವೆಂದು ಘೋಷಿಸಲು ಆಧಾರಗಳು

101. ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದ ಆಧಾರಗಳು

102. ಸಮಾನ ಮತಗಳ ಸಂದರ್ಭದಲ್ಲಿ ಪ್ರಕ್ರಿಯೆ

103. ಉಚ್ಚ ನ್ಯಾಯಾಲಯದ ಆದೇಶಗಳನ್ನು ತಿಳಿಸುವುದು

104. [ನಿರಸನಗೊಳಿಸಲಾಗಿದೆ]

105. [ನಿರಸನಗೊಳಿಸಲಾಗಿದೆ]

106. ಸಮುಚಿತ ಪ್ರಾಧಿಕಾರ ಮುಂತಾದವುಗಳಿಗೆ ಆದೇಶದ ರವಾನೆ ಮತ್ತು ಅದರ ಪ್ರಕಟಣೆ

107. ಉಚ್ಚ ನ್ಯಾಯಾಲಯದ ಆದೇಶಗಳ ಜಾರಿ

**ಅಧ್ಯಾಯ IV – ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವಿಕೆ ಮತ್ತು ಕೊನೆಗೊಳ್ಳುವಿಕೆ**

108. [ನಿರಸನಗೊಳಿಸಲಾಗಿದೆ]

109. ಚುನಾವಣಾ ಅರ್ಜಿಗಳ ಹಿಂತೆಗೆದುಕೊಳ್ಳುವಿಕೆ

110. ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಪ್ರಕ್ರಿಯೆ

111. ಉಚ್ಚ ನ್ಯಾಯಾಲಯವು ಹಿಂತೆಗೆದುಕೊಳ್ಳುವಿಕೆಯನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡುವುದು

112. ಚುನಾವಣಾ ಅರ್ಜಿಗಳ ಕೊನೆಗೊಳಿಸುವಿಕೆ

113–115. [ನಿರಸನಗೊಳಿಸಲಾಗಿದೆ]

116. ಪ್ರತ್ಯರ್ಜಿದಾರನ ಮರಣದ ತರುವಾಯ ಕೊನೆಗೊಳ್ಳುವಿಕೆ ಅಥವಾ ಪ್ರತ್ಯಾಯೋಜನೆ

**ಅಧ್ಯಾಯ IV ಎ – ಅಪೀಲುಗಳು**

116ಎ. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲುಗಳು

116ಬಿ. ಉಚ್ಚ ನ್ಯಾಯಾಲಯದ ಆದೇಶದ ಜಾರಿಯ ತಡೆ

116ಸಿ. ಅಪೀಲಿನ ಪ್ರಕ್ರಿಯೆ

**ಅಧ್ಯಾಯ V – ಖರ್ಚುಗಳು ಮತ್ತು ಖರ್ಚುಗಳಿಗಾಗಿ ಭದ್ರತೆ**

117. ಖರ್ಚುಗಳಿಗಾಗಿ ಭದ್ರತೆ

118. ಖರ್ಚುಗಳಿಗಾಗಿ ಪ್ರತ್ಯರ್ಜಿದಾರನಿಂದ ಭದ್ರತೆ

119. ಖರ್ಚುಗಳು

120. [ನಿರಸನಗೊಳಿಸಲಾಗಿದೆ]

121. ಭದ್ರತಾ ಠೇವಣಿಗಳಿಂದ ಖರ್ಚುಗಳ ಸಂದಾಯ ಮತ್ತು ಅಂಥ ಠೇವಣಿಗಳ ವಾಪಸಾತಿ

122. ಖರ್ಚುಗಳ ಬಗೆಗಿನ ಆದೇಶಗಳ ಅಮಲ್ಜಾರಿ

**ಭಾಗ – VII**

**ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಪರಾಧಗಳು**

**ಅಧ್ಯಾಯ I – ಭ್ರಷ್ಟಾಚಾರಗಳು**

123. ಭ್ರಷ್ಟಾಚಾರಗಳು

124. [ನಿರಸನಗೊಳಿಸಲಾಗಿದೆ]

**ಅಧ್ಯಾಯ III – ಚುನಾವಣಾ ಅಪರಾಧಗಳು**

125. ಚುನಾವಣಾ ಸಂಬಂಧದಲ್ಲಿ ವರ್ಗಗಳ ನಡುವೆ ಹಗೆತನವನ್ನು ಬೆಳೆಸುವುದು

125ಎ. ಸುಳ್ಳು ಶಪಥಪತ್ರ ಇತ್ಯಾದಿಗಳನ್ನು ಸಲ್ಲಿಸಿದ್ದಕ್ಕಾಗಿ ದಂಡ

126. ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಸಾರ್ವಜನಿಕ ಸಭೆಗಳ ನಿಷೇಧ

127. ಚುನಾವಣಾ ಸಭೆಗಳಲ್ಲಿ ಗಲಭೆ

127ಎ. ಕಿರುಹೊತ್ತಿಗೆಗಳು, ಭಿತ್ತಿಪತ್ರಗಳು, ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧಗಳು

128. ಮತದಾನದ ರಹಸ್ಯವನ್ನು ಕಾಪಾಡುವುದು

129. ಅಧಿಕಾರಿಗಳು, ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯ ನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು

130. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಮತ ಕೋರಿಕೆಯ ನಿಷೇಧ

131. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ

132. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ

132ಎ. ಮತದಾನದ ಪ್ರಕ್ರಿಯೆಯನ್ನು ಪಾಲಿಸದಿರುವುದಕ್ಕೆ ದಂಡ

133. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನು ಬಾಹಿರವಾಗಿ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಅಥವಾ ದೊರಕಿಸಿಕೊಳ್ಳುವುದಕ್ಕೆ ದಂಡ

134. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು

134ಎ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಎಂದು ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರಿಗೆ ದಂಡ

134ಬಿ. ಮತದಾನ ಕೇಂದ್ರಕ್ಕೆ ಅಥವಾ ಅದರ ಸಮೀಪಕ್ಕೆ ಆಯುಧ ಸಮೇತ ಹೋಗುವುದರ ನಿಷೇಧ

135. ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ

135ಎ. ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ

135ಬಿ. ಮತದಾನದ ದಿನದಂದು ನೌಕರರಿಗೆ ಸಂಬಳಸಹಿತ ರಜೆ ನೀಡುವುದು

135ಸಿ. ಮತದಾನದ ದಿನದಂದು ಮದ್ಯವನ್ನು ಮಾರಾಟ ಮಾಡದಿರುವುದು, ನೀಡದಿರುವುದು ಅಥವಾ ವಿತರಿಸದಿರುವುದು

136. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು

137. [ನಿರಸನಗೊಳಿಸಲಾಗಿದೆ]

138. [ನಿರಸನಗೊಳಿಸಲಾಗಿದೆ]

## ಭಾಗ – VIII

## ಅನರ್ಹತೆಗಳು

139–145 (ಅಧ್ಯಾಯಗಳು I ರಿಂದ III – ಇವುಗಳನ್ನು ನಿರಸನಗೊಳಿಸಲಾಗಿದೆ)

### ಅಧ್ಯಾಯ IV – ಸದಸ್ಯರ ಅನರ್ಹತೆಗಳ ಬಗ್ಗೆ ವಿಚಾರಣೆಗಳನ್ನು ನಡೆಸುವ ಸಂಬಂಧದಲ್ಲಿ ಚುನಾವಣಾ ಆಯೋಗದ ಅಧಿಕಾರಗಳು

146. ಚುನಾವಣಾ ಆಯೋಗದ ಅಧಿಕಾರಗಳು

146ಎ. ಚುನಾವಣಾ ಆಯೋಗಕ್ಕೆ ವ್ಯಕ್ತಿಗಳು ನೀಡಿದ ಹೇಳಿಕೆಗಳು

146ಬಿ. ಚುನಾವಣಾ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ

146ಸಿ. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ

## ಭಾಗ - IX

## ಉಪ ಚುನಾವಣೆಗಳು

147. ರಾಜ್ಯಸಭೆಯಲ್ಲಿ ಆಕಸ್ಮಿಕ ಖಾಲಿ ಸ್ಥಾನಗಳು

148. [ನಿರಸನಗೊಳಿಸಲಾಗಿದೆ]

149. ಲೋಕಸಭೆಯಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು

150. ರಾಜ್ಯ ವಿಧಾನಸಭೆಗಳಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು

151. ರಾಜ್ಯ ವಿಧಾನಪರಿಷತ್ತಿನಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು

151ಎ. 147, 149,150 ಮತ್ತು 151 ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಕಾಲ ಪರಿಮಿತಿ

## ಭಾಗ - X

## ಸಂಕೀರ್ಣ

152. ಸಂಬಂಧಪಟ್ಟ ಚುನಾವಣಾಧಿಕಾರಿಗಳು ರಾಜ್ಯ ವಿಧಾನ ಸಭೆಗಳ ಮತ್ತು ಚುನಾಯಕ ಗಣಗಳ ಸದಸ್ಯರ ಪಟ್ಟಿಯನ್ನು ಇಟ್ಟುಕೊಂಡು ಬರುವುದು

153. ಚುನಾವಣೆಯನ್ನು ಪೂರ್ಣಗೊಳಿಸಲು ಸಮಯದ ವಿಸ್ತರಣೆ

154. ರಾಜ್ಯಸಭೆಯ ಸದಸ್ಯರ ಪದಾವಧಿ

155. ರಾಜ್ಯಸಭೆಯ ಸದಸ್ಯರ ಪದಾವಧಿಯ ಪ್ರಾರಂಭ

156. ರಾಜ್ಯ ವಿಧಾನಪರಿಷತ್ತಿನ ಸದಸ್ಯರ ಪದಾವಧಿ

157. ವಿಧಾನಪರಿಷತ್ತುಗಳ ಸದಸ್ಯರ ಪದಾವಧಿಯ ಪ್ರಾರಂಭ

158. ಅಭ್ಯರ್ಥಿಯ ಠೇವಣಿಯ ವಾಪಸಾತಿ ಅಥವಾ ಮುಟ್ಟುಗೋಲು

159. ಚುನಾವಣಾ ಕೆಲಸಕ್ಕಾಗಿ ನಿರ್ದಿಷ್ಟ ಪ್ರಾಧಿಕಾರಗಳ ಸಿಬ್ಬಂದಿಯನ್ನು ಒದಗಿಸುವುದು

160. ಚುನಾವಣಾ ಉದ್ದೇಶಗಳಿಗಾಗಿ ಸ್ಥಳಾವಕಾಶಗಳು, ವಾಹನಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು

161. ನಷ್ಟ ಪರಿಹಾರದ ಸಂದಾಯ

162. ಮಾಹಿತಿಯನ್ನು ಪಡೆಯುವ ಅಧಿಕಾರ

163. ಸ್ಥಳಾವರಣಗಳು, ಮುಂತಾದವುಗಳನ್ನು ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರಗಳು

164. ಕಡ್ಡಾಯವಾಗಿ ಕೋರಿದ ಸ್ಥಳಾವರಣಗಳಿಂದ ಹೊರಹಾಕುವಿಕೆ

165. ಸ್ಥಳಾವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡುವುದು

166. ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಪ್ರಕಾರ್ಯಗಳ ಪ್ರತ್ಯಾಯೋಜನೆ

167. ಕಡ್ಡಾಯ ಕೋರಿಕೆಗೆ ಸಂಬಂಧಿಸಿದ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ

168. [ನಿರಸನಗೊಳಿಸಲಾಗಿದೆ]

## ಭಾಗ - XI

## ಸಾಮಾನ್ಯ

169. ನಿಯಮ ರಚನಾಧಿಕಾರ

170. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ

171. [ನಿರಸನಗೊಳಿಸಲಾಗಿದೆ]

# ಜನತಾ ಪ್ರಾತಿನಿಧ್ಯ ಅಧಿನಿಯಮ, 1951

(1951ರ ಅಧಿನಿಯಮ ಸಂಖ್ಯೆ 43)

[ಜುಲೈ 17, 1951]

ಸಂಸತ್ತಿನ ಸದನಗಳಿಗೆ ಮತ್ತು ಪ್ರತಿಯೊಂದು ರಾಜ್ಯದ ವಿಧಾನ ಮಂಡಲದ ಸದನ ಅಥವಾ ಸದನಗಳಿಗೆ ಚುನಾವಣೆಗಳನ್ನು ನಡೆಸುವುದು, ಆ ಸದನಗಳ ಸದಸ್ಯತ್ವದ ಅರ್ಹತೆಗಳು ಮತ್ತು ಅನರ್ಹತೆಗಳು, ಅಂಥ ಚುನಾವಣೆಗಳಲ್ಲಿ ಅಥವಾ ಆ ಸಂಬಂಧದಲ್ಲಿನ ಭ್ರಷ್ಟ ಆಚರಣೆಗಳು ಮತ್ತು ಇತರ ಅಪರಾಧಗಳು ಹಾಗೂ ಅಂಥ ಚುನಾವಣೆಗಳಿಂದ ಅಥವಾ ಆ ಸಂಬಂಧದಲ್ಲಿ ಉದ್ಭವಿಸುವ ಸಂದೇಹಗಳ ಮತ್ತು ವಿವಾದಗಳ ತೀರ್ಮಾನ – ಇವುಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಅದು ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು: –

## ಭಾಗ – I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು :–** ಈ ಅಧಿನಿಯಮವನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ಎಂದು ಕರೆಯತಕ್ಕುದು.

**2. ಅರ್ಥ ವಿವರಣೆ :–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 2ನೇ ಪ್ರಕರಣ ಅಥವಾ 27ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಪರಿಭಾಷಿಸಿದ್ದು, ಆದರೆ ಈ ಅಧಿನಿಯಮದಲ್ಲಿ ಪರಿಭಾಷಿಸಿರದ ಪ್ರತಿಯೊಂದು ಪದಾವಳಿಯು ಆ ಅಧಿನಿಯಮದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕುದು;

(ಬಿ) "ಸಮುಚಿತ ಪ್ರಾಧಿಕಾರ" ಎಂದರೆ ಲೋಕಸಭೆಯ ಅಥವಾ ರಾಜ್ಯಸಭೆಯ ಚುನಾವಣೆಯ ಸಂಬಂಧದಲ್ಲಿ ಕೇಂದ್ರ ಸರ್ಕಾರ, ಮತ್ತು ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಚುನಾವಣೆಯ ಸಂಬಂಧದಲ್ಲಿ ರಾಜ್ಯ ಸರ್ಕಾರ;

(ಬಿಬಿ) "ಮುಖ್ಯ ಚುನಾವಣಾಧಿಕಾರಿ" ಎಂದರೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 13ಎ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿ;

(ಸಿ) "ಭ್ರಷ್ಟ ಆಚರಣೆ" ಎಂದರೆ 123ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಆಚರಣೆ;

(ಸಿಸಿ) "ಜಿಲ್ಲಾ ಚುನಾವಣಾ ಅಧಿಕಾರಿ" ಎಂದರೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 13ಎಎ ಪ್ರಕರಣದ ಮೇರೆಗೆ ಹೆಸರಿಸಲಾದ ಅಥವಾ ನಾಮನಿರ್ದೇಶಿತನಾದ ಅಧಿಕಾರಿ;

(ಡಿ) "ಚುನಾವಣೆ" ಎಂದರೆ ಸಂಸತ್ತಿನ ಯಾವುದೇ ಸದನದಲ್ಲಿನ ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಯಾವುದೇ ರಾಜ್ಯದ ವಿಧಾನ ಮಂಡಲದ ಸದನದಲ್ಲಿನ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ನಡೆಸುವ ಚುನಾವಣೆ;

(ಇ) ಚುನಾವಣಾ ಕ್ಷೇತ್ರದ ಸಂಬಂಧದಲ್ಲಿ "ಮತದಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನಮೂದಿತವಾಗಿರುವ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 16ನೇ ಪ್ರಕರಣದಲ್ಲಿ ಹೇಳಿದ ಯಾವುದೇ ಅನರ್ಹತೆಗೆ ಒಳಪಡದ ವ್ಯಕ್ತಿ;

(ಎಫ್) "ರಾಜಕೀಯ ಪಕ್ಷ" ಎಂದರೆ 29ಎ ಪ್ರಕರಣದ ಮೇರೆಗೆ ರಾಜಕೀಯ ಪಕ್ಷವೆಂದು ಚುನಾವಣಾ ಆಯೋಗದಲ್ಲಿ ನೋಂದಾಯಿತವಾದ ಒಂದು ಸಂಘ ಅಥವಾ ಭಾರತದ ವ್ಯಕ್ತಿಗತ ನಾಗರಿಕ ನಿಕಾಯ;

(ಜಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ಸಾರ್ವಜನಿಕ ರಜಾ ದಿನ" ಎಂದರೆ ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26)ರ 25ನೇ ಪ್ರಕರಣದ ಉದ್ದೇಶಗಳಿಗಾಗಿ ಸಾರ್ವಜನಿಕ ರಜಾ ದಿನವಾಗಿರುವ ಯಾವುದೇ ದಿನ;

(ಐ) ತನ್ನ ಹೆಸರನ್ನು ಬರೆಯಲು ಅಸಮರ್ಥನಾದ ವ್ಯಕ್ತಿಯ ಸಂಬಂಧದಲ್ಲಿ "ಸಹಿ" ಎಂದರೆ ನಿಯಮಿಸಬಹುದಾದ ರೀತಿಯಲ್ಲಿ ಅಧಿಪ್ರಮಾಣಿಸುವುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, ಸಂಸದೀಯ ಚುನಾವಣಾ ಕ್ಷೇತ್ರ, ವಿಧಾನಸಭಾ ಚುನಾವಣಾ ಕ್ಷೇತ್ರ, ಪರಿಷತ್ ಚುನಾವಣಾ ಕ್ಷೇತ್ರ, ಸ್ಥಳೀಯ ಪ್ರಾಧಿಕಾರಗಳ ಚುನಾವಣಾ ಕ್ಷೇತ್ರ, ಪದವೀಧರರ ಚುನಾವಣಾ ಕ್ಷೇತ್ರ ಮತ್ತು ಶಿಕ್ಷಕರ ಚುನಾವಣಾ ಕ್ಷೇತ್ರ ಇವುಗಳನ್ನು ಬೇರೆ ಬೇರೆ ವರ್ಗದ ಚುನಾವಣಾ ಕ್ಷೇತ್ರವೆಂದು ಪರಿಗಣಿಸತಕ್ಕುದು.

(3) ಈ ಅಧಿನಿಯಮದ ಮೇರೆಗಿನ ಯಾವುದೇ ಅಗತ್ಯತೆಗಳ ಅಂದರೆ ಯಾವುದೇ ಪ್ರಾಧಿಕಾರವು ಹೊರಡಿಸಿದ ಅಥವಾ ಮಾಡಿದ ಅಧಿಸೂಚನೆ, ಆದೇಶ, ನಿಯಮ, ಘೋಷಣೆ, ನೋಟೀಸು ಅಥವಾ ಪಟ್ಟಿಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು. ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಉಪಬಂಧಿತವಾದ ಹೊರತು, ಅಂಥ ಅಧಿಸೂಚನೆ, ಆದೇಶ, ನಿಯಮ, ಘೋಷಣೆ, ನೋಟೀಸು ಅಥವಾ ಪಟ್ಟಿ ಇವುಗಳನ್ನು ಅಗತ್ಯತೆಯೆಂದು ಅರ್ಥೈಸಬೇಕು. ಆ ಅಧಿಸೂಚನೆ, ಆದೇಶ, ನಿಯಮ, ಘೋಷಣೆ, ನೋಟೀಸು ಅಥವಾ ಪಟ್ಟಿ ಇವುಗಳನ್ನು ,-

(ಎ) ಕೇಂದ್ರ ಸರ್ಕಾರವು ಹೊರಡಿಸಿರುವಲ್ಲಿ ಅಥವಾ ಮಾಡಿರುವಲ್ಲಿ, ಭಾರತದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು ;

(ಬಿ) ರಾಜ್ಯ ಸರ್ಕಾರವು ಹೊರಡಿಸಿರುವಲ್ಲಿ ಅಥವಾ ಮಾಡಿರುವಲ್ಲಿ, ರಾಜ್ಯದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು ; ಮತ್ತು

(ಸಿ) ಯಾವುದೇ ಇತರ ಪ್ರಾಧಿಕಾರವು ಹೊರಡಿಸಿರುವಲ್ಲಿ ಅಥವಾ ಮಾಡಿರುವಲ್ಲಿ, ಅದು ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಚುನಾವಣೆಗೆ ಅಥವಾ ಸದಸ್ಯತ್ವಕ್ಕೆ ಸಂಬಂಧಿಸಿದ್ದರೆ ಅದನ್ನು ಭಾರತದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು ಮತ್ತು ಅದು ರಾಜ್ಯದ ವಿಧಾನ ಮಂಡಲಕ್ಕೆ ಅಥವಾ ವಿಧಾನ ಮಂಡಲದ ಉಭಯ ಸದನಗಳ ಪೈಕಿ ಯಾವುದೇ ಸದನದ ಚುನಾವಣೆಗೆ ಅಥವಾ ಸದಸ್ಯತ್ವಕ್ಕೆ ಸಂಬಂಧಿಸಿದ್ದರೆ ಅದನ್ನು ರಾಜ್ಯದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(4) ಈ ಅಧಿನಿಯಮದ ಯಾವುವೇ ಉಪಬಂಧಗಳ ಮೇರೆಗೆ, ಏನನ್ನಾದರೂ ನಿಯಮಿಸಬೇಕಾಗಿರುವಲ್ಲಿ ಬೇರೆ ಬೇರೆ ವಿಷಯಗಳು ಅಥವಾ ವಿಷಯಗಳ ವರ್ಗಗಳಿಗಾಗಿ ಬೇರೆ ಬೇರೆ ಉಪಬಂಧಗಳನ್ನು ರಚಿಸಬಹುದು.

(5) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಕಾನೂನಿಗೆ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವನ್ನು ಆ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಆ ಕಾನೂನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

## ಭಾಗ – II

## ಅರ್ಹತೆಗಳು ಮತ್ತು ಅನರ್ಹತೆಗಳು

### ಅಧ್ಯಾಯ I – ಸಂಸತ್ ಸದಸ್ಯತ್ವದ ಅರ್ಹತೆಗಳು

**3. ರಾಜ್ಯಸಭಾ ಸದಸ್ಯತ್ವಕ್ಕಾಗಿ ಅರ್ಹತೆಗಳು :-** ಒಬ್ಬ ವ್ಯಕ್ತಿಯು ರಾಜ್ಯಸಭೆಯಲ್ಲಿ ಯಾವುದೇ ರಾಜ್ಯದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾಗಲು ಭಾರತದ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು ಅರ್ಹನಾಗತಕ್ಕುದಲ್ಲ.

**4. ಲೋಕಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು :-** ಒಬ್ಬ ವ್ಯಕ್ತಿಯು,-

(ಎ) ಯಾವುದೇ ರಾಜ್ಯದಲ್ಲಿ ಅನುಸೂಚಿತ ಜಾತಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ, ಆ ರಾಜ್ಯದ ಅಥವಾ ಯಾವುದೇ ಇತರ ರಾಜ್ಯದ ಯಾವುದೇ ಅನುಸೂಚಿತ ಜಾತಿಯ ಸದಸ್ಯನಾಗಿರುವ ಮತ್ತು ಯಾವುದೇ ಸಂಸದೀಯ ಚುನಾವಣಾ ಕ್ಷೇತ್ರದಲ್ಲಿ ಮತದಾರನಾಗಿರುವ ಹೊರತು;

(ಬಿ) ಯಾವುದೇ ರಾಜ್ಯದಲ್ಲಿ (ಅಸ್ಸಾಂನ ಸ್ವಾಯತ್ತ ಜಿಲ್ಲೆಗಳನ್ನು ಹೊರತುಪಡಿಸಿ) ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ ಅವನು ಈ ರಾಜ್ಯದಲ್ಲಾಗಲಿ ಅಥವಾ ಯಾವುದೇ ಇತರ ರಾಜ್ಯದಲ್ಲಾಗಲಿ (ಅಸ್ಸಾಂನ ಬುಡಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಯಾವುದೇ ಅನುಸೂಚಿತ ಬುಡಕಟ್ಟುಗಳ ಸದಸ್ಯನಾಗಿರುವ, ಮತ್ತು ಯಾವುದೇ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಅಂಥ ಅನುಸೂಚಿತ ಬುಡಕಟ್ಟುಗಳ ಪೈಕಿ ಯಾವುದೇ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಅಂಥ ಸ್ಥಾನವನ್ನು ಮೀಸಲಿಟ್ಟಿರುವ ಸಂಸದೀಯ ಚುನಾವಣಾ ಕ್ಷೇತ್ರದ ಅಥವಾ ಅಂಥ ಯಾವುದೇ ಸ್ವಾಯತ್ತ ಜಿಲ್ಲೆಯನ್ನೊಳಗೊಳ್ಳುವ ಯಾವುದೇ ಇತರ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿಸಿ) ಲಕ್ಷದ್ವೀಪ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಯಾವುದೇ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಈ ಒಕ್ಕೂಟ ರಾಜ್ಯ ಕ್ಷೇತ್ರದ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿಸಿಸಿ) ಸಿಕ್ಕಿಂ ರಾಜ್ಯಕ್ಕೆ ಹಂಚಿಕೆ ಮಾಡಿರುವ ಸ್ಥಾನದ ಸಂದರ್ಭದಲ್ಲಿ ಅವನು ಸಿಕ್ಕಿಂನ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು,-

(ಡಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ ಅವನು ಯಾವುದೇ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು

- ಲೋಕಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಯಾಗಲು ಅರ್ಹನಾಗತಕ್ಕುದಲ್ಲ.

## ಅಧ್ಯಾಯ II - ರಾಜ್ಯ ವಿಧಾನ ಮಂಡಲಗಳ ಸದಸ್ಯತ್ವಕ್ಕಾಗಿ ಅರ್ಹತೆಗಳು

**5. ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು :-** ಒಬ್ಬ ವ್ಯಕ್ತಿಯು -

(ಎ) ಒಂದು ರಾಜ್ಯದ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಸಂದರ್ಭಾನುಸಾರ ಆ ಯಾವುದೇ ಜಾತಿಯ ಅಥವಾ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಬಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಯಾವುದೇ ಸ್ವಾಯತ್ತ ಜಿಲ್ಲೆಯ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಆ ಜಿಲ್ಲೆಗಾಗಿ ಯಾವ ವಿಧಾನಸಭಾ ಚುನಾವಣಾ ಕ್ಷೇತ್ರದಲ್ಲಿ ಅಂಥ ಸ್ಥಾನ ಅಥವಾ ಯಾವುದೇ ಇತರ ಸ್ಥಾನಗಳನ್ನು ಮೀಸಲಿಡಲಾಗಿದೆಯೋ ಆ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಸಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ, ಅವನು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು

- ಅಂಥ ರಾಜ್ಯದ ವಿಧಾನ ಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ:

ಪರಂತು, 371ಎ ಅನುಚ್ಛೇದದ (2)ನೇ ಖಂಡದಲ್ಲಿ ಉಲ್ಲೇಖಿಸಿರುವ ಅವಧಿಗಾಗಿ ಒಬ್ಬ ವ್ಯಕ್ತಿಯು ನಾಗಾಲ್ಯಾಂಡ್ ವಿಧಾನ ಸಭೆಯಲ್ಲಿ ತ್ಯೂನ್‌ಸಾಂಗ್ ಜಿಲ್ಲೆಗೆ ಹಂಚಿಕೆ ಮಾಡಿರುವ ಯಾವುದೇ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅವನು ಆ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಪ್ರಾದೇಶಿಕ ಪರಿಷತ್‌ನ ಸದಸ್ಯನಾಗಿರುವ ಹೊರತು ಅರ್ಹನಾಗತಕ್ಕುದಲ್ಲ.

**5ಎ. ಸಿಕ್ಕಿಂ ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು :-** (1) 5ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಬ್ಬ ವ್ಯಕ್ತಿಯು-

(ಎ) ಭೂಟಿಯ - ಲಿಪ್ಚಾ ಮೂಲದ ಸಿಕ್ಕಿಂನವರಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಭೂಟಿಯ ಅಥವಾ ಲಿಪ್ಚಾ ಮೂಲದವನಾಗಿರುವ ಮತ್ತು ಸಂಘಗಳಿಗಾಗಿ ಮೀಸಲಿಟ್ಟಿರುವ ಚುನಾವಣಾ ಕ್ಷೇತ್ರವನ್ನು ಹೊರತುಪಡಿಸಿ ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಬಿ) ನೇಪಾಳಿ ಮೂಲದ ಸಿಕ್ಕಿಂನವರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ, ಅವನು ನೇಪಾಳಿ ಮೂಲದ ವ್ಯಕ್ತಿಯಾಗಿರುವ, ಮತ್ತು ಈ ರಾಜ್ಯದಲ್ಲಿನ ಯಾವುದೇ ವಿಧಾನಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಅನುಸೂಚಿತ ಜಾತಿಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, 1974ರ ಸಿಕ್ಕಿಂ ಪ್ರಜಾ ಪ್ರಾತಿನಿಧ್ಯ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಜಾತಿಯ ಸದಸ್ಯನಾಗಿರುವ ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಡಿ) ಸಂಘಗಳಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಸಂಘ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು,

- ಸಿಕ್ಕಿಂ ವಿಧಾನ ಸಭೆ (ಸಂವಿಧಾನದ ಮೇರೆಗೆ ಕ್ರಮಬದ್ಧವಾಗಿ ರಚಿತವಾದ ಆ ರಾಜ್ಯದ ವಿಧಾನ ಸಭೆ ಎಂದು ಭಾವಿಸಲಾಗುವ) ಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

(2) 5ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ಒಬ್ಬ ವ್ಯಕ್ತಿಯು -

(ಎ) ಭೂಟಿಯಾ - ಲಿಪ್ಚಾ ಮೂಲದ ಸಿಕ್ಕಿಮಿಯರಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಭೂಟಿಯಾ ಅಥವಾ ಲಿಪ್ಚಾ ಮೂಲದ ವ್ಯಕ್ತಿಯಾಗಿರುವ ಹೊರತು ಮತ್ತು ಸಂಘಕ್ಕಾಗಿ ಮೀಸಲಿಟ್ಟ ಚುನಾವಣಾ ಕ್ಷೇತ್ರವನ್ನು ಹೊರತುಪಡಿಸಿ ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭೆಯ ಚುನಾವಣಾ ಕ್ಷೇತ್ರದ ಒಬ್ಬ ಮತದಾರನಾಗಿರುವ ಹೊರತು;

(ಬಿ) ಅನುಸೂಚಿತ ಜಾತಿಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಸಿಕ್ಕಿಂ ರಾಜ್ಯದಲ್ಲಿನ ಜಾತಿಗಳ ಪೈಕಿ ಯಾವುದೇ ಜಾತಿಗೆ ಸೇರಿದ ಸದಸ್ಯನಾಗಿರುವ ಹೊರತು ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಸಂಘ ಜನರಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಸಂಘ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಡಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ, ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭೆ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು,

- ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಅಧಿನಿಯಮ, 1980 (1980ರ 8)ರ ಪ್ರಾರಂಭದ ತರುವಾಯ ಯಾವುದೇ ಕಾಲದಲ್ಲಿ ರಚಿಸಬೇಕಾದ ಸಿಕ್ಕಿಂ ರಾಜ್ಯದ ವಿಧಾನ ಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

ವಿವರಣೆ:- ಈ ಉಪ ಪ್ರಕರಣದಲ್ಲಿ "ಭೂಟಿಯಾ" ಎಂಬುದು ಚುಂಬಿಪಾ, ದೊಪ್ತಪಾ, ದುಖ್ಪಾ, ಕಾಗಟೆ, ಷೆರ್ಪಾ, ಟಿಬೇಟನ್, ಟ್ರೊಮಾಪಾ ಮತ್ತು ಯೊಲ್ಮೊ ಎಂಬುವುಗಳನ್ನು ಒಳಗೊಳ್ಳುತ್ತದೆ.

**6. ವಿಧಾನಪರಿಷತ್ತಿನ ಸದಸ್ಯತ್ವಕ್ಕಾಗಿ ಅರ್ಹತೆಗಳು :-** (1) ಒಬ್ಬ ವ್ಯಕ್ತಿಯು ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು, ಅವನು ಆ ರಾಜ್ಯದ ವಿಧಾನ ಪರಿಷತ್‌ನಲ್ಲಿನ ಒಂದು ಸ್ಥಾನವನ್ನು ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

(2) ಒಬ್ಬ ವ್ಯಕ್ತಿಯು ಸಾಮಾನ್ಯವಾಗಿ ರಾಜ್ಯದ ನಿವಾಸಿಯಾಗಿರುವ ಹೊರತು, ರಾಜ್ಯಪಾಲರು ನಾಮನಿರ್ದೇಶನದ ಮೂಲಕ ಭರ್ತಿ ಮಾಡಬೇಕಾದ ಆ ರಾಜ್ಯದ ವಿಧಾನ ಪರಿಷತ್‌ನಲ್ಲಿನ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

## ಅಧ್ಯಾಯ III - ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯತ್ವಕ್ಕಾಗಿ ಅನರ್ಹತೆಗಳು

**7. ಪರಿಭಾಷೆಗಳು :-** ಈ ಅಧ್ಯಾಯದಲ್ಲಿ,-

(ಎ) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ "ಸಮುಚಿತ ಸರ್ಕಾರ" ಎಂದರೆ ಕೇಂದ್ರ ಸರ್ಕಾರ, ಮತ್ತು ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಆ ರಾಜ್ಯ ಸರ್ಕಾರ ;

(ಬಿ) "ಅನರ್ಹಗೊಳಿಸಲಾದ" ಎಂದರೆ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಮತ್ತು ಸದಸ್ಯನಾಗಿರುವುದಕ್ಕೆ ಅನರ್ಹಗೊಳಿಸಲಾದ ವ್ಯಕ್ತಿ.

**8. ಕೆಲವು ಅಪರಾಧಗಳ ಬಗ್ಗೆ ಅಪರಾಧ ನಿರ್ಣಯವಾದ ಮೇಲೆ ಅನರ್ಹತೆ :-** (1) ಒಬ್ಬ ವ್ಯಕ್ತಿಯು,-

(ಎ) ಭಾರತ ದಂಡ ಸಂಹಿತೆ, 1860 (1860ರ 45)ರ 153ಎ ಪ್ರಕರಣ (ಮತ, ಮೂಲ ವಂಶ, ಜನ್ಮಸ್ಥಳ, ನಿವಾಸ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ಮಧ್ಯೆ ದ್ವೇಷವನ್ನು ಹೆಚ್ಚಿಸುವ ಅಪರಾಧ, ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು) ಅಥವಾ 171ಇ ಪ್ರಕರಣ (ಲಂಚಗುಳಿತನದ ಅಪರಾಧ) ಅಥವಾ 171ಎಫ್ ಪ್ರಕರಣ (ಚುನಾವಣೆಯಲ್ಲಿ ಅನುಚಿತ ಪ್ರಭಾವ ಅಥವಾ ಇನ್ನೊಬ್ಬನಂತೆ ನಟಿಸುವ ಅಪರಾಧ) ಅಥವಾ 376ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣ ಅಥವಾ 376ಎ ಪ್ರಕರಣ ಅಥವಾ 376ಬಿ ಪ್ರಕರಣ ಅಥವಾ 376ಸಿ ಪ್ರಕರಣ ಅಥವಾ 376ಡಿ ಪ್ರಕರಣ (ಬಲಾತ್ ಸಂಭೋಗಕ್ಕೆ ಸಂಬಂಧಿಸಿದ ಅಪರಾಧಗಳು) ಅಥವಾ 498ಎ ಪ್ರಕರಣ (ಗಂಡ ಅಥವಾ ಗಂಡನ ಸಂಬಂಧಿಕರಿಂದ ಸ್ತ್ರೀಗೆ ಉಂಟು ಮಾಡುವ ಕ್ರೌರ್ಯದ ಅಪರಾಧ) ಅಥವಾ 505ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ (ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಯವನ್ನು ಉಂಟು ಮಾಡುವ ಅಥವಾ ಬೆಳೆಸುವ ಹೇಳಿಕೆಯನ್ನು ಕೊಡುವ ಅಪರಾಧ ಅಥವಾ ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಮತೀಯ ಪೂಜೆಯಲ್ಲಿ ಅಥವಾ ಮತೀಯ ಕರ್ಮಗಳಲ್ಲಿ ತೊಡಗಿದ ಯಾವುದೇ ಕೂಟದಲ್ಲಿ ಕೊಡುವ ಅಂಥ ಹೇಳಿಕೆಗೆ ಸಂಬಂಧಿಸಿದ ಅಪರಾಧ) ಮೇರೆಗೆ ; ಅಥವಾ

(ಬಿ) "ಅಸ್ಪೃಶ್ಯತೆ"ಯ ಬೋಧನೆ ಮತ್ತು ಆಚರಣೆಗಾಗಿ ಶಿಕ್ಷೆಯನ್ನು ಮತ್ತು ಅದರಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯ ಜಾರಿಯನ್ನು ಉಪಬಂಧಿಸುವ ನಾಗರೀಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955ರ (1955ರ 22) ಮೇರೆಗೆ; ಅಥವಾ

(ಸಿ) ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 11ನೇ ಪ್ರಕರಣದ (ನಿಷೇಧಿತ ಸರಕುಗಳನ್ನು ಆಮದು ಮಾಡುವ ಅಥವಾ ರಫ್ತು ಮಾಡುವ ಅಪರಾಧ) ಮೇರೆಗೆ ; ಅಥವಾ

(ಡಿ) ಕಾನೂನು ಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967 (1967ರ 37)ರ 10 ರಿಂದ 12ರ ವರೆಗಿನ ಪ್ರಕರಣಗಳ (ಕಾನೂನು ಬಾಹಿರವೆಂದು ಘೋಷಿಸಲಾಗಿರುವ ಸಂಘದ ಸದಸ್ಯನಾಗಿರುವ ಅಪರಾಧ, ಕಾನೂನು ಬಾಹಿರ ಸಂಘದ ನಿಧಿಗಳೊಂದಿಗೆ ವ್ಯವಹರಿಸುವುದಕ್ಕೆ ಸಂಬಂಧಪಟ್ಟ ಅಪರಾಧ ಅಥವಾ ಅಧಿಸೂಚಿತ ಸ್ಥಳಕ್ಕೆ ಸಂಬಂಧಿಸಿದಂತೆ ಮಾಡಿದ ಆದೇಶದ ಉಲ್ಲಂಘನೆಗೆ ಸಂಬಂಧಪಟ್ಟ ಅಪರಾಧ) ಮೇರೆಗೆ ; ಅಥವಾ

(ಇ) ವಿದೇಶಿ ವಿನಿಮಯ (ನಿಯಂತ್ರಣ) ಅಧಿನಿಯಮ, 1973ರ (1973ರ 46) ಮೇರೆಗೆ; ಅಥವಾ

(ಎಫ್) ನಿದ್ರಾಜನಕ ಔಷಧಗಳು ಮತ್ತು ಮನಃಪ್ರಭಾವಿ ಪದಾರ್ಥಗಳ ಅಧಿನಿಯಮ, 1985 (1985ರ 61)ರ ಮೇರೆಗೆ ; ಅಥವಾ

(ಜಿ) ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1987ರ (1987ರ 28) 3ನೇ ಪ್ರಕರಣದ (ಭಯೋತ್ಪಾದಕ ಕಾರ್ಯಗಳನ್ನು ಮಾಡುವ ಅಪರಾಧ) ಅಥವಾ 4ನೇ ಪ್ರಕರಣದ (ವಿಚ್ಛಿದ್ರಕಾರಕ ಚಟುವಟಿಕೆಗಳನ್ನು ಮಾಡುವ ಅಪರಾಧ) ಮೇರೆಗೆ ; ಅಥವಾ

(ಹೆಚ್) ಧಾರ್ಮಿಕ ಸಂಸ್ಥೆಗಳ (ದುರುಪಯೋಗದ ಪ್ರತಿಬಂಧ) ಅಧಿನಿಯಮ, 1988ರ (1988ರ 41) 7ನೇ ಪ್ರಕರಣದ (3 ರಿಂದ 6ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಅಪರಾಧ) ಮೇರೆಗೆ; ಅಥವಾ

(ಐ) ಈ ಅಧಿನಿಯಮದ 125ನೇ ಪ್ರಕರಣದ (ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರವನ್ನು ಬೆಳೆಸುವ ಅಪರಾಧ) ಅಥವಾ 135ನೇ ಪ್ರಕರಣದ (ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವ ಅಪರಾಧ) ಅಥವಾ 135ಎ ಪ್ರಕರಣ (ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ) ಅಥವಾ 136ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ (ಯಾವುದೇ ನಾಮನಿರ್ದೇಶನ ಮತಪತ್ರಗಳನ್ನು ಮೋಸದಿಂದ ವಿರೂಪಗೊಳಿಸುವ ಅಥವಾ ಮೋಸದಿಂದ ನಾಶಪಡಿಸುವ ಅಪರಾಧ) ; ಅಥವಾ

(ಜೆ) ಪೂಜಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1991ರ 6ನೇ ಪ್ರಕರಣದ (ಪೂಜಾ ಸ್ಥಳವನ್ನು ಪರಿವರ್ತಿಸುವ ಅಪರಾಧ); ಅಥವಾ

(ಕೆ) ರಾಷ್ಟ್ರಗೌರವ ಅಪಮಾನ ಪ್ರತಿಬಂಧಕ ಅಧಿನಿಯಮ, 1971 (1971 ರ 69) ರ 2 ನೇ ಪ್ರಕರಣ (ಭಾರತದ ರಾಷ್ಟ್ರಧ್ವಜಕ್ಕೆ ಅಥವಾ ಭಾರತ ಸಂವಿಧಾನಕ್ಕೆ ಅಪಮಾನ ಮಾಡುವ ಅಪರಾಧ) ಅಥವಾ 3 ನೇ ಪ್ರಕರಣ (ರಾಷ್ಟ್ರಗೀತೆ ಹಾಡುವುದನ್ನು ಪ್ರತಿಬಂಧಿಸುವ ಅಪರಾಧ); ಅಥವಾ

(ಎಲ್) ಸತಿ ಹೋಗುವಿಕೆ (ಪ್ರತಿಬಂಧ) ಅಧಿನಿಯಮ, 1987 (1988ರ 3); ಅಥವಾ

(ಎಂ) ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 (1988ರ 49); ಅಥವಾ

(ಎನ್) ಭಯೋತ್ಪಾದನ ಪ್ರತಿಬಂಧಕ ಅಧಿನಿಯಮ, 2002 (2002ರ 15); - ಇವುಗಳ ಮೇರೆಗೆ

- ಅಪರಾಧಿಯೆಂದು ನಿರ್ಣೀತನಾಗಿರುವ ವ್ಯಕ್ತಿಯು,-

(i) ಜುಲ್ಮಾನೆ ಶಿಕ್ಷೆಗೆ ಮಾತ್ರ ಗುರಿಯಾಗಿರುವಲ್ಲಿ, ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಅನರ್ಹಗೊಳ್ಳತಕ್ಕದ್ದು;

(ii) ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಲ್ಲಿ ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳಿಸತಕ್ಕದ್ದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕದ್ದು;

(2) (ಎ) ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಯಾವುದೇ ಕಾನೂನನ್ನು ; ಅಥವಾ

(ಬಿ) ಆಹಾರ ಅಥವಾ ಔಷಧಗಳ ಕಲಬೆರಕೆಗೆ ಸಂಬಂಧಿಸಿದ ಯಾವುದೇ ಕಾನೂನನ್ನು ; ಅಥವಾ

(ಸಿ) ವಧು - ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ 28)ರ ಯಾವುವೇ ಉಪಬಂಧಗಳನ್ನು

- ಉಲ್ಲಂಘಿಸಿರುವುದಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಮತ್ತು ಆರು ತಿಂಗಳುಗಳಿಗೆ ಕಡಿಮೆ ಇಲ್ಲದ ಕಾರಾವಾಸ ಶಿಕ್ಷೆಗೆ ಗುರಿಯಾದ ಒಬ್ಬ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮಂದುವರೆಯತಕ್ಕುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಪರಾಧವಲ್ಲದ ಯಾವುದೇ ಇತರ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವ ಮತ್ತು ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಕಾರಾವಾಸದ ಶಿಕ್ಷೆಗೆ ಗುರಿಯಾಗಿರುವ ಒಬ್ಬ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕುದು.

(4) (1)ನೇ ಉಪಪ್ರಕರಣ, (2)ನೇ ಉಪ ಪ್ರಕರಣ ಅಥವಾ (3)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಆ ಉಪ ಪ್ರಕರಣಗಳ ಪೈಕಿ ಯಾವುದೇ ಒಂದರ ಮೇರೆಗಿನ ಅನರ್ಹತೆಯು, ಅಪರಾಧ ನಿರ್ಣಯದ ದಿನಾಂಕದಂದು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯನಾಗಿರುವ ವ್ಯಕ್ತಿಯ ಸಂದರ್ಭದಲ್ಲಿ ಆ ದಿನಾಂಕದಿಂದ, ಮೂರು ತಿಂಗಳುಗಳು ಕಳೆದಿರುವವರೆಗೆ ಅಥವಾ ಆ ಅವಧಿಯೊಳಗಾಗಿ ಆ ಅಪರಾಧ ನಿರ್ಣಯ ಅಥವಾ ಶಿಕ್ಷೆಯ ಸಂಬಂಧದಲ್ಲಿ ಪರಿಷ್ಕರಣೆಗಾಗಿ ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿದರೆ, ನ್ಯಾಯಾಲಯವು ಆ ಅಪೀಲು ಅಥವಾ ಅರ್ಜಿಯನ್ನು ವಿಲೆ ಮಾಡುವವರೆಗೆ ಪರಿಣಾಮಕಾರಿಯಾಗತಕ್ಕುದಲ್ಲ.

ವಿವರಣೆ :- ಈ ಪ್ರಕರಣದಲ್ಲಿ,-

(ಎ) "ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಕಾನೂನು" ಎಂದರೆ,-

(i) ಯಾವುದೇ ಅತ್ಯಾವಶ್ಯಕ ವಸ್ತುವಿನ ಉತ್ಪಾದನೆ ಅಥವಾ ತಯಾರಿಕೆಯ ನಿಯಂತ್ರಣಕ್ಕಾಗಿ ;

(ii) ಯಾವುದೇ ಅತ್ಯಾವಶ್ಯಕ ವಸ್ತುವನ್ನು ಯಾವ ಬೆಲೆಗೆ ಕೊಳ್ಳಬಹುದೋ ಅಥವಾ ಮಾರಬಹುದೋ ಆ ಬೆಲೆಯ ನಿಯಂತ್ರಣಕ್ಕಾಗಿ ;

(iii) ಯಾವುದೇ ಅತ್ಯಾವಶ್ಯಕ ವಸ್ತುವಿನ ಆರ್ಜನೆ, ಸ್ವಾಧೀನ, ದಾಸ್ತಾನು, ಸಾಗಣೆ, ವಿತರಣೆ, ವಿಲೆ, ಉಪಯೋಗ ಅಥವಾ ಬಳಕೆಯ ನಿಯಂತ್ರಣಕ್ಕಾಗಿ ;

(iv) ಸಾಮಾನ್ಯವಾಗಿ ಮಾರಾಟಕ್ಕೆ ಇಟ್ಟ ಯಾವುದೇ ಅತ್ಯಾವಶ್ಯಕ ವಸ್ತುವಿನ ಮಾರಾಟವನ್ನು ತಡೆಹಿಡಿಯುವುದರ ನಿಷೇಧಕ್ಕಾಗಿ

- ಉಪಬಂಧಿಸುವ ಯಾವುದೇ ಕಾನೂನು ಅಥವಾ ಯಾವುದೇ ಆದೇಶ, ನಿಯಮ ಅಥವಾ ಕಾನೂನಿನ ಬಲವುಳ್ಳ ಯಾವುದೇ ಅಧಿಸೂಚನೆ ;

(ಬಿ) "ಔಷಧ" ಎಂಬುದಕ್ಕೆ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940 (1940ರ 23) ರಲ್ಲಿ ಇದಕ್ಕೆ ಗೊತ್ತುಪಡಿಸಿರುವ ಅರ್ಥವೇ ಇರುತ್ತದೆ ;

(ಸಿ) "ಅತ್ಯಾವಶ್ಯಕ ವಸ್ತು" ಎಂಬುದಕ್ಕೆ ಅತ್ಯಾವಶ್ಯಕ ವಸ್ತುಗಳ ಅಧಿನಿಯಮ, 1955 (1955ರ 10) ರಲ್ಲಿ ಅದಕ್ಕೆ ಗೊತ್ತುಪಡಿಸಿರುವ ಅರ್ಥವೇ ಇರುತ್ತದೆ ;

(ಡಿ) "ಆಹಾರ" ಎಂಬುದಕ್ಕೆ ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954 (1954ರ 37) ರಲ್ಲಿ ಅದಕ್ಕೆ ಗೊತ್ತುಪಡಿಸಿರುವ ಅರ್ಥವೇ ಇರುತ್ತದೆ.

**8ಎ. ಭ್ರಷ್ಟಾಚಾರಗಳ ಆಧಾರದ ಮೇಲೆ ಅನರ್ಹತೆ :-** (1) 99ನೇ ಪ್ರಕರಣದ ಮೇರೆಗೆ ಆದೇಶದ ಮೂಲಕ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದ ಪ್ರತಿಯೊಬ್ಬ ವ್ಯಕ್ತಿಯ ಪ್ರಕರಣವನ್ನು ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವು ಅಂಥ ಆದೇಶವು ಜಾರಿಗೆ ಬಂದ ತರುವಾಯ ಆದಷ್ಟು ಬೇಗನೆ, ಅಂಥ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದೇ ಮತ್ತು ಹಾಗಿದ್ದರೆ ಎಷ್ಟು ಅವಧಿಯವರೆಗೆ ಎಂಬ ಪ್ರಶ್ನೆಯನ್ನು ನಿರ್ಧರಿಸಲು ರಾಷ್ಟ್ರಪತಿಗಳಿಗೆ ಒಪ್ಪಿಸತಕ್ಕುದು :

ಪರಂತು, ಈ ಉಪಪ್ರಕರಣದ ಮೇರೆಗೆ ಯಾವ ಅವಧಿಯವರೆಗೆ ಯಾವನೇ ವ್ಯಕ್ತಿಯನ್ನು ಅನರ್ಹಗೊಳಿಸಬಹುದೋ ಆ ಅವಧಿಯು, 99ನೇ ಪ್ರಕರಣದ ಮೇರೆಗೆ ಅವನಿಗೆ ಸಂಬಂಧಪಟ್ಟಂತೆ ಮಾಡಿರುವ ಆದೇಶವು ಜಾರಿಗೆ ಬಂದ ದಿನಾಂಕದಿಂದ ಆರು ವರ್ಷಗಳ ಅವಧಿಯನ್ನು ಯಾವ ಸಂದರ್ಭದಲ್ಲೂ ಮೀರತಕ್ಕುದಲ್ಲ.

(2) ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975 (1975ರ 40)ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಈ ಅಧಿನಿಯಮವು ಇದ್ದಂತೆ, ಅದರ 8ಎ ಪ್ರಕರಣದ ಮೇರೆಗೆ ಅನರ್ಹಗೊಂಡಿರುವ ಯಾವನೇ ವ್ಯಕ್ತಿಯು ಇಂಥ ಅನರ್ಹತೆಯ ಅವಧಿಯು ಮುಕ್ತಾಯವಾಗಿರದಿದ್ದರೆ, ಸದರಿ ಅವಧಿಯ ಮುಕ್ತಾಯಗೊಳ್ಳದ ಭಾಗಕ್ಕಾಗಿ ಅಂಥ ಅನರ್ಹತೆಯನ್ನು ತೆಗೆದುಹಾಕುವುದಕ್ಕಾಗಿ ರಾಷ್ಟ್ರಪತಿಗೆ ಅರ್ಜಿಯನ್ನು ಸಲ್ಲಿಸಬಹುದು.

(3) (1)ನೇ ಉಪ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಪ್ರಶ್ನೆಯ ಬಗ್ಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಲಾದ ಯಾವುದೇ ಅರ್ಜಿಯ ಬಗ್ಗೆ ರಾಷ್ಟ್ರಪತಿಯು ತನ್ನ ತೀರ್ಮಾನವನ್ನು ಕೊಡುವುದಕ್ಕೆ ಮುಂಚೆ ಅವನು ಅಂಥ ಪ್ರಶ್ನೆಯ ಅಥವಾ

ಅರ್ಜಿಯ ಬಗ್ಗೆ ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕುದು ಮತ್ತು ಅಂಥ ಅಭಿಪ್ರಾಯಕ್ಕೆ ಅನುಸಾರವಾಗಿ ವರ್ತಿಸತಕ್ಕುದು.

**9. ಭ್ರಷ್ಟಾಚಾರ ಅಥವಾ ದ್ರೋಹದ ಸಲುವಾಗಿ ವಜಾ ಮಾಡಿದ್ದಕ್ಕಾಗಿ ಅನರ್ಹತೆ :-** (1) ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿದ್ದು ಭ್ರಷ್ಟಾಚಾರ ಅಥವಾ ದೇಶ ದ್ರೋಹಕ್ಕಾಗಿ ವಜಾ ಆಗಿರುವ ಒಬ್ಬ ವ್ಯಕ್ತಿಯನ್ನು, ಹಾಗೆ ವಜಾ ಆದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅನರ್ಹಗೊಳಿಸತಕ್ಕುದು.

(2) (1)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ಭಾರತ ಸರ್ಕಾರದ ಅಧೀನದಲ್ಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿರುವ ವ್ಯಕ್ತಿಯನ್ನು ಭ್ರಷ್ಟಾಚಾರ ಅಥವಾ ದೇಶ ದ್ರೋಹಕ್ಕಾಗಿ ವಜಾ ಮಾಡಲಾಗಿದೆ ಅಥವಾ ಮಾಡಲಾಗಿಲ್ಲ ಎಂಬುದಾಗಿ ಚುನಾವಣಾ ಆಯೋಗವು ನೀಡಿದ ಪ್ರಮಾಣಪತ್ರವು ಆ ಸಂಗತಿಯ ಬಗ್ಗೆ ನಿರ್ಣಾಯಕ ರುಜುವಾತು ಆಗಿರತಕ್ಕುದು :

ಪರಂತು, ಒಬ್ಬ ವ್ಯಕ್ತಿಯನ್ನು ಭ್ರಷ್ಟಾಚಾರಕ್ಕಾಗಿ ಅಥವಾ ದೇಶ ದ್ರೋಹಕ್ಕಾಗಿ ವಜಾ ಮಾಡಲಾಗಿದೆ ಎಂಬ ಪ್ರಮಾಣಪತ್ರವನ್ನು, ಸದರಿ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು ನೀಡತಕ್ಕುದಲ್ಲ.

**9ಎ. ಸರ್ಕಾರಿ ಕರಾರುಗಳು, ಇತ್ಯಾದಿಗಳಿಗಾಗಿ ಅನರ್ಹತೆ :-** ಒಬ್ಬ ವ್ಯಕ್ತಿಯು ಸಮುಚಿತ ಸರ್ಕಾರಕ್ಕೆ ಸರಕುಗಳ ಸರಬರಾಜಿಗಾಗಿ ಅಥವಾ ಅದು ಕೈಗೊಂಡಿರುವ ಯಾವುದೇ ಕಾಮಗಾರಿಗಳ ನಿರ್ವಹಣೆಗಾಗಿ ಆ ಸರ್ಕಾರದೊಂದಿಗೆ ತನ್ನ ವೃತ್ತಿ ಅಥವಾ ವ್ಯವಹಾರದ ಕ್ರಮದಲ್ಲಿ ತಾನು ಮಾಡಿಕೊಂಡಿರುವ ಕರಾರು ಅಸ್ತಿತ್ವದಲ್ಲಿದ್ದರೆ ಮತ್ತು ಹಾಗೆ ಇರುವವರೆಗೆ ಅನರ್ಹಗೊಳ್ಳತಕ್ಕುದು.

ವಿವರಣೆ :- ಈ ಪ್ರಕರಣದ ಉದ್ದೇಶಗಳಿಗಾಗಿ, ಸಮುಚಿತ ಸರ್ಕಾರದೊಂದಿಗೆ ಕರಾರು ಮಾಡಿಕೊಂಡಿರುವ ವ್ಯಕ್ತಿಯು ಅದನ್ನು ಪೂರ್ಣವಾಗಿ ಪಾಲಿಸಿರುವಲ್ಲಿ, ಸರ್ಕಾರವು ಪೂರ್ಣವಾಗಿ ಅಥವಾ ಭಾಗಶಃ ಆ ಕರಾರಿನ ತನ್ನ ಭಾಗವನ್ನು ಪಾಲಿಸಿಲ್ಲವೆಂಬ ಸಂಗತಿಯ ಕಾರಣ ಮಾತ್ರದಿಂದಲೇ ಆ ಕರಾರು ಅಸ್ತಿತ್ವದಲ್ಲಿದೆ ಎಂದು ಭಾವಿಸತಕ್ಕುದಲ್ಲ.

**10. ಸರ್ಕಾರಿ ಕಂಪನಿಯ ಅಧೀನದಲ್ಲಿನ ಹುದ್ದೆಗಾಗಿ ಅನರ್ಹತೆ :-** ಒಬ್ಬ ವ್ಯಕ್ತಿಯು, (ಸಹಕಾರ ಸಂಘವಲ್ಲದ) ಯಾವ ಕಂಪನಿ ಅಥವಾ ನಿಗಮದ ಬಂಡವಾಳದಲ್ಲಿ ಸಮುಚಿತ ಸರ್ಕಾರವು ಶೇ. 25 ಕ್ಕಿಂತ ಕಡಿಮೆ ಇಲ್ಲದಷ್ಟು ಷೇರನ್ನು ಹೊಂದಿದೆಯೋ ಆ ಯಾವುದೇ ಕಂಪನಿಯ ಅಥವಾ ನಿಗಮದ ವ್ಯವಸ್ಥಾಪಕ, ಏಜೆಂಟ್, ವ್ಯವಸ್ಥಾಪಕ ಅಥವಾ ಕಾರ್ಯದರ್ಶಿಯು ಆಗಿದ್ದರೆ ಮತ್ತು ಹಾಗೆ ಆಗಿರುವವರೆಗೆ ಅವನು ಅನರ್ಹನಾಗಿರತಕ್ಕುದು.

**10ಎ. ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಲು ತಪ್ಪಿದ್ದಕ್ಕಾಗಿ ಅನರ್ಹತೆ :-** ಒಬ್ಬ ವ್ಯಕ್ತಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಗತ್ಯಪಡಿಸಿದ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲ್ಮಾಡಲು ತಪ್ಪಿದ್ದಾನೆ ಎಂದು; ಮತ್ತು

(ಬಿ) ಹಾಗೆ ತಪ್ಪಿರುವುದಕ್ಕೆ ಯಾವುದೇ ಸರಿಯಾದ ಕಾರಣ ಅಥವಾ ಸಮರ್ಥನೆಯನ್ನು ಅವನು ಹೊಂದಿಲ್ಲ ಎಂದು

- ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ ಅವನು ಅನರ್ಹನಾಗಿದ್ದಾನೆಂದು ಘೋಷಿಸತಕ್ಕುದು ಮತ್ತು ಅಂಥ ವ್ಯಕ್ತಿಯನ್ನು ಆ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸತಕ್ಕುದು.

**11. ಅನರ್ಹತೆಯ ಅವಧಿಯನ್ನು ತೆಗೆದುಹಾಕುವುದು ಅಥವಾ ಕಡಿಮೆ ಮಾಡುವುದು :-** ಚುನಾವಣಾ ಆಯೋಗವು, ಕಾರಣಗಳನ್ನು ದಾಖಲ್ಮಾಡಿ, ಈ ಅಧ್ಯಾಯದ ಮೇರೆಗೆ (8ಎ ಪ್ರಕರಣದ ಮೇರೆಗಿರುವುದರ ಹೊರತು) ಯಾವುದೇ ಅನರ್ಹತೆಯನ್ನು ತೆಗೆದುಹಾಕಬಹುದು ಅಥವಾ ಯಾವುದೇ ಅಂಥ ಅನರ್ಹತೆಯ ಅವಧಿಯನ್ನು ಕಡಿಮೆ ಮಾಡಬಹುದು.

## ಅಧ್ಯಾಯ IV - ಮತದಾನಕ್ಕಾಗಿ ಅನರ್ಹತೆಗಳು

**11ಎ. ಅಪರಾಧ ನಿರ್ಣಯ ಮತ್ತು ಭ್ರಷ್ಟ ಆಚರಣೆಗಳಿಂದ ಉದ್ಭವಿಸುವ ಅನರ್ಹತೆ :-** (1) ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವನೇ ವ್ಯಕ್ತಿಯು,-

ಭಾರತ ದಂಡ ಸಂಹಿತೆ (1860ರ 45)ಯ 171ಇ ಪ್ರಕರಣ ಅಥವಾ 171ಎಫ್ ಪ್ರಕರಣದ ಮೇರೆಗೆ, ಅಥವಾ ಈ ಅಧಿನಿಯಮದ 125ನೇ ಪ್ರಕರಣದ ಅಥವಾ 135ನೇ ಪ್ರಕರಣದ ಅಥವಾ 136ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಅವನು, ಅಪರಾಧ ನಿರ್ಣಯದ ದಿನಾಂಕದಿಂದ ಅಥವಾ ಆದೇಶವು ಜಾರಿಗೆ ಬರುವ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಅನರ್ಹಗೊಳ್ಳತಕ್ಕುದು.

(2) ಯಾವುದೇ ಅವಧಿಯವರೆಗೆ 8ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರಪತಿಯ ತೀರ್ಮಾನದ ಮೂಲಕ ಅನರ್ಹಗೊಳಿಸಲಾದ ಯಾವನೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಅದೇ ಅವಧಿಯವರೆಗೆ ಅನರ್ಹನಾಗಿರತಕ್ಕುದು.

(3) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಳ್ಳುವ ಮತ್ತು ಸದಸ್ಯನಾಗಿ ಇರುವ ಬಗೆಗಿನ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ 8(ಎ) ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗಿನ ರಾಷ್ಟ್ರಪತಿಯ ತೀರ್ಮಾನವು ಸಾಧ್ಯವಾದಷ್ಟು ಮಟ್ಟಿಗೆ, ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975 (1975ರ 40) ರ ನಿಕಟ ಪ್ರಾರಂಭಕ್ಕೆ ಮುಂಚೆ ಈ ಅಧಿನಿಯಮವು ಇದ್ದಂತೆ, ಅದರ 11ಎ ಪ್ರಕರಣದ (1)ನೆಯ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕಾಗಿ ಅವನು ಒಳಗಾಗಿರುವ ಅನರ್ಹತೆಯ ಸಂಬಂಧದಲ್ಲಿ ಅಂಥ ತೀರ್ಮಾನವು ಮತದಾನ ಮಾಡುವುದಕ್ಕಾಗಿನ ಸದರಿ ಅನರ್ಹತೆಗೆ ಸಂಬಂಧಿಸಿದ ತೀರ್ಮಾನವಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

**11ಬಿ. ಅನರ್ಹತೆಗಳ ನಿವಾರಣೆ :-** ಚುನಾವಣಾ ಆಯೋಗವು ಕಾರಣಗಳನ್ನು ದಾಖಲು ಮಾಡಿ 11ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅನರ್ಹತೆಯನ್ನು ನಿವಾರಿಸಬಹುದು.

## ಭಾಗ - III

## ಸಾರ್ವತ್ರಿಕ ಚುನಾವಣೆಗಳ ಅಧಿಸೂಚನೆ

**12. ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆಗಾಗಿ ಅಧಿಸೂಚನೆ :-** ರಾಜ್ಯಸಭೆಯ ಸದಸ್ಯರ ಅವಧಿಯು ಮುಕ್ತಾಯಗೊಂಡ ಮೇಲೆ ನಿವೃತ್ತರಾಗುವ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ರಾಷ್ಟ್ರಪತಿಯು ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ಭಾರತ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ಸಂಬಂಧಪಟ್ಟ ಪ್ರತಿಯೊಂದು ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರನ್ನು ಅಥವಾ ಸಂದರ್ಭಾನುಸಾರ ಚುನಾಯಕ ಗಣದ ಸದಸ್ಯರನ್ನು ಕೋರತಕ್ಕುದು :

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ನಿವೃತ್ತಿಯಾಗಲಿರುವ ಸದಸ್ಯರ ಪದಾವಧಿಯು ಮುಕ್ತಾಯಗೊಳ್ಳಬೇಕಾದ ಮೂರು ತಿಂಗಳಿಗಿಂತ ಹೆಚ್ಚು ಮುಂಚಿತವಾಗಿ ಹೊರಡಿಸತಕ್ಕುದಲ್ಲ.

**12ಎ. ರಾಜ್ಯಸಭೆಯಲ್ಲಿ ಸಿಕ್ಕಿಂ ರಾಜ್ಯಕ್ಕೆ ಹಂಚಿಕೊಟ್ಟಿರುವ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಗಾಗಿ ಅಧಿಸೂಚನೆ :-** ರಾಜ್ಯ ಸಭೆಯಲ್ಲಿ ಸಂವಿಧಾನ (36ನೇ ತಿದ್ದುಪಡಿ) ಅಧಿನಿಯಮ, 1975ರ ಮೂಲಕ ಸಿಕ್ಕಿಂ ರಾಜ್ಯಕ್ಕೆ ಹಂಚಿಕೊಟ್ಟಿರುವ ಸ್ಥಾನವನ್ನು ಮೊದಲ ಬಾರಿಗೆ ಭರ್ತಿ ಮಾಡುವ ಉದ್ದೇಶಕ್ಕಾಗಿ, ರಾಷ್ಟ್ರಪತಿಯು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕದಂದು ಭಾರತ ರಾಜಪತ್ರದಲ್ಲಿ ಪ್ರಕಟಿತವಾದ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳ ಅನುಸಾರವಾಗಿ ಒಬ್ಬ ಸದಸ್ಯನನ್ನು ಆಯ್ಕೆ ಮಾಡಲು ಸಿಕ್ಕಿಂ ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರನ್ನು ಕೋರತಕ್ಕುದು ಮತ್ತು ಹಾಗೆ ನಡೆಸಿದ ಚುನಾವಣೆಯನ್ನು ಎಲ್ಲ ಉದ್ದೇಶಗಳು ಮತ್ತು ಆಶಯಗಳಿಗಾಗಿ 12ನೇ ಪ್ರಕರಣದ ಮೇರೆಗೆ ನಡೆಸಲಾಗಿದೆಯೆಂಬುದಾಗಿ ಭಾವಿಸತಕ್ಕುದು.

**13. [ಕೆಲವು ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿ ಚುನಾವಣಾ ಗಣಗಳನ್ನು ಪುನರ್‌ರಚಿಸುವುದಕ್ಕಾಗಿ ಅಧಿಸೂಚನೆ] :-** ಪ್ರಾದೇಶಿಕ ಪರಿಷತ್ತುಗಳ ಅಧಿನಿಯಮ, 1956 (1956ರ 103)ರ 66ನೇ ಪ್ರಕರಣದ ಮೂಲಕ ನಿರಸಿತವಾಗಿದೆ.

**14. ಲೋಕಸಭೆಯ ಸಾರ್ವತ್ರಿಕ ಚುನಾವಣೆಗಾಗಿ ಅಧಿಸೂಚನೆ :-** (1) ಅಸ್ತಿತ್ವದಲ್ಲಿರುವ ಸದನದ ಅವಧಿಯು ಮುಕ್ತಾಯವಾದ ಮೇಲೆ ಅಥವಾ ಅದು ವಿಘಟಿತವಾದ ಮೇಲೆ ಹೊಸ ಲೋಕಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕುದು.

(2) ಸದರಿ ಉದ್ದೇಶಕ್ಕಾಗಿ ರಾಷ್ಟ್ರಪತಿಯು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ಭಾರತ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ಎಲ್ಲ ಸಂಸದೀಯ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳತಕ್ಕುದು :

ಪರಂತು, ಅಸ್ತಿತ್ವದಲ್ಲಿರುವ ಲೋಕಸಭೆಯು ವಿಘಟಿತವಾದ ಮೇಲಲ್ಲದೆ ಅನ್ಯಥಾ ಸಾರ್ವತ್ರಿಕ ಚುನಾವಣೆಯನ್ನು ನಡೆಸಿರುವಲ್ಲಿ 83ನೇ ಅನುಚ್ಛೇದದ (2)ನೇ ಖಂಡದ ಉಪಬಂಧಗಳ ಮೇರೆಗೆ ಆ ಸದನದ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮೊದಲು ಆರು ತಿಂಗಳಿಗಿಂತ ಮುಂಚೆ ಯಾವುದೇ ಕಾಲದಲ್ಲಿ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕುದಲ್ಲ.

**14ಎ. ಅಸ್ತಿತ್ವದಲ್ಲಿರುವ ಲೋಕಸಭೆಗೆ ಸಿಕ್ಕಿಂ ರಾಜ್ಯದ ಪ್ರತಿನಿಧಿಯನ್ನು ಆಯ್ಕೆ ಮಾಡುವುದಕ್ಕಾಗಿ ಅಧಿಸೂಚನೆ :-** ಸಂವಿಧಾನದ 371ಎಫ್ ಅನುಚ್ಛೇದದ (ಇ) ಖಂಡದಲ್ಲಿ ನಿರ್ದಿಷ್ಟಪಡಿಸಿರುವಂತೆ ಲೋಕಸಭೆಗೆ ಸಿಕ್ಕಿಂ ರಾಜ್ಯದ ಪ್ರತಿನಿಧಿಯನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಚುನಾವಣಾ ಆಯೋಗವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಯಾವ ಉಪಬಂಧಗಳು ರಾಜ್ಯ ಸಭೆಯ ಸದಸ್ಯರ ಆಯ್ಕೆಗೆ ಅನ್ವಯವಾಗುತ್ತವೆಯೋ ಆ ಉಪಬಂಧಗಳಿಗೆ ಅನುಸಾರವಾಗಿ ಆ ಪ್ರತಿನಿಧಿಯನ್ನು ಆಯ್ಕೆ ಮಾಡಲು, ಸಿಕ್ಕಿಂ ರಾಜ್ಯದ ವಿಧಾನಸಭೆಯ ಸದಸ್ಯರನ್ನು ಕೋರತಕ್ಕುದು.

**15. ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗಾಗಿ ಅಧಿಸೂಚನೆ :-** (1) ಅಸ್ತಿತ್ವದಲ್ಲಿರುವ ವಿಧಾನ ಸಭೆಯ ಅವಧಿ ಮುಕ್ತಾಯವಾದ ಮೇಲೆ ಅಥವಾ ಅದು ವಿಘಟಿತವಾದ ಮೇಲೆ ಹೊಸ ವಿಧಾನ ಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕುದು.

(2) ಸದರಿ ಉದ್ದೇಶಕ್ಕಾಗಿ, ಸಂದರ್ಭಾನುಸಾರ ರಾಜ್ಯಪಾಲನು ಅಥವಾ ಆಡಳಿತಗಾರನು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ರಾಜ್ಯದ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚು ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯದಲ್ಲಿನ ಎಲ್ಲ ವಿಧಾನ ಸಭೆಯ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳತಕ್ಕುದು :

ಪರಂತು, ಅಸ್ತಿತ್ವದಲ್ಲಿರುವ ವಿಧಾನ ಸಭೆಯು ವಿಘಟಿತಗೊಂಡ ಮೇಲಲ್ಲದೆ ಅನ್ಯಥಾ ಸಾರ್ವತ್ರಿಕ ಚುನಾವಣೆಯನ್ನು ನಡೆಸಿರುವಲ್ಲಿ, ಸಂದರ್ಭಾನುಸಾರ 172ನೇ ಅನುಚ್ಛೇದದ (1)ನೇ ಖಂಡದ ಉಪಬಂಧಗಳ ಮೇರೆಗೆ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರ ಅಧಿನಿಯಮ, 1963 (1963ರ 20)ರ 5ನೇ ಪ್ರಕರಣದ ಉಪಬಂಧಗಳ ಮೇರೆಗೆ ಆ ವಿಧಾನ ಸಭೆಯ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮೊದಲು ಆರು ತಿಂಗಳಿಗಿಂತ ಮುಂಚೆ ಯಾವುದೇ ಕಾಲದಲ್ಲಿ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕುದಲ್ಲ.

**15ಎ. ವಿಧಾನಪರಿಷತ್ತುಗಳ ಕೆಲವು ಚುನಾವಣೆಗಳಿಗಾಗಿ ಅಧಿಸೂಚನೆ : –** ರಾಜ್ಯಗಳ ಪುನರ್‌ರಚನೆ ಅಧಿನಿಯಮ, 1956 (1956ರ 37)ರ ಮೇರೆಗೆ ಮಧ್ಯಪ್ರದೇಶದ ರಾಜ್ಯದ ವಿಧಾನ ಪರಿಷತ್ತನ್ನು ರಚಿಸುವ ಮತ್ತು ವಿಧಾನ ಪರಿಷತ್ತುಗಳ ಅಧಿನಿಯಮ, 1957 (1957ರ 37)ರ ಮೇರೆಗೆ ಆಂಧ್ರಪ್ರದೇಶ ರಾಜ್ಯದ ವಿಧಾನ ಪರಿಷತ್ತನ್ನು ರಚಿಸುವ ಉದ್ದೇಶಕ್ಕಾಗಿ, ಮೇಲೆ ಹೇಳಿದ ಪ್ರತಿಯೊಂದು ರಾಜ್ಯದ ರಾಜ್ಯಪಾಲನು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ರಾಜ್ಯದ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ವಿಧಾನ ಸಭೆಯ ಸದಸ್ಯರನ್ನು ಮತ್ತು ಪರಿಷತ್ತಿನ ಎಲ್ಲ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳತಕ್ಕುದು.

**16. ರಾಜ್ಯ ವಿಧಾನಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗಾಗಿ ಅಧಿಸೂಚನೆ :-** ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಪದಾವಧಿಯು ಮುಕ್ತಾಯಗೊಂಡ ಮೇಲೆ ನಿವೃತ್ತರಾಗುವ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ, ರಾಜ್ಯಪಾಲನು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ರಾಜ್ಯದ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳು ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯದ ವಿಧಾನ ಸಭೆಯ ಮತ್ತು ಸಂಬಂಧಪಟ್ಟ ಎಲ್ಲ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರಗಳ ಸದಸ್ಯರನ್ನು ಕೇಳಿಕೊಳ್ಳತಕ್ಕುದು :

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ನಿವೃತ್ತರಾಗಲಿರುವ ಸದಸ್ಯರ ಪದಾವಧಿಯು ಮುಕ್ತಾಯಗೊಳ್ಳಬೇಕಾದ ದಿನಾಂಕಕ್ಕೆ ಮೂರು ತಿಂಗಳಿಗಿಂತ ಹೆಚ್ಚು ಮುಂಚಿತವಾಗಿ ಹೊರಡಿಸತಕ್ಕುದಲ್ಲ.

## ಭಾಗ – IV

## ಚುನಾವಣೆಗಳನ್ನು ನಡೆಸುವುದಕ್ಕಾಗಿ ಆಡಳಿತ ಯಂತ್ರ

**19. ಪರಿಭಾಷೆ :-** ಈ ಭಾಗದಲ್ಲಿ ಮತ್ತುVನೇ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು "ಚುನಾವಣಾ ಕ್ಷೇತ್ರ" ಎಂದರೆ ಸಂಸದೀಯ ಚುನಾವಣಾ ಕ್ಷೇತ್ರ ಅಥವಾ ವಿಧಾನ ಸಭಾ ಚುನಾವಣಾ ಕ್ಷೇತ್ರ ಅಥವಾ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರ.

**19ಎ. ಚುನಾವಣಾ ಆಯೋಗದ ಪ್ರಕಾರ್ಯಗಳ ಪ್ರತ್ಯಾಯೋಜನೆ :-** ಸಂವಿಧಾನದ, ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ ಮತ್ತು ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗಿನ ಚುನಾವಣಾ ಆಯೋಗದ ಪ್ರಕಾರ್ಯಗಳನ್ನು, ಈ ಬಗ್ಗೆ, ಚುನಾವಣಾ ಆಯೋಗವು ಕೊಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳು, ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು, ಉಪ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯೋಗದ ಕಾರ್ಯದರ್ಶಿಯು ಸಹ ನಿರ್ವಹಿಸಬಹುದು.

**20. ಮುಖ್ಯ ಚುನಾವಣಾ ಅಧಿಕಾರಿಗಳ ಸಾಮಾನ್ಯ ಕರ್ತವ್ಯಗಳು :-** ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಗಳಿಗೊಳಪಟ್ಟು, ಪ್ರತಿಯೊಂದು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ರಾಜ್ಯದಲ್ಲಿನ ಎಲ್ಲ ಚುನಾವಣೆಗಳನ್ನು ನಡೆಸುವುದರ ಮೇಲ್ವಿಚಾರಣೆ ನೋಡಿಕೊಳ್ಳತಕ್ಕುದು.

**20ಎ. ಜಿಲ್ಲಾ ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯಗಳು :-** (1) ಮುಖ್ಯ ಚುನಾವಣಾ ಅಧಿಕಾರಿಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಗಳಿಗೊಳಪಟ್ಟು ಜಿಲ್ಲಾ ಚುನಾವಣಾ ಅಧಿಕಾರಿಯು ಸಂಸತ್ತು ಮತ್ತು ರಾಜ್ಯದ ವಿಧಾನ ಮಂಡಲದ ಎಲ್ಲ ಚುನಾವಣೆಗಳ ನಡೆಯುವಿಕೆಯ ಸಂಬಂಧದಲ್ಲಿ ಜಿಲ್ಲೆಯಲ್ಲಿನ ಅಥವಾ ಅವನ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿನ ಎಲ್ಲ ಕಾರ್ಯವನ್ನು ಸಮನ್ವಯಗೊಳಿಸತಕ್ಕುದು ಮತ್ತು ಮೇಲ್ವಿಚಾರಣೆ ನೋಡಿಕೊಳ್ಳತಕ್ಕುದು.

(2) ಜಿಲ್ಲಾ ಚುನಾವಣಾ ಅಧಿಕಾರಿಯು, ಚುನಾವಣಾ ಆಯೋಗವು ಮತ್ತು ಮುಖ್ಯ ಚುನಾವಣಾ ಅಧಿಕಾರಿಯು ತನಗೆ ವಹಿಸಿಕೊಡಬಹುದಾದಂಥ ಇತರೆ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕುದು.

**20ಬಿ. ಪರಿವೀಕ್ಷಕರು :-** (1) ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳ ಸಮೂಹದಲ್ಲಿ ಚುನಾವಣೆ ಅಥವಾ ಚುನಾವಣೆಗಳನ್ನು ನಡೆಸುತ್ತಿರುವುದನ್ನು ಗಮನಿಸಲು ಅಥವಾ ಚುನಾವಣಾ ಆಯೋಗವು ತನಗೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ಅಧಿಕಾರಿಯಾಗಿರತಕ್ಕ ಒಬ್ಬ ಪರಿವೀಕ್ಷಕನನ್ನು ಚುನಾವಣಾ ಆಯೋಗವು ನಾಮನಿರ್ದೇಶನ ಮಾಡಬಹುದು.

(2) (1) ನೇ ಉಪ-ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ಪರಿವೀಕ್ಷಕನು, ಬಹಳಷ್ಟು ಮತಗಟ್ಟೆಗಳಲ್ಲಿ ಅಥವಾ ಮತದಾನಕ್ಕೆ ಅಥವಾ ಮತಗಳ ಎಣಿಕೆಗೆ ನಿಗದಿಪಡಿಸಲಾದ ಸ್ಥಳಗಳಲ್ಲಿ ಮತಗಟ್ಟೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಥವಾ ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಲಾದ ಸ್ಥಳದಲ್ಲಿ ಬಳಸಲಾದ ಮತಪತ್ರಗಳನ್ನು ಕಾನೂನು ವಿರುದ್ಧವಾಗಿ ರಿಟರ್ನಿಂಗ್ ಆಫೀಸರನ ಅಭಿರಕ್ಷೆಯಿಂದ ಹೊರಕ್ಕೆ ತೆಗೆದುಕೊಂಡು ಹೋಗಲಾಗಿದೆಯೆಂದು ಅಥವಾ ಅವುಗಳನ್ನು ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಲಾಗಿದೆಯೆಂದು ಅಥವಾ ಅವು ಕಳೆದುಹೋಗಿವೆಯೆಂದು ಅಥವಾ ಆ ಮತಗಟ್ಟೆಯ ಅಥವಾ ಸ್ಥಳದ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲಾಗದಷ್ಟು ಮಟ್ಟಿಗೆ ಅವು ಹಾನಿಗೊಳಗಾಗಿವೆಯೆಂದು ಅಥವಾ ಅವುಗಳನ್ನು ಅಕ್ರಮವಾಗಿ ತಿದ್ದಲಾಗಿದೆ ಎಂದು ಅಭಿಪ್ರಾಯಪಟ್ಟರೆ ಫಲಿತಾಂಶವನ್ನು ಘೋಷಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸಿದಂತೆ ಆ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಆಫೀಸರನಿಗೆ ಅಥವಾ ಅವನು ನಾಮನಿರ್ದೇಶಿತನಾಗಿರುವಂಥ ಚುನಾವಣಾ ಕ್ಷೇತ್ರಗಳ ಪೈಕಿ ಯಾವುದೇ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಆಫೀಸರನಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಪರಿವೀಕ್ಷಕನು ಈ ಪ್ರಕರಣದ ಮೇರೆಗೆ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸದಂತೆ ರಿಟರ್ನಿಂಗ್ ಆಫೀಸರನಿಗೆ ನಿರ್ದೇಶನ ನೀಡಿರುವಲ್ಲಿ, ಆ ಸಂಗತಿಯನ್ನು ಆ ಕೂಡಲೇ ಅವನು ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು ಮತ್ತು ಆ ತರುವಾಯ ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ 58 ಎ ಪ್ರಕರಣ ಅಥವಾ 64 ಎ ಪ್ರಕರಣ ಅಥವಾ 66 ನೇ ಪ್ರಕರಣದ ಮೇರೆಗೆ ಯುಕ್ತ ನಿರ್ದೇಶನಗಳನ್ನು ನೀಡತಕ್ಕುದು.

ವಿವರಣೆ :- (2) ನೇ ಉಪಪ್ರಕರಣ ಮತ್ತು (3) ನೇ ಉಪಪ್ರಕರಣದ ಉದ್ದೇಶಗಳಿಗಾಗಿ "ಪರಿವೀಕ್ಷಕ" ಎಂಬ ಪದವು ಒಂದು ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳ ಸಮೂಹಕ್ಕೆ ಚುನಾವಣೆ ಅಥವಾ ಚುನಾವಣೆಗಳನ್ನು ನಡೆಸುವುದನ್ನು ಗಮನಿಸುವ ಕರ್ತವ್ಯವನ್ನು ಈ ಪ್ರಕರಣದ ಮೇರೆಗೆ ಆಯೋಗವು ವಹಿಸಿಕೊಟ್ಟಿರುವ ಚುನಾವಣಾ ಆಯೋಗದ ಪ್ರಾದೇಶಿಕ ಕಮಿಷನರ್ ಅಥವಾ ಯಾರೇ ಅಂಥ ಅಧಿಕಾರಿಯನ್ನು ಒಳಗೊಳ್ಳತಕ್ಕದ್ದು.

**21. ಚುನಾವಣಾಧಿಕಾರಿಗಳು :-** ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕಾಗಿ ರಾಜ್ಯ ಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವ ಬಗೆಗಿನ ಪ್ರತಿಯೊಂದು ಚುನಾವಣೆಗಾಗಿ ಮತ್ತು ರಾಜ್ಯದ ವಿಧಾನ ಪರಿಷತ್‌ನಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ, ರಾಜ್ಯದ ವಿಧಾನ ಸಭೆಯ ಸದಸ್ಯರಿಂದ ನಡೆಯುವ ಪ್ರತಿಯೊಂದು ಆಯ್ಕೆಗಾಗಿ, ಚುನಾವಣಾ ಆಯೋಗವು, ಆ ರಾಜ್ಯದ ಸರ್ಕಾರದೊಂದಿಗೆ ಸಮಾಲೋಚಿಸಿ, ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕ ಒಬ್ಬ ಚುನಾವಣಾ ಅಧಿಕಾರಿಯನ್ನು ಗೊತ್ತು ಮಾಡತಕ್ಕುದು ಅಥವಾ ನಾಮನಿರ್ದೇಶನ ಮಾಡತಕ್ಕುದು, ಅವನು ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕುದು :

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಒಬ್ಬನೇ ವ್ಯಕ್ತಿಯನ್ನು ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಗಾಗಿ ಚುನಾವಣಾಧಿಕಾರಿಯಾಗಿರುವಂತೆ ಚುನಾವಣಾ ಆಯೋಗವು ಗೊತ್ತು ಮಾಡುವುದಕ್ಕೆ ಅಥವಾ ನಾಮನಿರ್ದೇಶನ ಮಾಡಲು ಪ್ರತಿಬಂಧಿಸತಕ್ಕುದಲ್ಲ.

**22. ಸಹಾಯಕ ಚುನಾವಣಾ ಅಧಿಕಾರಿಗಳು :-** (1) ಚುನಾವಣಾ ಆಯೋಗವು ಯಾವನೇ ಚುನಾವಣಾ ಅಧಿಕಾರಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ಸಹಾಯ ಮಾಡಲು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡಬಹುದು :

ಪರಂತು, ಅಂಥ ಪ್ರತಿಯೊಬ್ಬ ವ್ಯಕ್ತಿಯು, ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕುದು.

(2) ಪ್ರತಿಯೊಬ್ಬ ಸಹಾಯಕ ಚುನಾವಣಾ ಅಧಿಕಾರಿಯು, ಚುನಾವಣಾ ಅಧಿಕಾರಿಯ ನಿಯಂತ್ರಣಕ್ಕೊಳಪಟ್ಟು, ಚುನಾವಣಾ ಅಧಿಕಾರಿಯ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕುದು :

ಪರಂತು, ಯಾವನೇ ಸಹಾಯಕ ಚುನಾವಣಾ ಅಧಿಕಾರಿಯು, ನಾಮಪತ್ರಗಳ ಪರಿಶೀಲನೆಗೆ ಸಂಬಂಧಿಸಿದಂತೆ ಚುನಾವಣಾ ಅಧಿಕಾರಿಯ ಯಾವುವೇ ಪ್ರಕಾರ್ಯಗಳನ್ನು, ಚುನಾವಣಾ ಅಧಿಕಾರಿಯು ಸದರಿ ಪ್ರಕಾರ್ಯವನ್ನು ನಿರ್ವಹಿಸಲು ಅನಿವಾರ್ಯವಾಗಿ ಪ್ರತಿಬಂಧಿತನಾಗಿರುವ ಹೊರತು ನಿರ್ವಹಿಸತಕ್ಕುದಲ್ಲ.

**23. ಚುನಾವಣಾ ಅಧಿಕಾರಿ ಎಂಬುದು ಚುನಾವಣಾ ಪ್ರಕಾರ್ಯಗಳನ್ನು ನಿರ್ವಹಿಸುವ ಸಹಾಯಕ ಚುನಾವಣಾ ಅಧಿಕಾರಿಗಳನ್ನು ಒಳಗೊಳ್ಳುವುದು :-** ಈ ಅಧಿನಿಯಮದಲ್ಲಿ ಚುನಾವಣಾಧಿಕಾರಿಗೆ ಸಂಬಂಧಪಟ್ಟ ಉಲ್ಲೇಖಗಳು ಅನ್ಯಥಾ ಅಗತ್ಯಪಡಿಸಿದ ಹೊರತು 22ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಕಾರ್ಯವನ್ನು ನಿರ್ವಹಿಸಲು ಸಹಾಯಕ ಚುನಾವಣಾ ಅಧಿಕಾರಿಯು ಅಧಿಕೃತನಾಗಿರುವನೋ ಆ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಸಹಾಯಕ ಚುನಾವಣಾಧಿಕಾರಿಯನ್ನು ಒಳಗೊಂಡಿರುವುದಾಗಿ ಭಾವಿಸತಕ್ಕುದು.

**24. ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯ :-** ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಆದೇಶಗಳ ಮೂಲಕ ಉಪಬಂಧಿಸಿರುವ ರೀತಿಯಲ್ಲಿ ಚುನಾವಣೆಯನ್ನು ಪರಿಣಾಮಕಾರಿಯಾಗಿ ನಡೆಸಲು ಅವಶ್ಯವಿರಬಹುದಾದಂಥ ಎಲ್ಲ ಕಾರ್ಯ ಮತ್ತು ಕೆಲಸಗಳನ್ನು ಮಾಡುವುದು ಯಾವುದೇ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕುದು.

**25. ಚುನಾವಣಾ ಕ್ಷೇತ್ರಗಳಿಗಾಗಿ ಮತದಾನ ಕೇಂದ್ರಗಳ ವ್ಯವಸ್ಥೆ :-** ಜಿಲ್ಲಾ ಚುನಾವಣಾ ಅಧಿಕಾರಿಯು, ಚುನಾವಣಾ ಆಯೋಗದ ಪೂರ್ವಾನುಮೋದನೆಯಿಂದ ಯಾವ ಚುನಾವಣಾ ಕ್ಷೇತ್ರದ ಪೂರ್ಣ ಅಥವಾ ಹೆಚ್ಚಿನ ಭಾಗವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದೋ ಆ ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿ ಸಾಕಷ್ಟು ಸಂಖ್ಯೆಯ ಮತದಾನ ಕೇಂದ್ರಗಳನ್ನು ವ್ಯವಸ್ಥೆ ಮಾಡತಕ್ಕುದು ಮತ್ತು ಹಾಗೆ ವ್ಯವಸ್ಥೆ ಮಾಡಲಾದ ಮತದಾನ ಕ್ಷೇತ್ರಗಳನ್ನು ಮತ್ತು ಅವುಗಳನ್ನು ಅನುಕ್ರಮವಾಗಿ ಯಾವ ಮತದಾನ ಪ್ರದೇಶಗಳು ಅಥವಾ ಮತದಾರರ ಗುಂಪುಗಳಿಗಾಗಿ ವ್ಯವಸ್ಥೆ ಮಾಡಲಾಗಿದೆಯೋ ಅವುಗಳನ್ನು ತೋರಿಸುವ ಪಟ್ಟಿಯನ್ನು ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ ಪ್ರಕಟಿಸತಕ್ಕುದು.

**26. ಮತದಾನ ಕೇಂದ್ರಗಳಿಗೆ ಪೀಠಾಸೀನಾಧಿಕಾರಿಗಳ ನೇಮಕ :-** (1) ಜಿಲ್ಲಾ ಚುನಾವಣಾ ಅಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಪೀಠಾಸೀನ ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಯೋಚಿಸುವಂಥ ಮತದಾನ ಅಧಿಕಾರಿಯನ್ನು ಅಥವಾ ಅಧಿಕಾರಿಗಳನ್ನು ನೇಮಕ ಮಾಡತಕ್ಕುದು, ಆದರೆ ಅವನು ಆ ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಒಬ್ಬ ಅಭ್ಯರ್ಥಿಯಿಂದ ಅಥವಾ ಅವನ ಪರವಾಗಿ ನೇಮಕಗೊಂಡಿರುವ ಅಥವಾ ಇತರ ರೀತಿಯಲ್ಲಿ ಆ ಅಭ್ಯರ್ಥಿಗಾಗಿ ಕೆಲಸ ಮಾಡುತ್ತಿರುವ ಯಾವನೇ ವ್ಯಕ್ತಿಯನ್ನು ನೇಮಕ ಮಾಡತಕ್ಕುದಲ್ಲ :

ಪರಂತು, ಒಬ್ಬ ಮತದಾನ ಅಧಿಕಾರಿಯು ಮತದಾನ ಕೇಂದ್ರದಿಂದ ಗೈರು ಹಾಜರಾದಲ್ಲಿ, ಪೀಠಾಸೀನ ಅಧಿಕಾರಿಯು, ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಒಬ್ಬ ಅಭ್ಯರ್ಥಿಯಿಂದ ಅಥವಾ ಅವನ ಪರವಾಗಿ ನೇಮಕಗೊಂಡಿರುವ ಅಥವಾ ಇತರೆ ರೀತಿಯಲ್ಲಿ ಆ ಅಭ್ಯರ್ಥಿಗಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಯನ್ನು ಹೊರತುಪಡಿಸಿ, ಮತದಾನ ಕೇಂದ್ರದಲ್ಲಿ ಹಾಜರಿರುವ ಇತರ ಯಾವನೇ ವ್ಯಕ್ತಿಯನ್ನು ಮೊದಲಿನ ಅಧಿಕಾರಿಯ ಗೈರುಹಾಜರಿಯ ಅವಧಿಯಲ್ಲಿ ಮತದಾನ ಅಧಿಕಾರಿಯಾಗಿರಲು ನೇಮಕ ಮಾಡಬಹುದು, ಮತ್ತು ತದನುಸಾರವಾಗಿ ಅದನ್ನು ಜಿಲ್ಲಾ ಚುನಾವಣಾ ಅಧಿಕಾರಿಗೆ ತಿಳಿಸಬಹುದು :

ಮತ್ತೂ ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಒಬ್ಬನೇ ವ್ಯಕ್ತಿಯನ್ನು ಅದೇ ಆವರಣದಲ್ಲಿರುವ ಒಂದಕ್ಕಿಂತ ಹೆಚ್ಚು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯಾಗಿರುವಂತೆ ನೇಮಕ ಮಾಡಲು ಜಿಲ್ಲಾ ಚುನಾವಣಾಧಿಕಾರಿಯನ್ನು ಪ್ರತಿಬಂಧಿಸತಕ್ಕುದಲ್ಲ.

(2) ಮತದಾನ ಅಧಿಕಾರಿಯು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳು ಅಥವಾ ಆದೇಶಗಳ ಮೇರೆಗೆ ಪೀಠಾಸೀನ ಅಧಿಕಾರಿಯ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಪೀಠಾಸೀನ ಅಧಿಕಾರಿಯಿಂದ ನಿರ್ದೇಶಿತನಾಗಿದ್ದರೆ, ಅವನು ಹಾಗೆ ಮಾಡತಕ್ಕುದು.

(3) ಪೀಠಾಸೀನ ಅಧಿಕಾರಿಯು, ಕಾಯಿಲೆ ಅಥವಾ ಇತರ ಅನಿವಾರ್ಯ ಕಾರಣದಿಂದಾಗಿ ಮತದಾನ ಕೇಂದ್ರದಿಂದ ತಾನು ಕಡ್ಡಾಯವಾಗಿ ಗೈರು ಹಾಜರಾಗಬೇಕಾಗಿದ್ದರೆ ಯಾವುದೇ ಅಂಥ ಗೈರು ಹಾಜರಿಯ ಸಮಯದಲ್ಲಿ ಅಂಥ ಪ್ರಕಾರ್ಯಗಳನ್ನು ನಿರ್ವಹಿಸಲು ಜಿಲ್ಲಾ ಚುನಾವಣಾ ಅಧಿಕಾರಿಯಿಂದ ಈ ಮುಂಚೆ ಅಧಿಕೃತನಾಗಿರುವಂಥ ಯಾವನೇ ಮತದಾನ ಅಧಿಕಾರಿಯು ಅವನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(4) ಈ ಅಧಿನಿಯಮದಲ್ಲಿ ಪೀಠಾಸೀನ ಅಧಿಕಾರಿಯನ್ನು ಕುರಿತ ಉಲ್ಲೇಖಗಳು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಸಂದರ್ಭಾನುಸಾರ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಕಾರ್ಯವನ್ನು ನಿರ್ವಹಿಸಲು ತಾನು ಅಧಿಕೃತನಾಗಿರುವನೋ ಆ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯನ್ನು ಒಳಗೊಂಡಿರುವುದಾಗಿ ಭಾವಿಸತಕ್ಕುದು.

**27. ಪೀಠಾಸೀನ ಅಧಿಕಾರಿಯ ಸಾಮಾನ್ಯ ಕರ್ತವ್ಯ :-** ಮತದಾನ ಕೇಂದ್ರದಲ್ಲಿ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು ಮತ್ತು ಮತದಾನವು ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತದಾನ ಕೇಂದ್ರದಲ್ಲಿರುವ ಪೀಠಾಸೀನ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕುದು.

**28. ಮತದಾನಾಧಿಕಾರಿಯ ಕರ್ತವ್ಯಗಳು :-** ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅಂಥ ಪೀಠಾಸೀನ ಅಧಿಕಾರಿಗೆ ಸಹಾಯ ಮಾಡುವುದು ಮತದಾನ ಕೇಂದ್ರದಲ್ಲಿರುವ ಮತದಾನ ಅಧಿಕಾರಿಗಳ ಕರ್ತವ್ಯವಾಗಿರತಕ್ಕುದು.

**28ಎ. ಚುನಾವಣಾ ಅಧಿಕಾರಿ, ಪೀಠಾಸೀನ ಅಧಿಕಾರಿ, ಮೊದಲಾದವರು ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾದವರೆಂದು ಭಾವಿಸುವುದು :-** ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿ ಈ ಭಾಗದ ಮೇರೆಗೆ ನೇಮಕಗೊಂಡ ಚುನಾವಣಾ ಅಧಿಕಾರಿ, ಸಹಾಯಕ ಚುನಾವಣಾ ಅಧಿಕಾರಿ, ಪೀಠಾಸೀನ ಅಧಿಕಾರಿ, ಮತದಾನಾಧಿಕಾರಿ ಮತ್ತು ಯಾವನೇ ಇತರೆ ಅಧಿಕಾರಿ ಮತ್ತು ರಾಜ್ಯ ಸರ್ಕಾರವು ತತ್ಕಾಲದಲ್ಲಿ ಗೊತ್ತು ಮಾಡಿದ ಯಾವನೇ ಪೊಲೀಸ್ ಅಧಿಕಾರಿ- ಇವರುಗಳು ಅಂಥ ಚುನಾವಣೆಯನ್ನು ಆಹ್ವಾನಿಸುವ ಅಧಿಸೂಚನೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಪ್ರಾರಂಭವಾಗುವ ಮತ್ತು ಅಂಥ ಚುನಾವಣೆಯ ಫಲಿತಾಂಶಗಳ ಘೋಷಣೆಯ ದಿನಾಂಕದಂದು ಕೊನೆಗೊಳ್ಳುವ ಅವಧಿಯವರೆಗೆ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವವರು ಎಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ, ಅಂಥ ಅಧಿಕಾರಿಗಳು ಆ ಅವಧಿಯಲ್ಲಿ ಚುನಾವಣಾ ಆಯೋಗದ ನಿಯಂತ್ರಣ, ಅಧೀಕ್ಷಣೆ ಮತ್ತು ಶಿಸ್ತಿಗೆ ಒಳಪಟ್ಟಿರತಕ್ಕುದು.

**29. ಕೆಲವು ಚುನಾವಣೆಗಳ ಸಂದರ್ಭದಲ್ಲಿ ವಿಶೇಷ ವ್ಯವಸ್ಥೆಗಳು :-** (1) ರಾಜ್ಯ ಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿನ ಚುನಾವಣೆಗಾಗಿ ಅಥವಾ ರಾಜ್ಯದ ವಿಧಾನ ಪರಿಷತ್ತಿನಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ರಾಜ್ಯದ ವಿಧಾನ ಸಭೆಯ ಸದಸ್ಯರಿಂದ ನಡೆಯುವ ಚುನಾವಣೆಗಾಗಿ ಇರುವ ಚುನಾವಣಾಧಿಕಾರಿಯು ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು ಅಂಥ ಚುನಾವಣೆಗಾಗಿ ಮತದಾನ ನಡೆಯುವ ಸ್ಥಳವನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ನಿಗದಿಪಡಿಸಿದ ಸ್ಥಳವನ್ನು ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕುದು.

(2) ಚುನಾವಣಾಧಿಕಾರಿಯು, ಹಾಗೆ ನಿಗದಿಪಡಿಸಿದ ಸ್ಥಳದಲ್ಲಿ ಅಂಥ ಚುನಾವಣೆಯ (ಅಧಿಪತ್ಯವನ್ನು ವಹಿಸಿಕೊಳ್ಳತಕ್ಕುದು ಮತ್ತು ಅವನು ಅವಶ್ಯವೆಂದು ಯೋಚಿಸುವಂಥ ಮತದಾನಾಧಿಕಾರಿ ಅಥವಾ ಅಧಿಕಾರಿಗಳನ್ನು ತನಗೆ ಸಹಾಯ ಮಾಡಲು ನೇಮಕ ಮಾಡತಕ್ಕುದು, ಆದರೆ ಅವನು ಆ ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಒಬ್ಬ ಅಭ್ಯರ್ಥಿಯಿಂದ ಅಥವಾ ಅವನ ಪರವಾಗಿ ನೇಮಕಗೊಂಡಿರುವ ಅಥವಾ ಇತರೆ ರೀತಿಯಲ್ಲಿ ಅಭ್ಯರ್ಥಿಗಾಗಿ ಕೆಲಸ ಮಾಡುತ್ತಿರುವ ಯಾವನೇ ವ್ಯಕ್ತಿಯನ್ನು ನೇಮಕ ಮಾಡತಕ್ಕುದಲ್ಲ.

## ಭಾಗ - IV ಎ

## ರಾಜಕೀಯ ಪಕ್ಷಗಳ ನೋಂದಣಿ

**29ಎ. ಸಂಘಗಳು ಮತ್ತು ನಿಕಾಯಗಳನ್ನು ರಾಜಕೀಯ ಪಕ್ಷಗಳೆಂದು ಚುನಾವಣಾ ಆಯೋಗದಲ್ಲಿ ನೋಂದಾಯಿಸುವುದು :-** (1) ತನ್ನನ್ನು ಒಂದು ರಾಜಕೀಯ ಪಕ್ಷವೆಂದು ಕರೆದುಕೊಳ್ಳುವ ಮತ್ತು ಈ ಭಾಗದ ಉಪಬಂಧಗಳ ಪ್ರಯೋಜನವನ್ನು ತಾನು ಪಡೆಯಲಿಚ್ಛಿಸುವ ಭಾರತದ ವ್ಯಕ್ತಿಗತ ನಾಗರಿಕರ ಯಾವುದೇ ಸಂಘ ಅಥವಾ ನಿಕಾಯವು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಅದನ್ನು ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸುವುದಕ್ಕಾಗಿ ಚುನಾವಣಾ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸತಕ್ಕುದು.

(2) ಅಂಥ ಪ್ರತಿಯೊಂದು ಅರ್ಜಿಯನ್ನು,-

(ಎ) ಆ ಸಂಘವು ಅಥವಾ ನಿಕಾಯವು ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಅಧಿನಿಯಮ, 1988 (1989ರ 1)ರ ಪ್ರಾರಂಭ ಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದರೆ, ಹಾಗೆ ಪ್ರಾರಂಭವಾದ ನಿಕಟ ತರುವಾಯದ ಅರವತ್ತು ದಿವಸಗಳೊಳಗೆ ;

(ಬಿ) ಆ ಸಂಘ ಅಥವಾ ನಿಕಾಯವನ್ನು ಅಂಥ ಪ್ರಾರಂಭದ ತರುವಾಯ ರಚಿಸಲಾಗಿದ್ದರೆ ಅದರ ರಚನೆಯ ದಿನಾಂಕದ ನಿಕಟ ತರುವಾಯದ ಮೂವತ್ತು ದಿವಸಗಳೊಳಗೆ ಸಲ್ಲಿಸತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಗೆ, ಆ ಸಂಘ ಅಥವಾ ನಿಕಾಯದ ಮುಖ್ಯ ನಿರ್ವಹಣಾ ಅಧಿಕಾರಿಯು (ಅಂಥ ಮುಖ್ಯ ನಿರ್ವಹಣಾ ಅಧಿಕಾರಿಯನ್ನು ಕಾರ್ಯದರ್ಶಿ ಎಂದು ಅಥವಾ ಯಾವುದೇ ಇತರ ಪದನಾಮದಿಂದ ಕರೆಯಲಿ) ಸಹಿ ಹಾಕಿರತಕ್ಕುದು ಮತ್ತು ಅದನ್ನು ಆಯೋಗದ ಕಾರ್ಯದರ್ಶಿಗೆ ಒಪ್ಪಿಸತಕ್ಕುದು ಅಥವಾ ಅಂಥ ಕಾರ್ಯದರ್ಶಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕುದು.

(4) ಅಂಥ ಪ್ರತಿಯೊಂದು ಅರ್ಜಿಯು, ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕುದು, ಎಂದರೆ :-

(ಎ) ಸಂಘ ಅಥವಾ ನಿಕಾಯದ ಹೆಸರು ;

(ಬಿ) ಅದರ ಮುಖ್ಯ ಕಚೇರಿ ಇರುವ ರಾಜ್ಯ ;

(ಸಿ) ಅದಕ್ಕೆ ಸಂಬಂಧಪಟ್ಟ ಪತ್ರಗಳು ಮತ್ತು ಇತರ ಪತ್ರ ವ್ಯವಹಾರಗಳನ್ನು ಯಾವ ವಿಳಾಸಕ್ಕೆ ಕಳಿಸಬೇಕೋ ಆ ವಿಳಾಸ ;

(ಡಿ) ಅದರ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಮತ್ತು ಇತರ ಪದಾಧಿಕಾರಿಗಳ ಹೆಸರುಗಳು ;

(ಇ) ಅದರ ಸದಸ್ಯರ ಸಂಖ್ಯಾಬಲ ಮತ್ತು ಅದರ ಸದಸ್ಯರ ಪ್ರವರ್ಗಗಳು ಇದ್ದರೆ, ಪ್ರತಿಯೊಂದು ಪ್ರವರ್ಗದಲ್ಲಿನ ಸಂಖ್ಯಾಬಲ ;

(ಎಫ್) ಅದು ಯಾವುದೇ ಸ್ಥಳೀಯ ಘಟಕಗಳನ್ನು ಹೊಂದಿದೆಯೇ, ಹಾಗಿದ್ದರೆ ಯಾವ ಮಟ್ಟಗಳಲ್ಲಿ ;

(ಜಿ) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿ ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದಲ್ಲಿ ಯಾವನೇ ಸದಸ್ಯ ಅಥವಾ ಸದಸ್ಯರು ಅದನ್ನು ಪ್ರತಿನಿಧಿಸುತ್ತಿರುವರೇ, ಹಾಗಿದ್ದರೆ ಅಂಥ ಸದಸ್ಯ ಅಥವಾ ಸದಸ್ಯರ ಸಂಖ್ಯೆ.

(5) (1)ನೆಯ ಉಪಪ್ರಕರಣದ ಮೇರೆಗಿನ ಅರ್ಜಿಯ ಜೊತೆ, ಯಾವುದೇ ಹೆಸರಿನಿಂದ ಕರೆಯಲಾಗುವ ಸಂಘ ಅಥವಾ ನಿಕಾಯದ ಜ್ಞಾಪನಪತ್ರ ಅಥವಾ ನಿಯಮಗಳು ಮತ್ತು ವಿನಿಯಮಗಳ ಪ್ರತಿಯು ಇರತಕ್ಕುದು. ಮತ್ತು ಅಂಥ ಜ್ಞಾಪನಪತ್ರವು ಅಥವಾ ನಿಯಮಗಳು ಮತ್ತು ವಿನಿಯಮಗಳು ಆ ಸಂಘ ಅಥವಾ ನಿಕಾಯವು ಕಾನೂನು ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ಮತ್ತು ಸಮಾಜವಾದ, ಸರ್ವಧರ್ಮ ಸಮಭಾವ ಮತ್ತು ಪ್ರಜಾಪ್ರಭುತ್ವದ ತತ್ವಗಳಿಗೆ ಸತ್ಯ, ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುವುದು ಎಂಬ ಮತ್ತು ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಯನ್ನು ಎತ್ತಿಹಿಡಿಯುವುದು ಎಂಬ ನಿರ್ದಿಷ್ಟ ಉಪಬಂಧವನ್ನು ಒಳಗೊಂಡಿರತಕ್ಕುದು.

(6) ಆಯೋಗವು ಸಂಘ ಅಥವಾ ನಿಕಾಯದಿಂದ ತಾನು ಯುಕ್ತವೆಂದು ಭಾವಿಸಬಹುದಾದಂಥ ಇತರ ವಿವರಗಳನ್ನು ತರಿಸಿಕೊಳ್ಳಬಹುದು.

(7) ಆಯೋಗವು ತನ್ನ ಸ್ವಾಧೀನದಲ್ಲಿರುವ ಮೇಲೆ ಹೇಳಿದ ಎಲ್ಲ ವಿವರಗಳನ್ನು ಮತ್ತು ಯಾವುವೇ ಇತರೆ ಅವಶ್ಯಕ ಮತ್ತು ಸುಸಂಗತವಾದ ಅಂಶಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಸಂಘದ ಅಥವಾ ನಿಕಾಯದ ಪ್ರತಿನಿಧಿಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಅದು, ಈ ಭಾಗದ ಉದ್ದೇಶಗಳಿಗಾಗಿ ಆ ಸಂಘ ಅಥವಾ ನಿಕಾಯವನ್ನು ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸಲು ತೀರ್ಮಾನಿಸತಕ್ಕುದು, ಅಥವಾ ಹಾಗೆ ನೋಂದಾಯಿಸದಿರಲು ತೀರ್ಮಾನಿಸತಕ್ಕುದು ; ಮತ್ತು ಆಯೋಗವು ತನ್ನ ತೀರ್ಮಾನವನ್ನು ಆ ಸಂಘ ಅಥವಾ ನಿಕಾಯಕ್ಕೆ ತಿಳಿಸತಕ್ಕುದು :

ಪರಂತು, ಅಂಥ ಸಂಘ ಅಥವಾ ನಿಕಾಯದ ಜ್ಞಾಪನಪತ್ರ ಅಥವಾ ನಿಯಮಗಳು ಮತ್ತು ವಿನಿಯಮಗಳು (5)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಗುಣವಾಗಿದ್ದ ಹೊರತು, ಈ ಉಪಪ್ರಕರಣದ ಮೇರೆಗೆ ಯಾವುದೇ ಸಂಘ ಅಥವಾ ನಿಕಾಯವನ್ನು ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸತಕ್ಕುದಲ್ಲ.

(8) ಆಯೋಗದ ತೀರ್ಮಾನವು ಅಂತಿಮವಾಗಿರತಕ್ಕುದು.

(9) ಒಂದು ಸಂಘ ಅಥವಾ ನಿಕಾಯವನ್ನು ಮೇಲೆ ಹೇಳಿದಂತೆ ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸಿದ ತರುವಾಯ, ಅದರ ಹೆಸರು, ಮುಖ್ಯ ಕಚೇರಿ, ಪದಾಧಿಕಾರಿಗಳು, ವಿಳಾಸ ಅಥವಾ ಯಾವುದೇ ಇತರ ಮುಖ್ಯ ವಿಷಯಗಳಲ್ಲಿ ಉಂಟಾಗುವ ಯಾವುದೇ ಬದಲಾವಣೆಯನ್ನು ವಿಳಂಬ ಮಾಡದೆ ಆಯೋಗಕ್ಕೆ ತಿಳಿಸತಕ್ಕುದು.

**29ಬಿ. ರಾಜಕೀಯ ಪಕ್ಷಗಳು ವಂತಿಗೆಯನ್ನು ಸ್ವೀಕರಿಸುವ ಹಕ್ಕು :-** ಕಂಪನಿಗಳ ಅಧಿನಿಯಮ, 1956ರ (1956ರ 1) ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ರಾಜಕೀಯ ಪಕ್ಷವು, ಸರ್ಕಾರಿ ಕಂಪನಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಯಿಂದ ಅಥವಾ ಕಂಪನಿಯಿಂದ ಅದಕ್ಕೆ ಸ್ವಚ್ಛೆಯಿಂದ ನೀಡಿದ ಯಾವುದೇ ಮೊತ್ತದ ವಂತಿಗೆಯನ್ನು ಸ್ವೀಕರಿಸಬಹುದು:

ಪರಂತು, ಯಾವುದೇ ರಾಜಕೀಯ ಪಕ್ಷವು, ವಿದೇಶಿ ವಂತಿಗೆ (ನಿಯಂತ್ರಣ) ಅಧಿನಿಯಮ, 1976ರ (1976ರ 46) 2ನೇ ಪ್ರಕರಣದ (ಇ) ಖಂಡದ ಅಡಿಯಲ್ಲಿ ಪರಿಭಾಷಿಸಿದಂತೆ ಯಾವುದೇ ವಿದೇಶಿ ಮೂಲದಿಂದ ಯಾವುದೇ ವಂತಿಗೆಯನ್ನು ಸ್ವೀಕರಿಸಲು ಅರ್ಹವಾಗಿರತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಮತ್ತು 29ಸಿ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಕಂಪನಿ;

(ಬಿ) "ಸರ್ಕಾರಿ ಕಂಪನಿ" ಎಂದರೆ 617ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಕಂಪನಿ; ಮತ್ತು

(ಸಿ) "ವಂತಿಗೆ"ಯು ಕಂಪನಿಗಳ ಅಧಿನಿಯಮ, 1956ರ (1956ರ 1) 293ಎ ಪ್ರಕರಣದ ಅಡಿಯಲ್ಲಿ ಅದಕ್ಕೆ ನೀಡಿದ ಅರ್ಥವನ್ನು ಹೊಂದಿರುತ್ತದೆ ಮತ್ತು ರಾಜಕೀಯ ಪಕ್ಷಕ್ಕೆ ಯಾರೇ ವ್ಯಕ್ತಿಯು ನೀಡಿದ ಯಾವುದೇ ದೇಣಿಗೆ ಅಥವಾ ಚಂದಾವನ್ನು ಒಳಗೊಳ್ಳುತ್ತದೆ; ಮತ್ತು

(ಡಿ) "ವ್ಯಕ್ತಿ" ಎಂಬ ಪದವು ಆದಾಯ ತೆರಿಗೆ ಅಧಿನಿಯಮ, 1961ರ (1961ರ 43) 2ನೇ ಪ್ರಕರಣದ (31)ನೇ ಖಂಡದ ಅಡಿಯಲ್ಲಿ ಅದಕ್ಕೆ ನೀಡಲಾದ ಅರ್ಥವನ್ನು ಹೊಂದಿರುತ್ತದೆ, ಆದರೆ ಸರ್ಕಾರಿ ಕಂಪನಿ, ಸ್ಥಳೀಯ ಪ್ರಾಧಿಕಾರ ಮತ್ತು ಸರ್ಕಾರದಿಂದ ಪೂರ್ಣವಾಗಿ ಅಥವಾ ಭಾಗಶಃ ನಿಧಿಯನ್ನು ಪಡೆಯುವ ಪ್ರತಿಯೊಬ್ಬ ಕೃತಕ ನ್ಯಾಯಿಕ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

**29ಸಿ. ರಾಜಕೀಯ ಪಕ್ಷಗಳು ಸ್ವೀಕರಿಸಿದ ದೇಣಿಗೆಯ ಘೋಷಣೆ :-** (1) ರಾಜಕೀಯ ಪಕ್ಷದ ಖಜಾಂಚಿ ಅಥವಾ ಈ ಬಗ್ಗೆ ರಾಜಕೀಯ ಪಕ್ಷದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು, ಪ್ರತಿ ಹಣಕಾಸು ವರ್ಷದಲ್ಲಿ, ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ವರದಿಯನ್ನು ತಯಾರಿಸತಕ್ಕದ್ದು, ಎಂದರೆ:-

(ಎ) ಆ ಹಣಕಾಸು ವರ್ಷದಲ್ಲಿ ಯಾರೇ ವ್ಯಕ್ತಿಯಿಂದ ಅಂಥ ರಾಜಕೀಯ ಪಕ್ಷವು ಸ್ವೀಕರಿಸಿದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮೀರಿದ ವಂತಿಗೆ;

(ಬಿ) ಆ ಹಣಕಾಸು ವರ್ಷದಲ್ಲಿ ಸರ್ಕಾರಿ ಕಂಪನಿಗಳನ್ನು ಹೊರತುಪಡಿಸಿ ಇತರ ಕಂಪನಿಗಳಿಂದ ಅಂಥ ರಾಜಕೀಯ ಪಕ್ಷವು ಸ್ವೀಕರಿಸಿದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮೀರಿದ ವಂತಿಗೆ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ವರದಿಯು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಹಣಕಾಸು ವರ್ಷದ ವರದಿಯನ್ನು, ಆದಾಯ ತೆರಿಗೆ ಅಧಿನಿಯಮ, 1961ರ (1961ರ 43) 139ನೇ ಪ್ರಕರಣದ ಅಡಿಯಲ್ಲಿ ಆ ಹಣಕಾಸು ವರ್ಷದ ತನ್ನ ಆದಾಯದ ವಿವರಪಟ್ಟಿಕೆಯನ್ನು ಒದಗಿಸುವುದಕ್ಕೆ ನಿಗದಿತ ದಿನಾಂಕಕ್ಕೆ ಮುಂಚೆ ರಾಜಕೀಯ ಪಕ್ಷದ ಖಜಾಂಚಿ ಅಥವಾ ಈ ಬಗ್ಗೆ ರಾಜಕೀಯ ಪಕ್ಷದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

(4) ಯಾವುದೇ ರಾಜಕೀಯ ಪಕ್ಷದ ಖಜಾಂಚಿ ಅಥವಾ ಈ ಬಗ್ಗೆ ರಾಜಕೀಯ ಪಕ್ಷದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು (3)ನೇ ಉಪಪ್ರಕರಣದ ಅಡಿಯಲ್ಲಿ ವರದಿಯನ್ನು ಸಲ್ಲಿಸಲು ವಿಫಲನಾದಲ್ಲಿ, ತದನಂತರ, ಆದಾಯ ತೆರಿಗೆ ಅಧಿನಿಯಮ, 1961 ರಲ್ಲಿ (1961ರ 43) ಏನೇ ಇದ್ದರೂ, ಅಂಥ ರಾಜಕೀಯ ಪಕ್ಷವು ಆ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ ವಿನಾಯಿತಿ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

## ಭಾಗ - V

## ಚುನಾವಣೆಗಳನ್ನು ನಡೆಸುವುದು

### ಅಧ್ಯಾಯ I - ಅಭ್ಯರ್ಥಿಗಳ ನಾಮ ನಿರ್ದೇಶನ

**30. ನಾಮ ನಿರ್ದೇಶನ ಪತ್ರಗಳು, ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು :-** ಸದಸ್ಯನನ್ನು ಅಥವಾ ಸದಸ್ಯರನ್ನು ಆಯ್ಕೆ ಮಾಡುವುದಕ್ಕೆ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ -

(ಎ) ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು. ಆ ದಿನಾಂಕವು ಮೊದಲು ಹೇಳಿದ ಅಧಿಸೂಚನೆಯ ಪ್ರಕಟಣೆಯ ದಿನಾಂಕದ ತರುವಾಯದ ಏಳನೆಯ ದಿವಸವಾಗಿರತಕ್ಕುದು, ಅಥವಾ ಆ ದಿವಸವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವಜನಿಕ ರಜಾದಿನವಲ್ಲದ, ತರುವಾಯ ಬರುವ ದಿವಸವಾಗಿರತಕ್ಕುದು ;

(ಬಿ) ನಾಮ ನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ದಿನಾಂಕವನ್ನು ಗೊತ್ತು ಮಾಡತಕ್ಕುದು, ಈ ದಿನಾಂಕವು ನಾಮ ನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕಕ್ಕೆ ನಿಕಟ ತರುವಾಯದ ದಿವಸವಾಗಿರತಕ್ಕುದು ಅಥವಾ, ಆ ದಿವಸವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು ;

(ಸಿ) ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು. ಈ ದಿನಾಂಕವು ನಾಮ ನಿರ್ದೇಶನ ಪತ್ರದ ಪರಿಶೀಲನೆಗಾಗಿನ ದಿನಾಂಕದ ತರುವಾಯದ ಎರಡನೆಯ ದಿವಸವಾಗಿರತಕ್ಕುದು ಅಥವಾ, ಆ ದಿವಸವು ಸಾರ್ವಜನಿಕ ರಜೆ ದಿವಸವಾಗಿದ್ದರೆ, ಸಾರ್ವತ್ರಿಕ ರಜಾ ದಿವಸವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು ;

(ಡಿ) ಅವಶ್ಯವಾದರೆ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳನ್ನು ಗೊತ್ತು ಮಾಡತಕ್ಕುದು, ಈ ದಿನಾಂಕವು ಅಥವಾ ಅದರ ಮೊದಲನೆಯ ದಿನಾಂಕವು ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕದ ತರುವಾಯದ ಹದಿನಾಲ್ಕನೆಯ ದಿವಸಕ್ಕಿಂತ ಮುಂಚಿತವಾದುದಾಗಿರತಕ್ಕುದಲ್ಲ ; ಮತ್ತು

(ಇ) ಯಾವ ದಿನಾಂಕಕ್ಕೆ ಮುಂಚೆ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕುದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕುದು.

**31. ಚುನಾವಣೆಯ ಬಗ್ಗೆ ಸಾರ್ವಜನಿಕ ನೋಟೀಸು :–** 30ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಚುನಾವಣಾ ಅಧಿಕಾರಿಯು ಉದ್ದೇಶಿತ ಚುನಾವಣೆಗಾಗಿ ಅಭ್ಯರ್ಥಿಗಳ ನಾಮ ನಿರ್ದೇಶನ ಪತ್ರಗಳನ್ನು ಆಹ್ವಾನಿಸಿ ಮತ್ತು ಆ ನಾಮನಿರ್ದೇಶನ ಪತ್ರಗಳನ್ನು ಒಪ್ಪಿಸಬೇಕಾದ ಸ್ಥಳವನ್ನು ನಿರ್ದಿಷ್ಟಪಡಿಸಿ, ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಅಂಥ ಚುನಾವಣೆ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕುದು.

**32. ಚುನಾವಣೆಗಾಗಿ ಅಭ್ಯರ್ಥಿಗಳ ನಾಮನಿರ್ದೇಶನ :–** ಯಾವನೇ ವ್ಯಕ್ತಿಯು, ಸಂವಿಧಾನದ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, 1963 (1963ರ 20)ರ ಮೇರೆಗೆ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗಿದ್ದರೆ ಅವನನ್ನು ಆ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಗಾಗಿ ಒಬ್ಬ ಅಭ್ಯರ್ಥಿಯೆಂದು ನಾಮನಿರ್ದೇಶನ ಮಾಡಬಹುದು.

**33. ನಾಮನಿರ್ದೇಶನ ಪತ್ರವನ್ನು ಸಲ್ಲಿಸುವುದು ಮತ್ತು ಕಾನೂನು ಮಾನ್ಯ ನಾಮನಿರ್ದೇಶನ ಪತ್ರಕ್ಕಾಗಿನ ಅಗತ್ಯತೆಗಳು :–** (1) 30ನೇ ಪ್ರಕರಣದ (ಎ) ಖಂಡದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ಅಥವಾ ಅವನ ಸೂಚಕನ ಮೂಲಕ ಪೂರ್ವಾಹ್ನ 11 ಗಂಟೆಯ ಮತ್ತು ಅಪರಾಹ್ನ 3 ಗಂಟೆಯ ನಡುವಣ ಸಮಯದಲ್ಲಿ, ಗೊತ್ತುಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿರುವ ಮತ್ತು ಅಭ್ಯರ್ಥಿ ಮತ್ತು ಆ ಚುನಾವಣಾ ಕ್ಷೇತ್ರದ ಮತದಾರನು ಸೂಚಕನೆಂದು ಸಹಿ ಮಾಡಿದ ನಾಮನಿರ್ದೇಶನ ಪತ್ರವನ್ನು 31ನೇ ಪ್ರಕರಣದ ಮೇರೆಗೆ ಹೊರಡಿಸಿದ ನೋಟೀಸಿನಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಚುನಾವಣಾಧಿಕಾರಿಗೆ ಒಪ್ಪಿಸತಕ್ಕುದು :

ಪರಂತು, ಮಾನ್ಯತೆ ಪಡೆದ ಒಂದು ರಾಜಕೀಯ ಪಕ್ಷವು ನಿಲ್ಲಿಸಿರದ ಅಭ್ಯರ್ಥಿಯು, ಒಂದು ಚುನಾವಣಾ ಕ್ಷೇತ್ರದ ಮತದಾರರಾಗಿರುವ ಹತ್ತು ಜನ ಸೂಚಕರು ನಾಮನಿರ್ದೇಶನ ಪತ್ರಕ್ಕೆ ರುಜು ಮಾಡಿದ್ದ ಹೊರತು ಅವನು ಆ ಚುನಾವಣಾ ಕ್ಷೇತ್ರದಿಂದ ಚುನಾವಣೆಗಾಗಿ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿದ್ದಾನೆಂದು ಭಾವಿಸತಕ್ಕದ್ದಲ್ಲ :

ಮತ್ತೂ ಪರಂತು, ಸಾರ್ವಜನಿಕ ರಜಾ ದಿನದಂದು ಯಾವುದೇ ನಾಮನಿರ್ದೇಶನ ಪತ್ರವನ್ನು ರಿಟರ್ನಿಂಗ್ ಆಫೀಸರನಿಗೆ ಒಪ್ಪಿಸತಕ್ಕದ್ದಲ್ಲ:

ಅದೂ ಅಲ್ಲದೆ, ಸ್ಥಳೀಯ ಪ್ರಾಧಿಕಾರಗಳ ಚುನಾವಣಾ ಕ್ಷೇತ್ರ, ಪದವೀಧರರ ಚುನಾವಣಾ ಕ್ಷೇತ್ರ ಅಥವಾ ಶಿಕ್ಷಕರ ಚುನಾವಣಾ ಕ್ಷೇತ್ರಗಳ ಸಂದರ್ಭದಲ್ಲಿ "ಸೂಚಕನಾಗಿ ಚುನಾವಣಾ ಕ್ಷೇತ್ರದ ಮತದಾರ" ಎಂಬುದಕ್ಕೆ ಮಾಡಿದ ಉಲ್ಲೇಖವನ್ನು "ಸೂಚಕರಾಗಿ ಚುನಾವಣಾ ಕ್ಷೇತ್ರದ ಮತದಾರರ ಪೈಕಿ ಶೇಕಡಾ ಹತ್ತರಷ್ಟು ಮತದಾರರು ಅಥವಾ ಅಂಥ ಹತ್ತು ಮತದಾರರು – ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು" ಎಂಬುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಿಕ್ಕಿಂ ವಿಧಾನ ಸಭೆಯ ಚುನಾವಣೆಗಾಗಿ (ಸಂವಿಧಾನದ ಮೇರೆಗೆ ಕ್ರಮಬದ್ಧವಾಗಿ ರಚಿತವಾದ ಆ ರಾಜ್ಯದ ವಿಧಾನ ಸಭೆಯಾಗಿರುವುದಾಗಿ ಭಾವಿಸಲಾಗಿದೆ) ಚುನಾವಣಾ ಅಧಿಕಾರಿಗೆ ಒಪ್ಪಿಸಬೇಕಾದ ನಾಮ ನಿರ್ದೇಶನ ಪತ್ರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಇರತಕ್ಕುದು :

ಪರಂತು, ಸದರಿ ನಾಮಪತ್ರಕ್ಕೆ ಆ ನಾಮಪತ್ರವನ್ನು ಸಮ್ಮತಿಸಿರುವ ಅಭ್ಯರ್ಥಿಯ ; ಮತ್ತು

(ಎ) ಭೂಟಿಯಾ – ಲೆಪ್ಚಾ ಮೂಲದ ಸಿಕ್ಕಿಮೀಯರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಚುನಾವಣಾ ಕ್ಷೇತ್ರದ ಕನಿಷ್ಠ ಇಪ್ಪತ್ತು ಮತದಾರರು ಸಹ ಸೂಚಕರೆಂದು ಮತ್ತು ಆ ಚುನಾವಣಾ ಕ್ಷೇತ್ರದ ಇಪ್ಪತ್ತು ಸದಸ್ಯರು ಅನುಮೋದಕರೆಂದು ;

(ಬಿ) ಸಂಘ ಜನರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಆ ಚುನಾವಣಾ ಕ್ಷೇತ್ರದ ಕನಿಷ್ಠ ಇಪ್ಪತ್ತು ಮತದಾರರು ಸಹ ಸೂಚಕರೆಂದು ಮತ್ತು ಆ ಚುನಾವಣಾ ಕ್ಷೇತ್ರದ ಕನಿಷ್ಠ ಇಪ್ಪತ್ತು ಮತದಾರರು ಅನುಮೋದಕರೆಂದು ;

(ಸಿ) ನೇಪಾಳಿ ಮೂಲದ ಸಿಕ್ಕಿಮೀಯರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಚುನಾವಣಾ ಕ್ಷೇತ್ರದ ಒಬ್ಬ ಮತದಾರನು ಸೂಚಕನೆಂದು ಸಹಿ ಹಾಕಿರತಕ್ಕದು :

ಮತ್ತೂ ಪರಂತು, ಯಾವುದೇ ನಾಮನಿರ್ದೇಶನದ ಪತ್ರವನ್ನು ಚುನಾವಣಾ ಅಧಿಕಾರಿಗೆ ಸಾರ್ವಜನಿಕ ರಜಾ ದಿವಸವಾಗಿರುವ ದಿನದಂದು ಒಪ್ಪಿಸತಕ್ಕದಲ್ಲ.

(2) ಯಾವುದೇ ಸ್ಥಾನವನ್ನು ಮೀಸಲಿಟ್ಟಿರುವ ಚುನಾವಣಾ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯು ತಾನು ಸದಸ್ಯನಾಗಿರುವ ನಿರ್ದಿಷ್ಟ ಜಾತಿ ಅಥವಾ ಬುಡಕಟ್ಟನ್ನು ಮತ್ತು ಯಾವ ಪ್ರದೇಶದ ಸಂಬಂಧದಲ್ಲಿ ಆ ಜಾತಿ ಅಥವಾ ಬುಡಕಟ್ಟು, ಸಂದರ್ಭಾನುಸಾರ ಆ ರಾಜ್ಯದ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟು ಆಗಿದೆಯೋ ಆ ಪ್ರದೇಶವನ್ನು ನಿರ್ದಿಷ್ಟಪಡಿಸುವ ಅವನ ಘೋಷಣೆಯನ್ನು ಅವನ ನಾಮನಿರ್ದೇಶನ ಪತ್ರವು ಒಳಗೊಂಡಿರುವ ಹೊರತು, ಆ ಸ್ಥಾನವನ್ನು ಭರ್ತಿ ಮಾಡಲು ಆಯ್ಕೆಯಾಗಲು ಅವನು ಅರ್ಹನಾಗಿರುವುದಾಗಿ ಭಾವಿಸತಕ್ಕದಲ್ಲ.

(3) ಅಭ್ಯರ್ಥಿಯು 9ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಪದ ಧಾರಣ ಮಾಡಿದ್ದು ವಜಾ ಆಗಿರುವ ವ್ಯಕ್ತಿಯಾಗಿರುವಲ್ಲಿ ಮತ್ತು ಹಾಗೆ ವಜಾ ಆದಂದಿನಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾಗಿಲ್ಲದಿರುವಲ್ಲಿ ಅಂಥ ವ್ಯಕ್ತಿಯ ನಾಮನಿರ್ದೇಶನದ ಪತ್ರವು ಅವನನ್ನು ಭ್ರಷ್ಟಾಚಾರಕ್ಕಾಗಿ ಅಥವಾ ರಾಜ ದ್ರೋಹಕ್ಕಾಗಿ ವಜಾ ಮಾಡಿಲ್ಲವೆಂಬುದಾಗಿ ಚುನಾವಣಾ ಆಯೋಗವು ನಿಯಮಿಸಿದ ರೀತಿಯಲ್ಲಿ ನೀಡಿರುವ ಪ್ರಮಾಣ ಪತ್ರದೊಂದಿಗೆ ಕೂಡಿರುವ ಹೊರತು, ಅಂಥ ವ್ಯಕ್ತಿಯನ್ನು ಕ್ರಮಬದ್ಧವಾಗಿ ಅಭ್ಯರ್ಥಿಯೆಂದು ನಾಮನಿರ್ದೇಶನ ಮಾಡಿರುವುದಾಗಿ ಭಾವಿಸತಕ್ಕದಲ್ಲ.

(4) ನಾಮನಿರ್ದೇಶನ ಪತ್ರವನ್ನು ಸಲ್ಲಿಸಿದ ತರುವಾಯ ಆ ನಾಮನಿರ್ದೇಶನ ಪತ್ರದಲ್ಲಿ ನಮೂದಿಸಿರುವ ಆ ಅಭ್ಯರ್ಥಿಯ ಮತ್ತು ಅವನ ಸೂಚಕನ ಹೆಸರುಗಳು ಮತ್ತು ಮತದಾರರ ಪಟ್ಟಿಯ ಸಂಖ್ಯೆಗಳು ಆ ಮತದಾರರ ಪಟ್ಟಿಗಳಲ್ಲಿ ನಮೂದು ಮಾಡಿರುವಂತಹವೇ ಆಗಿವೆ ಎಂಬುದಾಗಿ ಚುನಾವಣಾ ಅಧಿಕಾರಿಯು ಮನವರಿಕೆ ಮಾಡಿಕೊಳ್ಳತಕ್ಕದು :

ಪರಂತು, ಮತದಾರರ ಪಟ್ಟಿ ಅಥವಾ ನಾಮನಿರ್ದೇಶನ ಪತ್ರದಲ್ಲಿ ನಮೂದಿಸಿರುವ ಅಭ್ಯರ್ಥಿಯ ಅಥವಾ ಅವನ ಸೂಚಕನ ಅಥವಾ ಯಾವನೇ ಇತರೆ ವ್ಯಕ್ತಿಯ ಹೆಸರಿನ ಸಂಬಂಧದಲ್ಲಿನ ಅಥವಾ ಯಾವುದೇ ಸ್ಥಳದ ಸಂಬಂಧದಲ್ಲಿನ ತಪ್ಪು ಹೆಸರು ಅಥವಾ ಅನಿಷ್ಕೃಷ್ಟ ವರ್ಣನೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು ಮತ್ತು ಆ ಮತದಾರರ ಪಟ್ಟಿ ಅಥವಾ ನಾಮನಿರ್ದೇಶನ ಪತ್ರದಲ್ಲಿನ ಯಾವನೇ ಅಂಥ ವ್ಯಕ್ತಿಯ ಮತದಾರರ ಪಟ್ಟಿಯ ಸಂಖ್ಯೆಗಳ ಸಂಬಂಧದಲ್ಲಿನ ಯಾವುದೇ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು, ಆ ವ್ಯಕ್ತಿಯ ಅಥವಾ ಸ್ಥಳದ ಹೆಸರಿಗೆ ಸಂಬಂಧಪಟ್ಟಂತಹ ವರ್ಣನೆಯನ್ನು ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳುವಂತಹುದು ಆಗಿರುವ ಯಾವುದೇ ಸಂದರ್ಭದಲ್ಲಿ ಅಂಥ ವ್ಯಕ್ತಿ ಅಥವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಆ ಮತದಾರರ ಪಟ್ಟಿ ಅಥವಾ ನಾಮನಿರ್ದೇಶನ ಪತ್ರದ ಪೂರ್ಣ ಜಾರಿಗೆ ಬಾಧಕವಾಗತಕ್ಕದಲ್ಲ ; ಮತ್ತು ಚುನಾವಣಾ ಅಧಿಕಾರಿಯು ಅಂಥ ಯಾವುದೇ ತಪ್ಪು ಹೆಸರು ಅಥವಾ ಅನಿಷ್ಕೃಷ್ಟ ವರ್ಣನೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವನ್ನು ಸರಿಪಡಿಸಲು ಅವಕಾಶ ನೀಡತಕ್ಕದು ಮತ್ತು ಅವಶ್ಯವಿರುವಲ್ಲಿ ಮತದಾರರ ಪಟ್ಟಿಯಲ್ಲಿನ ಅಥವಾ ನಾಮಪತ್ರದಲ್ಲಿನ ಅಂಥ ಯಾವುದೇ ತಪ್ಪು ಹೆಸರು, ಅನಿಷ್ಕೃಷ್ಟ ವರ್ಣನೆ, ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವನ್ನು ಗಮನಿಸಕೂಡದೆಂದು ನಿರ್ದೇಶಿಸತಕ್ಕದು.

(5) ಅಭ್ಯರ್ಥಿಯು ಬೇರೆ ಚುನಾವಣಾ ಕ್ಷೇತ್ರದ ಮತದಾರನಾಗಿರುವಲ್ಲಿ, ಆ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯ ಅಥವಾ ಅದರ ಸುಸಂಬದ್ಧ ಭಾಗದ ಒಂದು ಪ್ರತಿಯನ್ನು ಅಥವಾ ಅಂಥ ಪಟ್ಟಿಯಲ್ಲಿನ ಸುಸಂಬದ್ಧ ನಮೂದುಗಳ ಒಂದು ಪ್ರಮಾಣೀಕೃತ ಪ್ರತಿಯನ್ನು ನಾಮನಿರ್ದೇಶನ ಪತ್ರದ ಜೊತೆಗೆ ದಾಖಲು ಮಾಡಿರದಿದ್ದರೆ, ಅದನ್ನು ಪರಿಶೀಲನೆಯ ಸಮಯದಲ್ಲಿ ಚುನಾವಣಾ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದು.

(6) ಈ ಪ್ರಕರಣದಲ್ಲಿರುವುದು ಯಾವುದೂ, ಯಾವನೇ ಅಭ್ಯರ್ಥಿಯನ್ನು ಒಂದಕ್ಕಿಂತ ಹೆಚ್ಚು ನಾಮನಿರ್ದೇಶನ ಪತ್ರಗಳ ಮೂಲಕ ನಾಮನಿರ್ದೇಶನ ಮಾಡುವುದಕ್ಕೆ ಪ್ರತಿಬಂಧಕವಾಗತಕ್ಕದಲ್ಲ :

ಪರಂತು, ಒಂದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಗಾಗಿ ಯಾವನೇ ಅಭ್ಯರ್ಥಿಯು ಅಥವಾ ಅವನ ಪರವಾಗಿ ನಾಲ್ಕಕ್ಕಿಂತ ಹೆಚ್ಚು ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸತಕ್ಕದಲ್ಲ ಅಥವಾ ಚುನಾವಣಾ ಅಧಿಕಾರಿಯು ಅವುಗಳನ್ನು ಅಂಗೀಕರಿಸತಕ್ಕದಲ್ಲ.

(7) (6) ನೇ ಉಪ-ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ ಒಬ್ಬ ವ್ಯಕ್ತಿಯು,-

(ಎ) ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ (ಎಲ್ಲ ಸಂಸದೀಯ ಚುನಾವಣಾ ಕ್ಷೇತ್ರಗಳಿಗೆ ಚುನಾವಣೆಯು ಏಕ ಕಾಲಕ್ಕೆ ನಡೆಯಲಿ ಅಥವಾ ನಡೆಯದಿರಲಿ) ಸಂದರ್ಭದಲ್ಲಿ ಎರಡಕ್ಕಿಂತ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳಿಂದ;

(ಬಿ) ರಾಜ್ಯದ ವಿಧಾನಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ (ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಯಲಿ ಅಥವಾ ನಡೆಯದಿರಲಿ), ಆ ರಾಜ್ಯದ ಎರಡಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ;

(ಸಿ) ವಿಧಾನ ಪರಿಷತ್ತನ್ನು ಹೊಂದಿರುವಂಥ ರಾಜ್ಯದಲ್ಲಿ ಅಂಥ ಪರಿಷತ್ತಿಗೆ ನಡೆಯುವ ದ್ವೈವಾರ್ಷಿಕ ಚುನಾವಣೆಯ ಸಂದರ್ಭದಲ್ಲಿ, ಆ ರಾಜ್ಯದಲ್ಲಿನ ಎರಡಕ್ಕಿಂತ ಹೆಚ್ಚು ಪರಿಷತ್ ಚುನಾವಣಾ ಕ್ಷೇತ್ರಗಳಿಂದ;

(ಡಿ) ಒಂದು ರಾಜ್ಯಕ್ಕೆ ಹಂಚಿಕೆ ಮಾಡಲಾದ ಎರಡು ಅಥವಾ ಹೆಚ್ಚು ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ರಾಜ್ಯಸಭೆಗೆ ನಡೆಯುವ ದ್ವೈವಾರ್ಷಿಕ ಚುನಾವಣೆಯ ಸಂದರ್ಭದಲ್ಲಿ ಅಂಥ ಎರಡಕ್ಕಿಂತ ಹೆಚ್ಚು ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ;

(ಇ) ಏಕ ಕಾಲಕ್ಕೆ ಎರಡು ಅಥವಾ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳಿಂದ ಲೋಕಸಭೆಗೆ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ ಅಂಥ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳಿಂದ;

(ಎಫ್) ಏಕ ಕಾಲಕ್ಕೆ ಎರಡು ಅಥವಾ ಅದಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ ವಿಧಾನಸಭೆಗೆ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ ಅಂಥ ಎರಡಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ;

(ಜಿ) ಒಂದು ರಾಜ್ಯಕ್ಕೆ ಹಂಚಿಕೆ ಮಾಡಲಾದ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಸಭಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ಏಕ ಕಾಲಕ್ಕೆ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ, ಅಂಥ ಎರಡಕ್ಕಿಂತ ಹೆಚ್ಚು ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ;

(ಹೆಚ್) ವಿಧಾನ ಪರಿಷತ್ತನ್ನು ಹೊಂದಿರುವಂಥ ರಾಜ್ಯದ ಎರಡು ಅಥವಾ ಹೆಚ್ಚು ಪರಿಷತ್ ಚುನಾವಣಾ ಕ್ಷೇತ್ರಗಳಿಗೆ ಏಕ ಕಾಲದಲ್ಲಿ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ ಅಂಥ ಎರಡಕ್ಕಿಂತ ಹೆಚ್ಚು ವಿಧಾನ ಪರಿಷತ್ ಚುನಾವಣಾ ಕ್ಷೇತ್ರಗಳಿಂದ

- ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶಿತನಾಗತಕ್ಕದ್ದಲ್ಲ.

ವಿವರಣೆ :- ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಚುನಾವಣಾ ಆಯೋಗವು, 147, 149, 150 ನೇ ಪ್ರಕರಣ ಅಥವಾ ಸಂದರ್ಭಾನುಸಾರ 151 ನೇ ಪ್ರಕರಣದ ಮೇರೆಗೆ ಉಪ-ಚುನಾವಣೆಗೆ ಕರೆ ನೀಡುವ ಅಧಿಸೂಚನೆಯನ್ನು ಒಂದೇ ದಿನಾಂಕದಂದು ಹೊರಡಿಸಿದ್ದರೆ ಎರಡು ಅಥವಾ ಹೆಚ್ಚು ಉಪ-ಚುನಾವಣೆಗಳು ಏಕ ಕಾಲದಲ್ಲಿ ನಡೆಯುತ್ತವೆಂದು ಭಾವಿಸತಕ್ಕುದು.

**33ಎ. ಮಾಹಿತಿ ಪಡೆಯುವ ಹಕ್ಕು :-** (1) ಅಭ್ಯರ್ಥಿಯು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ 33ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಿದ ನಾಮನಿರ್ದೇಶನ ಪತ್ರದಲ್ಲಿ ಅಗತ್ಯವಾಗಿ ಒದಗಿಸಬೇಕಾದಂಥ ಯಾವುದೇ ಮಾಹಿತಿಯಲ್ಲದೆ, ಈ ಕೆಳಕಂಡ ಮಾಹಿತಿಯನ್ನು ಸಹ ಒದಗಿಸತಕ್ಕದ್ದು,-

(i) ಅವನು ಇತ್ಯರ್ಥದಲ್ಲಿರುವ ಮೊಕದ್ದಮೆಯಲ್ಲಿ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಿಂದ ರೂಪಿಸಲಾದ ಆಪಾದನೆಯಿಂದಾಗಿ ಇತ್ಯರ್ಥದಲ್ಲಿರುವ ಮೊಕದ್ದಮೆಯಲ್ಲಿ ಎರಡು ವರ್ಷಗಳ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ಶಿಕ್ಷಾರ್ಹವಾದ ಯಾವುದೇ ಅಪರಾಧದ ಆರೋಪಿಯಾಗಿದ್ದಾನೆಯೇ;

(ii) ಅವನು [(1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ, ಅಥವಾ 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಒಳಗೊಂಡ ಯಾವುದೇ ಅಪರಾಧವನ್ನು ಹೊರತುಪಡಿಸಿ] ಅಪರಾಧದ ಅಪರಾಧ ನಿರ್ಣೀತನಾಗಿ ಮತ್ತು ಒಂದು ವರ್ಷ ಅಥವಾ ಹೆಚ್ಚಿನ ಅವಧಿಯ ಕಾರಾವಾಸದ ಶಿಕ್ಷೆಯ ಆದೇಶಕ್ಕೆ ಗುರಿಯಾಗಿರುವನೆ.

(2) ಅಭ್ಯರ್ಥಿಯಾಗಲಿ ಅಥವಾ ಸಂದರ್ಭಾನುಸಾರ ಅವನ ಸೂಚಕನಾಗಲಿ, 33ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನ ಪತ್ರವನ್ನು ಚುನಾವಣಾ ಅಧಿಕಾರಿಗೆ ಒಪ್ಪಿಸುವ ಸಮಯದಲ್ಲಿ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಾಹಿತಿಯನ್ನು ಪರಿಶೀಲಿಸಿದ ಬಗ್ಗೆ ನಿಯಮಿಸಲಾದ ನಮೂನೆಯಲ್ಲಿ ಅಭ್ಯರ್ಥಿಯು ಮಾಡಿರುವ ಶಪಥ ಪತ್ರವನ್ನು ಸಹ ಅವನಿಗೆ ಒಪ್ಪಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಹಿತಿಯನ್ನು ತನಗೆ ಒದಗಿಸಿದ ನಂತರ ಆದಷ್ಟು ಬೇಗನೇ, ಚುನಾವಣಾ ಅಧಿಕಾರಿಯು, ನಾಮನಿರ್ದೇಶನ ಪತ್ರವನ್ನು ಯಾವ ಚುನಾವಣಾ ಕ್ಷೇತ್ರಕ್ಕೆ ಸಲ್ಲಿಸಲಾಗಿದೆಯೋ ಆ ಕ್ಷೇತ್ರಕ್ಕೆ ಸಂಬಂಧಿಸಿದ ಮತದಾರರ ಮಾಹಿತಿಗಾಗಿ ತನ್ನ ಕಛೇರಿಯಲ್ಲಿ ಎದ್ದು ಕಾಣುವಂಥ ಸ್ಥಳದಲ್ಲಿ (2)ನೇ ಉಪಪ್ರಕರಣದ ಮೇರೆಗೆ, ಒಪ್ಪಿಸಲಾದ ಶಪಥ ಪತ್ರದ ಪ್ರತಿಯನ್ನು ಅಂಟಿಸುವ ಮೂಲಕ ಮೇಲೆ ಹೇಳಿದ ಮಾಹಿತಿಯನ್ನು ಪ್ರದರ್ಶಿಸತಕ್ಕದ್ದು.

**33ಬಿ. ಅಭ್ಯರ್ಥಿಯು ಅಧಿನಿಯಮ ಮತ್ತು ನಿಯಮಗಳ ಮೇರೆಗೆ ಮಾತ್ರ ಮಾಹಿತಿಯನ್ನು ಒದಗಿಸುವುದು :-** ಯಾವುದೇ ನ್ಯಾಯಾಲಯದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಅಥವಾ ಚುನಾವಣಾ ಆಯೋಗವು ನೀಡಿದ ಯಾವುದೇ ನಿರ್ದೇಶನದಲ್ಲಿ, ಆದೇಶದಲ್ಲಿ ಅಥವಾ ಯಾವುದೇ ಇತರೆ ಸೂಚನೆಯಲ್ಲಿ ಏನೇ ಇದ್ದರೂ, ಯಾವ ಅಭ್ಯರ್ಥಿಯು ಅವನ

ಚುನಾವಣಾ ಸಂಬಂಧದಲ್ಲಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಬಹಿರಂಗಪಡಿಸಬೇಕಾಗಿಲ್ಲದ ಅಥವಾ ಒದಗಿಸಬೇಕಾಗಿಲ್ಲದ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಲು ಅಥವಾ ಒದಗಿಸಲು ಬದ್ಧನಾಗಿರತಕ್ಕದ್ದಲ್ಲ.

**34. ಠೇವಣಿಗಳು :–** (1) ಒಬ್ಬ ಅಭ್ಯರ್ಥಿಯು,–

(ಎ) ಸಂಸದೀಯ ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳ ಮೊತ್ತವನ್ನು ಅಥವಾ ಅಭ್ಯರ್ಥಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವಲ್ಲಿ, ಐದು ಸಾವಿರ ರೂಪಾಯಿ ಮೊತ್ತವನ್ನು ; ಮತ್ತು

(ಬಿ) ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳ ಮೊತ್ತವನ್ನು ಅಥವಾ ಅಭ್ಯರ್ಥಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವಲ್ಲಿ ಎರಡು ಸಾವಿರದ ಐದು ನೂರು ರೂಪಾಯಿ ಮೊತ್ತವನ್ನು

– ಠೇವಣಿ ಇಟ್ಟ ಹೊರತು ಅಥವಾ ಇಡುವ ವ್ಯವಸ್ಥೆ ಮಾಡಿದ ಹೊರತು ಅವನು ಒಂದು ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿರುವನೆಂದು ಭಾವಿಸತಕ್ಕುದಲ್ಲ :

ಪರಂತು, ಒಂದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಗೆ ಒಬ್ಬ ಅಭ್ಯರ್ಥಿಯನ್ನು ಒಂದಕ್ಕಿಂತ ಹೆಚ್ಚು ನಾಮಪತ್ರಗಳ ಮೂಲಕ ನಾಮನಿರ್ದೇಶನ ಮಾಡಿರುವಲ್ಲಿ, ಈ ಉಪಪ್ರಕರಣದ ಮೇರೆಗೆ ಒಂದಕ್ಕಿಂತ ಹೆಚ್ಚು ಠೇವಣಿಯನ್ನು ಇಡುವುದು ಅಗತ್ಯವಾಗತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಠೇವಣಿ ಇಡಲು ಅಗತ್ಯಪಡಿಸಿರುವ ಯಾವುದೇ ಮೊತ್ತವನ್ನು, ಸಂದರ್ಭಾನುಸಾರ, 33ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (1ಎ) ಉಪಪ್ರಕರಣದ ಮೇರೆಗೆ ನಾಮಪತ್ರವನ್ನು ಸಲ್ಲಿಸುವ ಕಾಲದಲ್ಲಿ ಅಭ್ಯರ್ಥಿಯು ಅಂಥ ಮೊತ್ತವನ್ನು ನಗದು ರೂಪದಲ್ಲಿ ಚುನಾವಣಾ ಅಧಿಕಾರಿಯ ಬಳಿ ಠೇವಣಿ ಇಟ್ಟಿರುವ ಅಥವಾ ಇಡುವಂತೆ ಮಾಡಿರುವ ಹೊರತು ಅಥವಾ ಸದರಿ ಮೊತ್ತವನ್ನು ಅವನು ಅಥವಾ ಅವನ ಪರವಾಗಿ ಭಾರತದ ರಿಸರ್ವ್ ಬ್ಯಾಂಕ್‌ನಲ್ಲಿ ಅಥವಾ ಸರ್ಕಾರಿ ಖಜಾನೆಯಲ್ಲಿ ಠೇವಣಿ ಇಟ್ಟಿರುವ ಬಗ್ಗೆ ರಸೀತಿಯನ್ನು ನಾಮನಿರ್ದೇಶನ ಪತ್ರದ ಜೊತೆಗೆ ಲಗತ್ತಿಸಿರುವ ಹೊರತು, ಆ ಉಪಪ್ರಕರಣದ ಮೇರೆಗೆ ಠೇವಣಿ ಇಡಲಾಗಿದೆಯೆಂಬುದಾಗಿ ಭಾವಿಸತಕ್ಕುದಲ್ಲ.

**35. ನಾಮನಿರ್ದೇಶನ ಪತ್ರಗಳು ಮತ್ತು ಅವುಗಳ ಪರಿಶೀಲನೆಯ ಕಾಲ ಮತ್ತು ಸ್ಥಳದ ಬಗ್ಗೆ ನೋಟೀಸು :–** ಚುನಾವಣಾ ಅಧಿಕಾರಿಯು ಸಂದರ್ಭಾನುಸಾರ, 33ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (1ಎ) ಉಪಪ್ರಕರಣದ ಮೇರೆಗೆ ನಾಮನಿರ್ದೇಶನ ಪತ್ರವನ್ನು ಸ್ವೀಕರಿಸಿದ ತರುವಾಯ, ಅದನ್ನು ಒಪ್ಪಿಸುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಲಾದ ದಿನಾಂಕ, ಕಾಲ ಮತ್ತು ಸ್ಥಳವನ್ನು ತಿಳಿಸತಕ್ಕುದು ಮತ್ತು ಆ ನಾಮನಿರ್ದೇಶನ ಪತ್ರದ ಮೇಲೆ ಅದರ ಕ್ರಮಸಂಖ್ಯೆಯನ್ನು ನಮೂದು ಮಾಡತಕ್ಕುದು ಮತ್ತು ಆ ನಾಮನಿರ್ದೇಶನ ಪತ್ರವನ್ನು ತನಗೆ ಒಪ್ಪಿಸಿರುವ ದಿನಾಂಕ ಮತ್ತು ಸಮಯವನ್ನು ವಿವರಿಸುವಂಥ ಪ್ರಮಾಣ ಪತ್ರಕ್ಕೆ ಸಹಿ ಹಾಕತಕ್ಕುದು ; ಮತ್ತು ಆ ತರುವಾಯ ಆದಷ್ಟು ಬೇಗನೆ, ಆ ಅಭ್ಯರ್ಥಿ ಮತ್ತು ಸೂಚಕ ಇವರಿಬ್ಬರ ಬಗ್ಗೆ ಆ ನಾಮನಿರ್ದೇಶನ ಪತ್ರದಲ್ಲಿ ಒಳಗೊಂಡಿರುವಂಥವೇ ವಿವರಗಳನ್ನು ಒಳಗೊಂಡಿರುವ ನಾಮನಿರ್ದೇಶನ ಪತ್ರದ ನೋಟೀಸನ್ನು ತನ್ನ ಕಚೇರಿಯಲ್ಲಿ ಯಾವುದೇ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕುದು.

**36. ನಾಮನಿರ್ದೇಶನ ಪತ್ರಗಳ ಪರಿಶೀಲನೆ :–** (1) 30ನೇ ಪ್ರಕರಣದ ಮೇರೆಗೆ ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದಂದು, ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟರು, ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಸೂಚಕನು, ಮತ್ತು ಪ್ರತಿಯೊಬ್ಬ ಅಭ್ಯರ್ಥಿಯು ಲಿಖಿತದಲ್ಲಿ ಕ್ರಮಬದ್ಧವಾಗಿ ಅಧಿಕೃತಗೊಳಿಸಿರುವ ಒಬ್ಬ ಇತರ ವ್ಯಕ್ತಿಯು, ಚುನಾವಣಾ ಅಧಿಕಾರಿಯು ಗೊತ್ತುಪಡಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಹಾಜರಾಗಬಹುದು, ಆದರೆ ಇತರ ಯಾವ ವ್ಯಕ್ತಿಯೂ ಅಲ್ಲ, ಮತ್ತು ಚುನಾವಣಾ ಅಧಿಕಾರಿಯು, 33ನೇ ಪ್ರಕರಣದಲ್ಲಿ ವಿಧಿಸಿರುವ ಕಾಲದೊಳಗೆ ಮತ್ತು ರೀತಿಯಲ್ಲಿ ಒಪ್ಪಿಸಲಾಗಿರುವ ಎಲ್ಲ ಅಭ್ಯರ್ಥಿಗಳ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸುವುದಕ್ಕಾಗಿ ಅವರಿಗೆ ಎಲ್ಲ ಯುಕ್ತ ಸೌಲಭ್ಯಗಳನ್ನು ನೀಡತಕ್ಕುದು.

(2) ಚುನಾವಣಾ ಅಧಿಕಾರಿಯು ಆ ತರುವಾಯ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸತಕ್ಕುದು ಮತ್ತು ಯಾವುದೇ ನಾಮನಿರ್ದೇಶನ ಪತ್ರದ ಬಗ್ಗೆ ಮಾಡಬಹುದಾದ ಎಲ್ಲ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕುದು ಮತ್ತು, ಅಂಥ ಆಕ್ಷೇಪಣೆಯ ಮೇಲೆ ಅಥವಾ ತಾನಾಗಿಯೇ ಅವನು ಅವಶ್ಯವೆಂದು ಯೋಚಿಸಬಹುದಾದಂಥ ಕ್ಷಿಪ್ರ ವಿಚಾರಣೆಯು ಯಾವುದಾದರೂ ಇದ್ದರೆ ಅದರ ತರುವಾಯ, ಈ ಕೆಳಕಂಡ ಯಾವುದೇ ಆಧಾರದ ಮೇಲೆ ಯಾವುದೇ ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸಬಹುದು :–

(ಎ) ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿಯು, ಅನ್ವಯವಾಗಬಹುದಾದ ಈ ಕೆಳಕಂಡ ಯಾವುದೇ ಉಪಬಂಧದ ಮೇರೆಗೆ ಆ ಸ್ಥಾನವನ್ನು ಭರ್ತಿ ಮಾಡಲು ಆಯ್ಕೆಗೊಳ್ಳುವುದಕ್ಕೆ ಅರ್ಹನಾಗಿಲ್ಲ ಅಥವಾ ಅನರ್ಹನಾಗಿದ್ದಾನೆ, ಎಂದರೆ :–

ಅನುಚ್ಛೇದಗಳು 84, 102, 173 ಮತ್ತು 191 ( * * * )

ಆ ಅಧಿನಿಯಮದ II ನೇ ಭಾಗ, ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, 1963 (1963ರ 20)ರ 4 ಮತ್ತು 14ನೇ ಪ್ರಕರಣಗಳು ; ಅಥವಾ

(ಬಿ) 33ನೇ ಪ್ರಕರಣ ಅಥವಾ 34ನೇ ಪ್ರಕರಣದ ಯಾವುವೇ ಉಪಬಂಧಗಳನ್ನು ಪಾಲಿಸಲು ತಪ್ಪಿರುವುದು ; ಅಥವಾ

(ಸಿ) ನಾಮನಿರ್ದೇಶನ ಪತ್ರದ ಮೇಲೆ ಇರುವ ಅಭ್ಯರ್ಥಿಯ ಅಥವಾ ಸೂಚಕನ ಸಹಿಯು ನೈಜವಾಗಿಲ್ಲದಿರುವುದು ;

(3) (2)ನೆಯ ಉಪಪ್ರಕರಣದ (ಬಿ) ಅಥವಾ (ಸಿ) ಖಂಡದಲ್ಲಿ ಅಡಕವಾಗಿರುವುದು ಯಾವುದೂ, ಯಾವ ನಾಮ ನಿರ್ದೇಶನ ಪತ್ರದ ಸಂಬಂಧದಲ್ಲಿ ಯಾವುದೇ ಅಕ್ರಮವು ನಡೆದಿಲ್ಲವೋ ಆ ಇನ್ನೊಂದು ನಾಮ ನಿರ್ದೇಶನ ಪತ್ರದ ಮೂಲಕ, ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿದ್ದರೆ, ಆ ಅಭ್ಯರ್ಥಿಯ ಆ ನಾಮನಿರ್ದೇಶನ ಪತ್ರವನ್ನು, ಆ ನಾಮನಿರ್ದೇಶನ ಪತ್ರದ ಸಂಬಂಧದಲ್ಲಿನ ಯಾವುದೇ ಅಕ್ರಮದ ಆಧಾರದ ಮೇಲೆ ತಿರಸ್ಕರಿಸುವುದನ್ನು ಅಧಿಕೃತಗೊಳಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(4) ಚುನಾವಣಾ ಅಧಿಕಾರಿಯು ಯಾವುದೇ ನಾಮನಿರ್ದೇಶನ ಪತ್ರವನ್ನು ಗಣನೀಯ ಸ್ವರೂಪದ್ದಾಗಿರದ ಯಾವುದೇ ದೋಷದ ಆಧಾರದ ಮೇಲೆ ತಿರಸ್ಕರಿಸತಕ್ಕದ್ದಲ್ಲ.

(5) ಚುನಾವಣಾ ಅಧಿಕಾರಿಯು, 30ನೇ ಪ್ರಕರಣದ (ಬಿ) ಖಂಡದ ಮೇರೆಗೆ ಈ ಬಗ್ಗೆ ಗೊತ್ತುಪಡಿಸಿದ ದಿನಾಂಕದಂದು ಪರಿಶೀಲನೆಯನ್ನು ನಡೆಸತಕ್ಕದ್ದು ಮತ್ತು ಅವನು ದೊಂಬಿ ಅಥವಾ ಬಹಿರಂಗ ಹಿಂಸೆಯ ಮೂಲಕ ಅಥವಾ ತನ್ನ ನಿಯಂತ್ರಣವನ್ನು ಮೀರಿದ ಕಾರಣಗಳ ಮೂಲಕ ವ್ಯವಹರಣೆಗಳಿಗೆ ಅಡ್ಡಿ ಅಥವಾ ತಡೆ ಉಂಟಾಗಿರುವಾಗ ಹೊರತು ಅಂಥ ವ್ಯವಹರಣೆಗಳ ಯಾವುದೇ ಮೂಂದೂಡಿಕೆಗೆ ಅವಕಾಶ ನೀಡತಕ್ಕದ್ದಲ್ಲ :

ಪರಂತು, ಚುನಾವಣಾ ಅಧಿಕಾರಿ ಅಥವಾ ಯಾವನೇ ಇತರ ವ್ಯಕ್ತಿಯು ಆಕ್ಷೇಪಣೆಯನ್ನು ಎತ್ತಿದರೆ ಅಥವಾ ಮಾಡಿದರೆ, ಸಂಬಂಧಪಟ್ಟ ಅಭ್ಯರ್ಥಿಗೆ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದ ಮುಂಬರುವ ದಿವಸವನ್ನು ಬಿಟ್ಟು ತರುವಾಯದ ದಿವಸಕ್ಕಿಂತ ತಡವಾಗಿ ಅಲ್ಲದೆ ಅದನ್ನು ಖಂಡಿಸಲು ಕಾಲಾವಕಾಶವನ್ನು ನೀಡಬಹುದು ಮತ್ತು ಚುನಾವಣಾ ಅಧಿಕಾರಿಯು, ವ್ಯವಹರಣೆಗಳನ್ನು ಮುಂದೂಡಲಾದ ದಿನಾಂಕದಂದು ತನ್ನ ತೀರ್ಮಾನವನ್ನು ದಾಖಲು ಮಾಡತಕ್ಕದ್ದು.

(6) ಚುನಾವಣಾ ಅಧಿಕಾರಿಯು, ಪ್ರತಿಯೊಂದು ನಾಮನಿರ್ದೇಶನ ಪತ್ರದ ಮೇಲೆ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತನ್ನ ತೀರ್ಮಾನವನ್ನು ಹಿಂಬರಹ ಮಾಡತಕ್ಕದ್ದು ಮತ್ತು ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸಿದರೆ, ಅಂಥ ತಿರಸ್ಕಾರದ ಬಗೆಗಿನ ತನ್ನ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲು ಮಾಡತಕ್ಕದ್ದು.

(7) ಈ ಪ್ರಕರಣದ ಉದ್ದೇಶಗಳಿಗಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿರುವ ಒಂದು ನಮೂದಿನ ಪ್ರಮಾಣಿತ ಪ್ರತಿಯು, ಆ ನಮೂದಿನಲ್ಲಿ ಉಲ್ಲೇಖಿತನಾದ ವ್ಯಕ್ತಿಯು ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 16ನೇ ಪ್ರಕರಣದಲ್ಲಿ ಸೂಚಿಸಿರುವ ಅನರ್ಹತೆಗೆ ಒಳಪಟ್ಟಿದ್ದಾನೆ ಎಂದು ರುಜುವಾತು ಆಗುವ ಹೊರತು, ಅವನು ಆ ಚುನಾವಣಾ ಕ್ಷೇತ್ರಕ್ಕಾಗಿ ಮತದಾರನಾಗಿದ್ದಾನೆಂಬ ಸಂಗತಿಯ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(8) ಎಲ್ಲ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸಿದ ಮತ್ತು ಅವುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತೀರ್ಮಾನಗಳನ್ನು ದಾಖಲಿಸಿದ ತರುವಾಯ, ಕೂಡಲೆ ಚುನಾವಣಾ ಅಧಿಕಾರಿಯು ಕಾನೂನು ಮಾನ್ಯವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ, ಎಂದರೆ ಯಾವ ಅಭ್ಯರ್ಥಿಗಳ ನಾಮನಿರ್ದೇಶನ ಪತ್ರಗಳು ಕಾನೂನು ಮಾನ್ಯವಾಗಿವೆ ಎಂದು ಕಂಡುಬಂದಿವೆಯೋ ಆ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು ತನ್ನ ಸೂಚನಾ ಫಲಕದ ಮೇಲೆ ಅಂಟಿಸತಕ್ಕದ್ದು.

**37. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು :-** (1) ಯಾವನೇ ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ಲಿಖಿತ ನೋಟೀಸಿನ ಮೂಲಕ ಹಿಂತೆಗೆದುಕೊಳ್ಳಬಹುದು. ಈ ನೋಟೀಸು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅವನು ಅದಕ್ಕೆ ಸಹಿ ಹಾಕಿರತಕ್ಕದ್ದು. ಮತ್ತು ಅದನ್ನು 30ನೇ ಪ್ರಕರಣದ (ಸಿ) ಖಂಡದ ಮೇರೆಗೆ ನಿಗದಿಪಡಿಸಿದ ದಿನದಂದು ಅಪರಾಹ್ನ 3 ಗಂಟೆಗೆ ಮುಂಚೆ ಅಂಥ ಅಭ್ಯರ್ಥಿಯು ಖುದ್ದಾಗಿ ಅಥವಾ ಅವನ ಸೂಚಕನು ಅಥವಾ ಅಂಥ ಅಭ್ಯರ್ಥಿಯು ಲಿಖಿತದಲ್ಲಿ ಈ ಬಗ್ಗೆ ಅಧಿಕೃತಗೊಳಿಸಿರುವ ಚುನಾವಣಾ ಏಜೆಂಟನು ಚುನಾವಣಾ ಅಧಿಕಾರಿಗೆ ಒಪ್ಪಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವನೇ ವ್ಯಕ್ತಿಗೆ ಆ ನೋಟೀಸನ್ನು ರದ್ದುಪಡಿಸಲು ಅವಕಾಶ ನೀಡತಕ್ಕದ್ದಲ್ಲ.

(3) ಚುನಾವಣಾ ಅಧಿಕಾರಿಯು, ಹಿಂತೆಗೆದುಕೊಳ್ಳುವ ನೋಟೀಸಿನ ನೈಜತೆಯ ಬಗ್ಗೆ ಮತ್ತು (1)ನೇ ಉಪಪ್ರಕರಣದ ಮೇರೆಗೆ ಅದನ್ನು ಒಪ್ಪಿಸಿರುವ ವ್ಯಕ್ತಿಯ ಗುರುತಿನ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಅಂಥ ನೋಟೀಸನ್ನು ತನ್ನ ಕಚೇರಿಯಲ್ಲಿ ಯಾವುದೇ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

**38. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ :-** (1) 37ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಬಹುದಾದ ಅವಧಿಯು ಮುಕ್ತಾಯಗೊಂಡ ತರುವಾಯ, ಕೂಡಲೇ, ಚುನಾವಣಾ

ಅಧಿಕಾರಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಎಂದರೆ, ಕಾನೂನು ಮಾನ್ಯವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿರುವ ಮತ್ತು ಸದರಿ ಅವಧಿಯೊಳಗೆ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿರದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸತಕ್ಕುದು ಮತ್ತು ಪ್ರಕಟಿಸತಕ್ಕುದು.

(2) (1) ನೇ ಉಪ-ಪ್ರಕರಣದ ಮೇರೆಗೆ ಹೆಸರುಗಳ ಪಟ್ಟಿ ಮಾಡುವ ಉದ್ದೇಶಕ್ಕಾಗಿ, ಅಭ್ಯರ್ಥಿಗಳನ್ನು ಈ ಕೆಳಕಂಡಂತೆ ವರ್ಗೀಕರಿಸತಕ್ಕದ್ದು, ಎಂದರೆ :-

(i) ಮನ್ನಣೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು;

(ii) (i) ನೇ ಖಂಡದಲ್ಲಿ ನಮೂದಿಸಲಾಗಿರುವ ನೋಂದಾಯಿತ ರಾಜಕೀಯ ಪಕ್ಷಗಳನ್ನು ಹೊರತುಪಡಿಸಿ ಇತರ ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು.

(iii) ಇತರ ಅಭ್ಯರ್ಥಿಗಳು.

(3) (2) ನೇ ಉಪ-ಪ್ರಕರಣದಲ್ಲಿ ನಮೂದಿಸಲಾದ ಪ್ರವರ್ಗಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಲಾದ ಕ್ರಮದಲ್ಲಿ ವ್ಯವಸ್ಥೆಗೊಳಿಸತಕ್ಕದ್ದು ಮತ್ತು ಪ್ರತಿಯೊಂದು ಪ್ರವರ್ಗದ ಅಭ್ಯರ್ಥಿಗಳ ಹೆಸರುಗಳನ್ನು ಅಕ್ಷರಾನುಕ್ರಮದಲ್ಲಿ ಮತ್ತು ನಿಯಮಿಸಬಹುದಾದಂಥ ಇತರ ವಿವರಗಳೊಂದಿಗೆ ನಾಮನಿರ್ದೇಶನ ಪತ್ರದಲ್ಲಿ ಕೊಟ್ಟಿರುವ ಸ್ಪರ್ಧಿಸುವ ಅಭ್ಯರ್ಥಿಗಳ ವಿಳಾಸಗಳನ್ನು ವ್ಯವಸ್ಥೆಗೊಳಿಸತಕ್ಕದ್ದು.

**39. ಇತರ ಚುನಾವಣೆಗಳಲ್ಲಿ ಅಭ್ಯರ್ಥಿಗಳ ನಾಮ ನಿರ್ದೇಶನ :-** (1) ಒಬ್ಬ ಸದಸ್ಯನನ್ನು ಅಥವಾ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯದ ವಿಧಾನ ಸಭೆಯ ಚುನಾಯಿತ ಸದಸ್ಯರನ್ನು ಅಥವಾ ಸದಸ್ಯರನ್ನು ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರನ್ನು ಆಹ್ವಾನಿಸುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ ಆದಷ್ಟು ಬೇಗನೆ ಚುನಾವಣಾ ಆಯೋಗವು ರಾಜಪತ್ರದಲ್ಲಿನ ಅಧಿಸೂಚನೆಯ ಮೂಲಕ -

(ಎ) ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು, ಈ ದಿನಾಂಕವು ಮೊದಲು ಹೇಳಿದ ಅಧಿಸೂಚನೆಯ ಪ್ರಕಟಣೆಯ ದಿನಾಂಕದ ತರುವಾಯದ ಏಳನೆಯ ದಿವಸವಾಗಿರತಕ್ಕುದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವಜನಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು ;

(ಬಿ) ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ದಿನಾಂಕವನ್ನು ಗೊತ್ತುಪಡಿಸತಕ್ಕುದು, ಈ ದಿನಾಂಕವು ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕಾಗಿನ ಕೊನೆಯ ದಿನಾಂಕಕ್ಕೆ ನಿಕಟ ತರುವಾಯದ ದಿವಸವಾಗಿರತಕ್ಕುದು, ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು ;

(ಸಿ) ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು, ಈ ದಿನಾಂಕವು ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿನ ದಿನಾಂಕದ ತರುವಾಯದ ಎರಡನೇ ದಿವಸವಾಗಿರತಕ್ಕುದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವಜನಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು ;

(ಡಿ) ಅವಶ್ಯವಾದರೆ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳನ್ನು ಗೊತ್ತು ಮಾಡತಕ್ಕುದು, ಈ ದಿನಾಂಕವು ಅಥವಾ ಅದರ ಮೊದಲನೆಯ ದಿನಾಂಕವು ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕದ ತರುವಾಯದ ಏಳನೆಯ ದಿವಸಕ್ಕಿಂತ ಮುಂಚಿತವಾದುದಾಗಿರತಕ್ಕುದಲ್ಲ ;

(ಇ) ಚುನಾವಣೆಯು ಪೂರ್ಣಗೊಳ್ಳಬೇಕಾದ ದಿನಾಂಕವನ್ನು ಗೊತ್ತುಪಡಿಸತಕ್ಕುದು.

(2) 33ನೇ ಪ್ರಕರಣದ (2) ಮತ್ತು (5)ನೇ ಉಪಪ್ರಕರಣಗಳನ್ನು ಮತ್ತು 34ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡವನ್ನು ಹೊರತುಪಡಿಸಿ 31 ರಿಂದ 38ರವರೆಗಿನ ಪ್ರಕರಣಗಳ ಉಪಬಂಧಗಳು, ಯಾವುದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಯಾವುದೇ ಅಂಥ ಚುನಾವಣೆಯ ಸಂಬಂಧದಲ್ಲಿಯೂ ಅನ್ವಯವಾಗತಕ್ಕುದು :

ಪರಂತು-

(ಎ) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯ ಬಗ್ಗೆ ಸದರಿ ಉಪಬಂಧಗಳಲ್ಲಿರುವ ಯಾವುದೇ ಉಲ್ಲೇಖಗಳನ್ನು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ರಾಜ್ಯದ ವಿಧಾನ ಸಭೆಯ ಸದಸ್ಯರ ಅಥವಾ ಚುನಾಯಿತ ಸದಸ್ಯರ ಮೂಲಕ ನಡೆಯುವ ಚುನಾವಣೆಯ ಸಂದರ್ಭದಲ್ಲಿ, 152ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ, ಸಂದರ್ಭಾನುಸಾರ, ಆ ವಿಧಾನ ಸಭೆಯ ಚುನಾಯಿತ ಸದಸ್ಯರ ಪಟ್ಟಿಯ ಬಗೆಗಿನ ಉಲ್ಲೇಖಗಳೆಂದು ಮತ್ತು ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರ ಮೂಲಕ ನಡೆಯುವ ಚುನಾವಣೆಯ ಸಂದರ್ಭದಲ್ಲಿ, ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ಅಂಥ ಚುನಾಯಕ ಗಣದ ಸದಸ್ಯರ ಪಟ್ಟಿಯ ಬಗೆಗಿನ ಉಲ್ಲೇಖಗಳೆಂದು ಅರ್ಥೈಸತಕ್ಕುದು ;

(ಎಎ) "ಚುನಾವಣಾ ಕ್ಷೇತ್ರದ ಮತದಾರನು ಸೂಚಕನೆಂದು" ಎಂಬ ಬಗ್ಗೆ 33ನೇ ಪ್ರಕರಣದ (1)ನೇ ಉಪಪ್ರಕರಣದ ಪ್ರಾರಂಭದ ಪ್ಯಾರಾದಲ್ಲಿರುವ ಉಲ್ಲೇಖವನ್ನು, "ಸಂದರ್ಭಾನುಸಾರ ಚುನಾಯಿತ ಸದಸ್ಯರ ಅಥವಾ ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರ ಶೇಕಡಾ ಹತ್ತರಷ್ಟು ಸದಸ್ಯರು ಅಥವಾ ಸಂಬಂಧಪಟ್ಟ ಹತ್ತು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರು ಸೂಚಕರೆಂದು" ಎಂಬ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕುದು :

ಪರಂತು, ಈ ಖಂಡದಲ್ಲಿ ಉಲ್ಲೇಖಿಸಿರುವ ಶೇಕಡಾವಾರನ್ನು ಲೆಕ್ಕ ಹಾಕುವುದರ ಪರಿಣಾಮವಾಗಿ ಬರುವ ಸದಸ್ಯರ ಸಂಖ್ಯೆಯು ಅಪೂರ್ಣಾಂಕವಾಗಿರುವಲ್ಲಿ ಮತ್ತು ಹಾಗೆ ಬಂದಿರುವ ಅಪೂರ್ಣಾಂಕವು ಅರ್ಧಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಒಂದು ಎಂದು ಲೆಕ್ಕ ಹಾಕತಕ್ಕುದು, ಮತ್ತು ಹಾಗೆ ಬಂದಿರುವ ಅಪೂರ್ಣಾಂಕವು ಅರ್ಧಕ್ಕಿಂತ ಕಡಿಮೆ ಇದ್ದರೆ ಅದನ್ನು ಉಪೇಕ್ಷಿಸತಕ್ಕುದು ;

(ಎಬಿ) ರಾಜ್ಯದ ವಿಧಾನ ಪರಿಷತ್ತಿಗೆ ಆ ರಾಜ್ಯದ ವಿಧಾನ ಸಭಾ ಸದಸ್ಯರ ಮೂಲಕ ನಡೆಯುವ ಚುನಾವಣೆಯ ಸಂದರ್ಭದಲ್ಲಿ 36ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡವನ್ನು 171ನೇ ಅನುಚ್ಛೇದದ (3)ನೇ ಖಂಡದ (ಡಿ) ಉಪಖಂಡದ ಬಗೆಗಿನ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕುದು ;

(ಬಿ) 30ನೇ ಪ್ರಕರಣದ ಬಗೆಗೆ ಸದರಿ ಉಪಬಂಧಗಳಲ್ಲಿರುವ ಯಾವುವೇ ಉಲ್ಲೇಖಗಳನ್ನು, ಈ ಪ್ರಕರಣದ (1)ನೇ ಉಪಪ್ರಕರಣದ ಬಗೆಗಿನ ಉಲ್ಲೇಖಗಳೆಂದು ಅರ್ಥೈಸತಕ್ಕುದು ; ಮತ್ತು

(ಸಿ) ನಾಮನಿರ್ದೇಶನ ಪತ್ರವನ್ನು ಒಪ್ಪಿಸುವ ಸಮಯದಲ್ಲಿ, ಚುನಾವಣಾ ಅಧಿಕಾರಿಯು, ಅದನ್ನು ಒಪ್ಪಿಸುವ ವ್ಯಕ್ತಿಯನ್ನು, ಅಭ್ಯರ್ಥಿಯ ಹೆಸರನ್ನು ಒಳಗೊಂಡಿರುವ ಮತದಾರರ ಪಟ್ಟಿಯ ಅಥವಾ ಆ ಮತದಾರರ ಪಟ್ಟಿಯ ಭಾಗದ ಒಂದು ಪ್ರತಿಯನ್ನು ಅಥವಾ ಅಂಥ ಪಟ್ಟಿಯಲ್ಲಿನ ಸಂಬಂಧಪಟ್ಟ ನಮೂದುಗಳ ಒಂದು ಪ್ರಮಾಣಿತ ಪ್ರತಿಯನ್ನು ಹಾಜರುಪಡಿಸಲು ಅಗತ್ಯಪಡಿಸಬಹುದು.

**39ಎ. ಸಮಯದ ನ್ಯಾಯಸಮ್ಮತ ಭಾಗದ ಹಂಚಿಕೆ :-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಚುನಾವಣಾ ಆಯೋಗವು, ಚುನಾವಣೆಗಳ ಸಮಯದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷದ ಹಿಂದಿನ ಸಾಧನೆಯ ಆಧಾರದ ಮೇಲೆ ಯಾವುದೇ ಚುನಾವಣಾ ವಿಷಯವನ್ನು ಪ್ರದರ್ಶಿಸಲು ಅಥವಾ ಪ್ರಸಾರ ಮಾಡಲು ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲು ನಿಯಮಿಸಬಹುದಾದಂಥ ವಿಧಾನದಲ್ಲಿ ಕೇಬಲ್ ದೂರದರ್ಶನ ಜಾಲದಲ್ಲಿ ಮತ್ತು ಇತರ ವಿದ್ಯುನ್ಮಾನ ಮಾಧ್ಯಮದಲ್ಲಿ ಸಮಯದಲ್ಲಿ ನ್ಯಾಯಸಮ್ಮತ ಭಾಗದ ಹಂಚಿಕೆಗೆ ಮಾಡತಕ್ಕದ್ದು.

(2) ಚುನಾವಣೆಗಾಗಿ 38ನೇ ಪ್ರಕರಣದ ಅಡಿಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ನಂತರ ಚುನಾವಣೆಗೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದ ಮೇರೆಗೆ ಸಮಯದ ನ್ಯಾಯಸಮ್ಮತ ಭಾಗದ ಹಂಚಿಕೆಯನ್ನು ಮಾಡತಕ್ಕದ್ದು ಮತ್ತು ಅಂಥ ಚುನಾವಣೆಯ ಮತದಾನಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ನಲವತ್ತೆಂಟು ಗಂಟೆಗಳಿಗೆ ಮುಂಚಿನವರೆಗೆ ಸಿಂಧುವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಸಮಯದ ನ್ಯಾಯಸಮ್ಮತ ಭಾಗದ ಹಂಚಿಕೆಗೆ ಸಂಬಂಧಪಟ್ಟ ಎಲ್ಲ ರಾಜಕೀಯ ಪಕ್ಷಗಳು ಬದ್ಧವಾಗಿರತಕ್ಕದ್ದು.

(4) ಚುನಾವಣಾ ಆಯೋಗವು, ಈ ಪ್ರಕರಣದ ಉದ್ದೇಶಗಳಿಗಾಗಿ, ಕೇಬಲ್ ಆಪರೇಟರುಗಳು ಮತ್ತು ವಿದ್ಯುನ್ಮಾನ ಮಾಧ್ಯಮದವರಿಗಾಗಿ ನೀತಿ ಸಂಹಿತೆಯನ್ನು ರೂಪಿಸಬಹುದು ಮತ್ತು ವಿದ್ಯುನ್ಮಾನ ಮಾಧ್ಯಮವನ್ನು ವ್ಯವಸ್ಥಾಪನೆ ಮಾಡುವ ಅಥವಾ ಅದರ ವ್ಯವಸ್ಥಾಪನೆಗೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ನೀತಿ ಸಂಹಿತೆಯನ್ನು ಅನುಸರಿಸತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ವಿದ್ಯುನ್ಮಾನ ಮಾಧ್ಯಮ"ವು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ರೇಡಿಯೋ ಮತ್ತು ಯಾವುದೇ ಇತರ ಪ್ರಸಾರಣ ಮಾಧ್ಯಮವನ್ನು ಒಳಗೊಳ್ಳುತ್ತದೆ;

(ಬಿ) "ಕೇಬಲ್ ದೂರದರ್ಶನ ಜಾಲ" ಮತ್ತು "ಕೇಬಲ್ ಆಪರೇಟರ್" ಎಂಬುದು ಕೇಬಲ್ ದೂರದರ್ಶನ ಜಾಲಗಳ (ವಿನಿಯಮನ) ಅಧಿನಿಯಮ, 1995ರ (1995ರ 7) ಮೇರೆಗೆ ಅವುಗಳಿಗೆ ನೀಡಿದ ಅರ್ಥಗಳನ್ನೇ ಅನುಕ್ರಮವಾಗಿ ಹೊಂದಿರುತ್ತವೆ.

## ಅಧ್ಯಾಯ - II

## ಅಭ್ಯರ್ಥಿಗಳು ಮತ್ತು ಅವರ ಏಜೆಂಟರು

**40. ಚುನಾವಣಾ ಏಜೆಂಟರು :-** ಚುನಾವಣಾ ಅಭ್ಯರ್ಥಿಯು, ತನ್ನನ್ನು ಬಿಟ್ಟು ಇತರ ಯಾವನೇ ವ್ಯಕ್ತಿಯನ್ನು ತನ್ನ ಚುನಾವಣಾ ಏಜೆಂಟನಾಗಿರಲು ನಿಯಮಿಸಲಾದ ರೀತಿಯಲ್ಲಿ ನೇಮಕ ಮಾಡಿಕೊಳ್ಳಬಹುದು ಮತ್ತು ಅಂಥ ಯಾವುದೇ ನೇಮಕಾತಿಯನ್ನು ಮಾಡಿದಾಗ ಆ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ಕೊಡತಕ್ಕುದು.

**41. ಚುನಾವಣಾ ಏಜೆಂಟನಾಗಿರಲು ಅನರ್ಹತೆ :–** ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯ ವಿಧಾನ ಮಂಡಲ ಸದನದ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನಾಗಿರಲು ಅಥವಾ ಚುನಾವಣೆಗಳಲ್ಲಿ ಮತ ಚಲಾಯಿಸಲು ಸಂವಿಧಾನದ ಮೇರೆಗೆ ಅಥವಾ ಅಧಿನಿಯಮದ ಮೇರೆಗೆ ತತ್ಕಾಲದಲ್ಲಿ ಅನರ್ಹನಾಗಿರುವ ಯಾವನೇ ವ್ಯಕ್ತಿಯು, ಆ ಅನರ್ಹತೆಯು ಅಸ್ತಿತ್ವದಲ್ಲಿರುವವರೆಗೆ ಯಾವುದೇ ಚುನಾವಣೆಯಲ್ಲಿ ಚುನಾವಣಾ ಏಜೆಂಟನಾಗಿರಲು ಸಹ ಅರ್ಹನಾಗಿರತಕ್ಕುದಲ್ಲ.

**42. ಚುನಾವಣಾ ಏಜೆಂಟನ ನೇಮಕದ ರದ್ದಿಯಾತಿ ಅಥವಾ ಅವನ ಮರಣ :–** (1) ಚುನಾವಣಾ ಏಜೆಂಟನ ನೇಮಕದ ಯಾವುದೇ ರದ್ದಿಯಾತಿಗೆ ಅಭ್ಯರ್ಥಿಯು ಸಹಿ ಹಾಕಿರತಕ್ಕುದು ಮತ್ತು ಅದನ್ನು ಚುನಾವಣಾ ಅಧಿಕಾರಿಯ ಹತ್ತಿರ ದಾಖಲು ಮಾಡಿದ ದಿನಾಂಕದಿಂದ ಅದು ಜಾರಿಗೆ ಬರತಕ್ಕುದು.

(2) ಅಂಥ ರದ್ದಿಯಾತಿಯ ಅಥವಾ ಚುನಾವಣಾ ಏಜೆಂಟನ ಮರಣದ ಸಂದರ್ಭದಲ್ಲಿ, ಆ ಸಂದರ್ಭವು ಚುನಾವಣೆಗೆ ಮುಂಚೆ ಅಥವಾ ಚುನಾವಣೆ ನಡೆಯುವ ಸಮಯದಲ್ಲಿ ಅಥವಾ ಆ ಚುನಾವಣೆಯ ತರುವಾಯ ಸಂಭವಿಸಿದಲ್ಲಿ, ಆದರೆ 78ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಭ್ಯರ್ಥಿಯ ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಿರುವುದಕ್ಕೆ ಮೊದಲು, ಅಭ್ಯರ್ಥಿಯು ಮತ್ತೊಬ್ಬ ವ್ಯಕ್ತಿಯನ್ನು ಅವನ ಚುನಾವಣಾ ಏಜೆಂಟನಾಗಿರಲು ನಿಯಮಿಸಲಾದ ರೀತಿಯಲ್ಲಿ ನೇಮಕ ಮಾಡಬಹುದು ಮತ್ತು ಅಂಥ ನೇಮಕಾತಿಯನ್ನು ಮಾಡಿದಾಗ, ಆ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ಕೊಡತಕ್ಕುದು.

**43.** (ನಿರಸನಗೊಳಿಸಲಾಗಿದೆ).

**44.** (ನಿರಸನಗೊಳಿಸಲಾಗಿದೆ).

**45. ಚುನಾವಣಾ ಏಜೆಂಟರ ಪ್ರಕಾರ್ಯಗಳು :–** ಚುನಾವಣೆಯ ಸಂಬಂಧದಲ್ಲಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಒಬ್ಬ ಚುನಾವಣಾ ಏಜೆಂಟನು ನಿರ್ವಹಿಸಲು ಅಧಿಕೃತಗೊಳಿಸಲಾಗಿರುವಂಥ ಪ್ರಕಾರ್ಯಗಳನ್ನು ಅವನು ನಿರ್ವಹಿಸಬಹುದು.

**46. ಮತದಾನ ಏಜೆಂಟರ ನೇಮಕ :–** ಸ್ಪರ್ಧಿಸಿರುವ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು, 25ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಲಾದ ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಅಥವಾ 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳದಲ್ಲಿ ಅಂಥ ಅಭ್ಯರ್ಥಿಯ ಮತದಾನ ಏಜೆಂಟನಾಗಿ ಕಾರ್ಯ ನಿರ್ವಹಿಸಲು ನಿಯಮಿಸಲಾದ ರೀತಿಯಲ್ಲಿ ನಿಯಮಿಸಬಹುದಾದಂಥ ಸಂಖ್ಯೆಯ ಏಜೆಂಟರು ಮತ್ತು ಬದಲಿ ಏಜೆಂಟರನ್ನು ನೇಮಕ ಮಾಡಬಹುದು.

**47. ಎಣಿಕೆ ಏಜೆಂಟರ ನೇಮಕ :–** ಸ್ಪರ್ಧಿಸಿರುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು, ಮತಗಳನ್ನು ಎಣಿಕೆ ಮಾಡುವಾಗ ಅವನ ಎಣಿಕೆ ಏಜೆಂಟನಾಗಿ ಅಥವಾ ಏಜೆಂಟರಾಗಿ ಹಾಜರಿರಲು ನಿಯಮಿಸಲಾದ ರೀತಿಯಲ್ಲಿ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು, ಆದರೆ ನಿಯಮಿಸಬಹುದಾದಂಥ ಸಂಖ್ಯೆಯನ್ನು ಮೀರದಂತೆ ನೇಮಕ ಮಾಡಬಹುದು ಮತ್ತು ಯಾವುದೇ ಅಂಥ ನೇಮಕಾತಿಯನ್ನು ಮಾಡಿದಾಗ ಆ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ಕೊಡತಕ್ಕುದು.

**48. ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನ ನೇಮಕದ ರದ್ದಿಯಾತಿ ಅಥವಾ ಅವನ ಮರಣ :–** (1) ಮತದಾನ ಏಜೆಂಟನ ನೇಮಕಾತಿಯ ಯಾವುದೇ ರದ್ದಿಯಾತಿಗೆ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಸಹಿ ಹಾಕತಕ್ಕುದು ಮತ್ತು ಅದನ್ನು ನಿಯಮಿಸಬಹುದಾದಂಥ ಅಧಿಕಾರಿಯ ಬಳಿ ದಾಖಲು ಮಾಡುವ ದಿನಾಂಕದಿಂದ ಅದು ಜಾರಿಗೆ ಬರತಕ್ಕುದು ಮತ್ತು ಮತದಾನವು ಮುಕ್ತಾಯವಾಗುವುದಕ್ಕೆ ಮುಂಚೆ ಅಂಥ ರದ್ದಿಯಾತಿಯ ಅಥವಾ ಮತದಾನ ಏಜೆಂಟನ ಮರಣ ಸಂದರ್ಭದಲ್ಲಿ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತದಾನವು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತ್ತೊಬ್ಬ ಮತದಾನ ಏಜೆಂಟನನ್ನು ನಿಯಮಿಸಲಾದ ರೀತಿಯಲ್ಲಿ ನೇಮಕ ಮಾಡಬಹುದು ಮತ್ತು ಅವನು ಅಂಥ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ನಿಯಮಿಸಬಹುದಾದಂಥ ಅಧಿಕಾರಿಗೆ ತಕ್ಷಣವೇ ಕೊಡತಕ್ಕುದು.

(2) ಎಣಿಕೆ ಏಜೆಂಟನ ನೇಮಕಾತಿಯ ಯಾವುದೇ ರದ್ದಿಯಾತಿಗೆ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಸಹಿ ಹಾಕತಕ್ಕುದು ಮತ್ತು ಅದನ್ನು ಚುನಾವಣಾ ಅಧಿಕಾರಿ ಬಳಿ ದಾಖಲು ಮಾಡುವ ದಿನಾಂಕದಂದು ಅದು ಜಾರಿಗೆ ಬರತಕ್ಕುದು ಮತ್ತು ಮತಗಳ ಎಣಿಕೆ ಪ್ರಾರಂಭವಾಗುವುದಕ್ಕೆ ಮುಂಚೆ ಅಂಥ ರದ್ದಿಯಾತಿಯ ಅಥವಾ ಎಣಿಕೆ ಏಜೆಂಟನ ಮರಣದ ಸಂದರ್ಭದಲ್ಲಿ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತಗಳ ಎಣಿಕೆ ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ನಿಯಮಿಸಲಾದ ರೀತಿಯಲ್ಲಿ ಮತ್ತೊಬ್ಬ ಎಣಿಕೆ ಏಜೆಂಟನನ್ನು ನೇಮಕ ಮಾಡಬಹುದು ಮತ್ತು ಅವನು ಅಂಥ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ತಕ್ಷಣವೇ ಕೊಡತಕ್ಕುದು.

**49. ಮತದಾನ ಏಜೆಂಟರ ಮತ್ತು ಎಣಿಕೆ ಏಜೆಂಟರ ಪ್ರಕಾರ್ಯಗಳು :-** (1) ಮತದಾನ ಏಜೆಂಟ್ ಮತದಾನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಒಬ್ಬ ಮತದಾನ ಏಜೆಂಟನು ನಿರ್ವಹಿಸಬೇಕೆಂದು ಅಧಿಕೃತಗೊಳಿಸಲಾದಂಥ ಪ್ರಕಾರ್ಯಗಳನ್ನು ಮತದಾನ ಏಜೆಂಟನು ನಿರ್ವಹಿಸಬಹುದು.

(2) ಮತಗಳ ಎಣಿಕೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಒಬ್ಬ ಎಣಿಕೆ ಏಜೆಂಟನು ನಿರ್ವಹಿಸಲು ಅಧಿಕೃತಗೊಳಿಸಲಾಗಿರುವಂಥ ಪ್ರಕಾರ್ಯಗಳನ್ನು ಎಣಿಕೆ ಏಜೆಂಟನು ನಿರ್ವಹಿಸಬಹುದು.

**50. ಸ್ಪರ್ಧಿಸಿರುವ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತದಾನ ಕೇಂದ್ರಗಳಲ್ಲಿ ಹಾಜರಿರುವುದು, ಮತ್ತು ಅವನು ಮತದಾನ ಏಜೆಂಟನ ಅಥವಾ ಎಣಿಕೆ ಏಜೆಂಟನ ಪ್ರಕಾರ್ಯಗಳನ್ನು ನಿರ್ವಹಿಸುವುದು :-** (1) ಮತದಾನ ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ, ಅಂಥ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿ ಮತ್ತು ಅವನ ಚುನಾವಣಾ ಏಜೆಂಟನು ಮತದಾನ ನಡೆಸಲು 25ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಿರುವ ಯಾವುದೇ ಮತದಾನ ಕೇಂದ್ರದಲ್ಲಿ ಅಥವಾ ಆ ಮತದಾನಕ್ಕಾಗಿ 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿರುವ ಸ್ಥಳದಲ್ಲಿ ಹಾಜರಿರುವ ಹಕ್ಕನ್ನು ಹೊಂದಿರತಕ್ಕುದು.

(2) ಸ್ಪರ್ಧಿಸಿರುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು, ಹಾಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಯಾವನೇ ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನನ್ನು ನೇಮಕ ಮಾಡಿದ್ದಿದ್ದರೆ ಅವನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮಾಡಲು ಅಧಿಕೃತವಾಗಿದ್ದಿರಬಹುದಾದ ಯಾವುದೇ ಕಾರ್ಯ ಅಥವಾ ಕೃತ್ಯವನ್ನು ಸ್ವತಃ ಮಾಡಬಹುದು ಅಥವಾ ಯಾವುದೇ ಅಂಥ ಕಾರ್ಯ ಅಥವಾ ಕೆಲಸವನ್ನು ಮಾಡುವಲ್ಲಿ ಸ್ಪರ್ಧಿಸಿರುವ ಅಂಥ ಅಭ್ಯರ್ಥಿಯ ಯಾವನೇ ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನಿಗೆ ಸಹಾಯ ಮಾಡಬಹುದು.

**51. ಮತದಾನ ಅಥವಾ ಎಣಿಕೆ ಏಜೆಂಟರ ಗೈರುಹಾಜರಿ :-** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮತದಾನ ಅಥವಾ ಎಣಿಕೆ ಏಜೆಂಟರ ಸಮ್ಮುಖದಲ್ಲಿ ಯಾವುದೇ ಕಾರ್ಯ ಅಥವಾ ಕೃತ್ಯವನ್ನು ಮಾಡಲು ಅಗತ್ಯಪಡಿಸಿರುವಲ್ಲಿ ಅಥವಾ ಅಧಿಕೃತಗೊಳಿಸಿರುವಲ್ಲಿ ಈ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಯಾವನೇ ಅಂಥ ಏಜೆಂಟನ ಅಥವಾ ಏಜೆಂಟರ ಗೈರು ಹಾಜರಿಯು ಆ ಕಾರ್ಯ ಅಥವಾ ಕೃತ್ಯವನ್ನು ಅನ್ಯಥಾ ಕ್ರಮಬದ್ಧವಾಗಿ ಮಾಡಿದ್ದರೆ, ಮಾಡಿರುವ ಆ ಕಾರ್ಯ ಅಥವಾ ಕೃತ್ಯವನ್ನು ಅಸಿಂಧುಗೊಳಿಸತಕ್ಕುದಲ್ಲ.

## ಅಧ್ಯಾಯ – III

## ಚುನಾವಣೆಗಳಲ್ಲಿ ಸಾಮಾನ್ಯ ಪ್ರಕ್ರಿಯೆ

**52. ಮತದಾನಕ್ಕೆ ಮುಂಚೆ ಮನ್ನಣೆ ಪಡೆದ ರಾಜಕೀಯ ಪಕ್ಷದ ಅಭ್ಯರ್ಥಿಯ ಮರಣ :-** (1) ಮನ್ನಣೆ ಪಡೆದ ರಾಜಕೀಯ ಪಕ್ಷವು ನಿಲ್ಲಿಸಿದ ಒಬ್ಬ ಅಭ್ಯರ್ಥಿಯು,-

(ಎ) ನಾಮ ನಿರ್ದೇಶನ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕದಂದು ಪೂರ್ವಾಹ್ನ 11 ಗಂಟೆಯ ತರುವಾಯ ಯಾವುದೇ ಸಮಯದಲ್ಲಿ ಮೃತನಾದರೆ ಮತ್ತು 36ನೇ ಪ್ರಕರಣದ ಮೇರೆಗೆ ನಡೆಸಿದ ಪರಿಶೀಲನೆಯ ತರುವಾಯ ಅವನ ನಾಮನಿರ್ದೇಶನ ಪತ್ರವು ಸಿಂಧುವಾಗಿದೆಯೆಂದು ಕಂಡುಬಂದರೆ ; ಅಥವಾ

(ಬಿ) ಯಾರ ನಾಮನಿರ್ದೇಶನ ಪತ್ರವು 36ನೇ ಪ್ರಕರಣದ ಮೇರೆಗಿನ ಪರಿಶೀಲನೆಯ ತರುವಾಯ ಸಿಂಧುವಾಗಿದೆ ಎಂದು ಕಂಡುಬಂದಿದೆಯೋ ಮತ್ತು ಯಾರು 37ನೇ ಪ್ರಕರಣದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿಲ್ಲವೋ ಆ ಅಭ್ಯರ್ಥಿಯು ಮೃತನಾದರೆ

ಮತ್ತು ಈ ಎರಡೂ ಸಂದರ್ಭಗಳಲ್ಲಿ 38 ನೇ ಪ್ರಕರಣದ ಮೇರೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಗೆ ಮುಂಚೆ ಯಾವುದೇ ಸಮಯದಲ್ಲಿ ಅವನ ಮರಣದ ವರದಿ ಬಂದರೆ; ಅಥವಾ

(ಸಿ) ಸ್ಪರ್ಧಿಸಿರುವ ಅಭ್ಯರ್ಥಿಯು ಮರಣ ಹೊಂದಿದರೆ ಮತ್ತು ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಅವನ ಮರಣದ ವರದಿ ಬಂದರೆ;

ರಿಟರ್ನಿಂಗ್ ಆಫೀಸರನು ಆ ಅಭ್ಯರ್ಥಿಯ ಮರಣದ ಸಂಗತಿಯ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಆದೇಶ ಹೊರಡಿಸಿ ಆ ತರುವಾಯ ಅಧಿಸೂಚಿಸಲಾಗುವಂಥ ದಿನಾಂಕಕ್ಕೆ ಮತದಾನವನ್ನು ಮುಂದೂಡುವ ಬಗ್ಗೆ ಪ್ರಕಟಿಸತಕ್ಕದ್ದು ಮತ್ತು ಆ ಸಂಗತಿಯನ್ನು ಚುನಾವಣಾ ಆಯೋಗಕ್ಕೆ ಮತ್ತು ಸಮುಚಿತ ಪ್ರಾಧಿಕಾರಕ್ಕೆ ಸಹ ವರದಿ ಮಾಡತಕ್ಕುದು :

ಪರಂತು, ಮರಣ ಹೊಂದಿದ ಅಭ್ಯರ್ಥಿಯ ನಾಮ ನಿರ್ದೇಶನ ಪತ್ರವೂ ಸೇರಿದಂತೆ ಎಲ್ಲ ನಾಮ ನಿರ್ದೇಶನ ಪತ್ರಗಳ ಪರಿಶೀಲನೆ ಮಾಡಿದ ತರುವಾಯ ಹೊರತು (ಎ) ಖಂಡದಲ್ಲಿ ಉಲ್ಲೇಖಿಸಲಾದ ಪ್ರಕರಣದಲ್ಲಿ ಮತದಾನವನ್ನು ಮುಂದೂಡುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಚುನಾವಣಾ ಆಯೋಗವು, (1) ನೇ ಉಪ-ಪ್ರಕರಣದ ಮೇರೆಗೆ ರಿಟರ್ನಿಂಗ್ ಆಫೀಸರನಿಂದ ವರದಿ ಬಂದ ಮೇಲೆ, ಮನ್ನಣೆ ಪಡೆದ ಯಾವ ರಾಜಕೀಯ ಪಕ್ಷದ ಅಭ್ಯರ್ಥಿಯು ಮೃತನಾಗಿರುವನೋ ಆ ರಾಜಕೀಯ ಪಕ್ಷಕ್ಕೆ ಅಂಥ ನೋಟೀಸನ್ನು ನೀಡಿದ ಏಳು ದಿನಗಳ ಒಳಗಾಗಿ ಸದರಿ ಚುನಾವಣೆಗೆ ಇನ್ನೊಬ್ಬ ಅಭ್ಯರ್ಥಿಯನ್ನು ನಾಮನಿರ್ದೇಶಿಸುವಂತೆ ಕೇಳತಕ್ಕದ್ದು ಮತ್ತು 30 ರಿಂದ 37 ರ ವರೆಗಿನ ಪ್ರಕರಣಗಳ ಉಪಬಂಧಗಳು ಇತರ ನಾಮನಿರ್ದೇಶನಗಳಿಗೆ ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಅಂಥ ನಾಮನಿರ್ದೇಶನಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು:

ಪರಂತು, ಮತದಾನವನ್ನು ಮುಂದೂಡುವುದಕ್ಕೆ ಮುಂಚೆ 37 ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡ ನೋಟೀಸನ್ನು ನೀಡಿದ ಯಾರೇ ವ್ಯಕ್ತಿಯು ಅಂಥ ಮುಂದೂಡಿಕೆಯ ತರುವಾಯ ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶನ ಹೊಂದಲು ಅನರ್ಹನಾಗತಕ್ಕದ್ದಲ್ಲ.

(3) (1) ನೇ ಉಪ-ಪ್ರಕರಣದ ಮೇರೆಗೆ ಮತದಾನವನ್ನು ಮುಂದೂಡುವುದಕ್ಕೆ ಮುಂಚೆ 38 ನೇ ಪ್ರಕರಣದ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿರುವಲ್ಲಿ, ರಿಟರ್ನಿಂಗ್ ಆಫೀಸರನು (2) ನೇ ಉಪ ಪ್ರಕರಣದ ಮೇರೆಗೆ ಸಿಂಧುವಾಗಿ ನಾಮನಿರ್ದೇಶಿತನಾಗಿರುವ ಅಭ್ಯರ್ಥಿಯ ಹೆಸರೂ ಸೇರುವ ಹಾಗೆ ಆ ಪ್ರಕರಣದ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಹೊಸ ಪಟ್ಟಿಯನ್ನು ಮತ್ತೊಮ್ಮೆ ಸಿದ್ಧಪಡಿಸಿ ಪ್ರಕಟಿಸತಕ್ಕದ್ದು.

ವಿವರಣೆ :- ಈ ಪ್ರಕರಣ ಮತ್ತು 33 ಹಾಗೂ 38 ನೇ ಪ್ರಕರಣಗಳ ಉದ್ದೇಶಗಳಿಗಾಗಿ "ಮನ್ನಣೆ ಪಡೆದ ರಾಜಕೀಯ ಪಕ್ಷ" ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968 ರ ಮೇರೆಗೆ ಚುನಾವಣಾ ಆಯೋಗದಿಂದ ಮನ್ನಣೆ ಪಡೆದ ಒಂದು ರಾಜಕೀಯ ಪಕ್ಷ.

**53. ಸ್ಪರ್ಧೆ ಇರುವ ಮತ್ತು ಸ್ಪರ್ಧೆ ಇಲ್ಲದ ಚುನಾವಣೆಗಳಲ್ಲಿ ಪ್ರಕ್ರಿಯೆ :-** (1) ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯು, ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಹೆಚ್ಚಾಗಿದ್ದರೆ ಮತದಾನವನ್ನು ನಡೆಸತಕ್ಕುದು.

(2) ಅಂಥ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮನಾಗಿದ್ದರೆ ಚುನಾವಣಾ ಅಧಿಕಾರಿಯು ಆ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಎಲ್ಲ ಅಂಥ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂಬುದಾಗಿ ತಕ್ಷಣವೇ ಘೋಷಿಸತಕ್ಕುದು.

(3) ಅಂಥ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಕಡಿಮೆ ಇದ್ದರೆ ಚುನಾವಣಾಧಿಕಾರಿಯು ಎಲ್ಲ ಅಂಥ ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆಂದು ತಕ್ಷಣವೇ ಘೋಷಿಸತಕ್ಕುದು ಮತ್ತು ಚುನಾವಣಾ ಆಯೋಗವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಉಳಿದ ಸ್ಥಾನವನ್ನು ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಒಬ್ಬ ವ್ಯಕ್ತಿ ಅಥವಾ ಹೆಚ್ಚು ವ್ಯಕ್ತಿಗಳನ್ನು ಆಯ್ಕೆ ಮಾಡಲು ಸಂದರ್ಭಾನುಸಾರ, ರಾಜ್ಯ ವಿಧಾನಸಭೆಯ ಚುನಾವಣಾ ಕ್ಷೇತ್ರ ಅಥವಾ ಅದರ ಚುನಾಯಿತ ಸದಸ್ಯರು ಅಥವಾ ಸದಸ್ಯರನ್ನು ಅಥವಾ ಸಂಬಂಧಪಟ್ಟ ಚುನಾಯಕ ಗಣದ ಸದಸ್ಯರನ್ನು ಕೇಳಿಕೊಳ್ಳತಕ್ಕದ್ದು :

ಪರಂತು, ರಾಜ್ಯ ವಿಧಾನಸಭೆಯ ಚುನಾವಣಾ ಕ್ಷೇತ್ರ ಅಥವಾ ಅದರ ಚುನಾಯಿತ ಸದಸ್ಯರು ಅಥವಾ ಸದಸ್ಯರನ್ನು ಅಥವಾ ಚುನಾಯಕ ಗಣದ ಸದಸ್ಯರನ್ನು, ಈ ಉಪಪ್ರಕರಣದ ಮೇರೆಗೆ ಈಗಾಗಲೇ ಕೇಳಿಕೊಳ್ಳಲಾಗಿದ್ದು ಅದು ಅಥವಾ ಅವರು ಆ ಖಾಲಿ ಸ್ಥಾನ ಅಥವಾ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಸಂದರ್ಭಾನುಸಾರ ಒಬ್ಬ ವ್ಯಕ್ತಿಯನ್ನು ಅಥವಾ ಅಗತ್ಯ ಸಂಖ್ಯೆಯ ವ್ಯಕ್ತಿಗಳನ್ನು ಆಯ್ಕೆ ಮಾಡಲು ತಪ್ಪಿರುವಲ್ಲಿ, ಚುನಾವಣಾ ಆಯೋಗವು, ಅಂಥ ಸದಸ್ಯರ ಚುನಾವಣಾ ಕ್ಷೇತ್ರವನ್ನು ಪುನಃ ಕೇಳಿಕೊಂಡರೆ ಅದರ ಕಡೆಯಿಂದ ಯಾವುದೇ ವಿಫಲತೆಯುಂಟಾಗದೆಂದು ಮನದಟ್ಟು ಮಾಡಿಕೊಳ್ಳುವವರೆಗೆ, ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಆಯ್ಕೆ ಮಾಡಲು ಆ ಚುನಾವಣಾ ಕ್ಷೇತ್ರ ಅಥವಾ ಅಂಥ ಸದಸ್ಯರನ್ನು ಪುನಃ ಕೇಳಿಕೊಳ್ಳಲು ಅದು ಬದ್ಧವಾಗಿರತಕ್ಕುದಲ್ಲ.

**54.** (ನಿರಸನಗೊಳಿಸಲಾಗಿದೆ).

**55. ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸದಸ್ಯರು ಆ ಜಾತಿಗಳು ಅಥವಾ ಬುಡಕಟ್ಟುಗಳಿಗಾಗಿ ಮೀಸಲಿರಿಸದ ಸ್ಥಾನಗಳನ್ನು ಹೊಂದಲು ಅರ್ಹತೆ :-** ಸಂದೇಹದ ನಿವಾರಣೆಗಾಗಿ, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸದಸ್ಯನು ಆ ಜಾತಿಗಳ ಅಥವಾ ಬುಡಕಟ್ಟುಗಳ ಸದಸ್ಯರಿಗಾಗಿ ಮೀಸಲಿರಿಸದ ಸ್ಥಾನವನ್ನು ಹೊಂದಲು ಅವನು ಸಂದರ್ಭಾನುಸಾರ ಸಂವಿಧಾನದ ಮತ್ತು ಈ ಅಧಿನಿಯಮದ ಮೇರೆಗೆ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, 1963 (1963ರ 20)ರ ಮೇರೆಗೆ ಅಂಥ ಸ್ಥಾನಗಳನ್ನು ಹೊಂದಲು ಅನ್ಯಥಾ ಅರ್ಹನಾಗಿದ್ದರೆ, ಅನರ್ಹನಾಗತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**55ಎ.** (ನಿರಸನಗೊಳಿಸಲಾಗಿದೆ).

## ಅಧ್ಯಾಯ IV – ಮತದಾನ

**56. ಮತದಾನಕ್ಕಾಗಿ ಕಾಲವನ್ನು ನಿಗದಿಪಡಿಸುವುದು :–** ಚುನಾವಣಾ ಆಯೋಗವು, ಮತದಾನ ನಡೆಯುವ ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕುದು :

ಪರಂತು, ಸಂಸದೀಯ ಅಥವಾ ವಿಧಾನಸಭೆಯ ಚುನಾವಣಾ ಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕಾಗಿ ಯಾವುದೇ ಒಂದು ದಿನದಂದು ಹಂಚಿಕೆಯಾದ ಒಟ್ಟು ಅವಧಿಯು ಎಂಟು ಗಂಟೆಗಳಿಗಿಂತ ಕಡಿಮೆ ಇರತಕ್ಕುದಲ್ಲ.

**57. ತುರ್ತು ಪರಿಸ್ಥಿತಿಗಳಲ್ಲಿ ಮತದಾನದ ಮುಂದೂಡಿಕೆ :–** (1) ಚುನಾವಣೆಯಲ್ಲಿ 25ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಲಾದ ಯಾವುದೇ ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿರುವ ಸ್ಥಳದಲ್ಲಿ ಯಾವುದೇ ದೊಂಬಿ ಅಥವಾ ಬಹಿರಂಗ ಹಿಂಸೆಯ ಮೂಲಕ ವ್ಯವಹರಣೆಗಳಿಗೆ ಅಡ್ಡಿ ಅಥವಾ ತಡೆಯುಂಟಾದರೆ, ಅಥವಾ ಚುನಾವಣೆಯಲ್ಲಿ ಯಾವುದೇ ನೈಸರ್ಗಿಕ ವಿಪತ್ತು ಅಥವಾ ಯಾವುದೇ ಇತರ ಸಾಕಷ್ಟು ಕಾರಣದಿಂದ ಯಾವುದೇ ಮತದಾನ ಕೇಂದ್ರ ಅಥವಾ ಅಂಥ ಸ್ಥಳದಲ್ಲಿ ಮತದಾನವನ್ನು ನಡೆಸಲು ಸಾಧ್ಯವಾಗದಿದ್ದರೆ, ಸಂದರ್ಭಾನುಸಾರ ಅಂಥ ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿ ಅಥವಾ ಅಂಥ ಸ್ಥಳದ ಆಧಿಪತ್ಯವನ್ನು ಹೊಂದಿರುವ ಚುನಾವಣಾಧಿಕಾರಿಯು ಅನಂತರ ಅಧಿಸೂಚಿಸಲಾಗುವ ದಿನಾಂಕಕ್ಕೆ ಆ ಮತದಾನದ ಮುಂದೂಡುವಿಕೆಯನ್ನು ಪ್ರಕಟಿಸತಕ್ಕುದು ಮತ್ತು ಪೀಠಾಸೀನ ಅಧಿಕಾರಿಯು ಆ ಮತದಾನವನ್ನು ಹಾಗೆ ಮುಂದಕ್ಕೆ ಹಾಕಿರುವಲ್ಲಿ ಅವನು ಸಂಬಂಧಪಟ್ಟ ಚುನಾವಣಾಧಿಕಾರಿಗೆ ತಕ್ಷಣ ಅದನ್ನು ತಿಳಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಮತದಾನವನ್ನು ಮುಂದೂಡಿದಾಗಲೆಲ್ಲಾ, ಚುನಾವಣಾಧಿಕಾರಿಯು ಸಮುಚಿತ ಪ್ರಾಧಿಕಾರ ಮತ್ತು ಚುನಾವಣಾ ಆಯೋಗಕ್ಕೆ ಸನ್ನಿವೇಶಗಳನ್ನು ತಕ್ಷಣವೇ ವರದಿ ಮಾಡತಕ್ಕುದು ಮತ್ತು ಸಾಧ್ಯವಾದಷ್ಟು ಬೇಗನೆ ಚುನಾವಣಾ ಆಯೋಗದ ಪೂರ್ವಾನುಮೋದನೆಯನ್ನು ಪಡೆದು ಮತದಾನವು ಪುನರಾರಂಭವಾಗತಕ್ಕ ದಿನವನ್ನು ಗೊತ್ತುಪಡಿಸತಕ್ಕುದು ಮತ್ತು ಮತದಾನ ನಡೆಯುವ ಮತದಾನ ಕೇಂದ್ರ ಅಥವಾ ಸ್ಥಳ ಮತ್ತು ಸಮಯವನ್ನು ನಿಗದಿಪಡಿಸತಕ್ಕುದು ಮತ್ತು ಅಂಥ ಚುನಾವಣೆಯಲ್ಲಿ ಚಲಾಯಿಸಲಾದ ಮತಗಳನ್ನು ಅಂಥ ಮುಂದೂಡಲಾದ ಮತದಾನವು ಪೂರ್ಣವಾಗುವವರೆಗೆ ಎಣಿಕೆ ಮಾಡತಕ್ಕುದಲ್ಲ.

(3) ಮೇಲೆ ಹೇಳಿರುವಂಥ ಪ್ರತಿಯೊಂದು ಸಂದರ್ಭದಲ್ಲಿ ಚುನಾವಣಾಧಿಕಾರಿಯು, ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ (2)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಮತದಾನದ ದಿನಾಂಕ, ಸ್ಥಳ ಮತ್ತು ವೇಳೆಯನ್ನು ಅಧಿಸೂಚಿಸತಕ್ಕುದು.

**58. ಮತಪೆಟ್ಟಿಗೆಗಳ ನಾಶ, ಇತ್ಯಾದಿ ಸಂದರ್ಭದಲ್ಲಿ ಹೊಸ ಮತದಾನ :–** (1) ಯಾವುದೇ ಚುನಾವಣೆಯಲ್ಲಿ –

(ಎ) ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಉಪಯೋಗಿಸಲಾದ ಯಾವುದೇ ಮತಪೆಟ್ಟಿಗೆಯನ್ನು ಪೀಠಾಸೀನ ಅಧಿಕಾರಿಯ ಅಥವಾ ಚುನಾವಣಾಧಿಕಾರಿಯ ಅಭಿರಕ್ಷೆಯಿಂದ ಹೊರಗೆ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ನಷ್ಟಗೊಳಿಸಿದರೆ ಅಥವಾ ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಷ್ಟು ಅದನ್ನು ಹಾನಿಗೊಳಿಸಿದರೆ ಅಥವಾ ಅದರೊಂದಿಗೆ ಹಸ್ತಕ್ಷೇಪ ಮಾಡಿದರೆ ; ಅಥವಾ

(ಎಎ) ಮತಗಳನ್ನು ದಾಖಲು ಮಾಡುವ ಕ್ರಮದಲ್ಲಿ ಯಾವುದೇ ಮತದಾನ ಯಂತ್ರದಲ್ಲಿ ಯಾಂತ್ರಿಕ ದೋಷ ಉಂಟಾದರೆ ; ಅಥವಾ

(ಬಿ) ಮತದಾನವನ್ನು ನಿರರ್ಥಕಗೊಳಿಸುವ ಸಂಭವವಿರುವ ಪ್ರಕ್ರಿಯೆಯಲ್ಲಿನ ಅಂಥ ದೋಷ ಅಥವಾ ಅಕ್ರಮವನ್ನು ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಮಾಡಿದರೆ ,

– ಚುನಾವಣಾಧಿಕಾರಿಯು, ಚುನಾವಣಾ ಆಯೋಗಕ್ಕೆ ಆ ವಿಷಯವನ್ನು ತತ್‌ಕ್ಷಣವೇ ವರದಿ ಮಾಡತಕ್ಕುದು.

(2) ಆ ತರುವಾಯ, ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು–

(ಎ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕುದು, ಮತ್ತು ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕುದು ; ಅಥವಾ

(ಬಿ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಹೊಸ ಮತದಾನದ ಫಲಿತಾಂಶವು ಚುನಾವಣೆಯ ಫಲಿತಾಂಶದ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲವೆಂದು ಅಥವಾ ಮತದಾನ ಯಂತ್ರದ ಯಾಂತ್ರಿಕ ದೋಷವು ಅಥವಾ ಪ್ರಕ್ರಿಯೆಯಲ್ಲಿನ ಆ ದೋಷ ಅಥವಾ ಅಕ್ರಮವು ಮುಖ್ಯವಾಗಿಲ್ಲವೆಂದು ಅದಕ್ಕೆ ಮನದಟ್ಟಾದರೆ, ಅದು ಆ ಚುನಾವಣೆಯನ್ನು ಮುಂದುವರೆಸಲು ಮತ್ತು ಪೂರ್ಣಗೊಳಿಸಲು ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಚುನಾವಣಾಧಿಕಾರಿಗೆ ನೀಡತಕ್ಕುದು.

(3) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಅಥವಾ ಆದೇಶಗಳ ಉಪಬಂಧಗಳು ಮೂಲ ಮತದಾನಕ್ಕೆ ಅನ್ವಯವಾಗುವಂತೆಯೇ ಅಂಥ ಪ್ರತಿಯೊಂದು ಹೊಸ ಮತದಾನಕ್ಕೂ ಅನ್ವಯವಾಗತಕ್ಕುದು.

**58ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಆಧಾರದ ಮೇಲೆ ಮತದಾನವನ್ನು ಮುಂದೂಡುವುದು ಅಥವಾ ಚುನಾವಣೆಯನ್ನು ಪ್ರತ್ಯಾದೇಶಿಸುವುದು :-** (1) ಯಾವುದೇ ಚುನಾವಣೆಯಲ್ಲಿ,-

(ಎ) ಮತದಾನ ಕೇಂದ್ರದ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದ (ಇನ್ನು ಮುಂದೆ ಈ ಪ್ರಕರಣದಲ್ಲಿ ಸ್ಥಳವೆಂದು ಉಲ್ಲೇಖಿಸಲಾಗಿದೆ) ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಂಥ ರೀತಿಯಲ್ಲಿ ಆ ಮತದಾನ ಕೇಂದ್ರದಲ್ಲಿ ಅಥವಾ ಸ್ಥಳದಲ್ಲಿ ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಯು ಸಂಭವಿಸಿದರೆ ; ಅಥವಾ

(ಬಿ) ಮತ ಎಣಿಕೆಯ ಸ್ಥಳದಲ್ಲಿ ಎಣಿಕೆಯ ಫಲಿತಾಂಶವನ್ನು ನಿಶ್ಚಿತಗೊಳಿಸಲಾದಂಥ ರೀತಿಯಲ್ಲಿ ಆ ಯಾವುದೇ ಸ್ಥಳದಲ್ಲಿ ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಯು ಸಂಭವಿಸಿದರೆ

- ಚುನಾವಣಾಧಿಕಾರಿಯು ಚುನಾವಣಾ ಆಯೋಗಕ್ಕೆ ಆ ವಿಷಯವನ್ನು ತಕ್ಷಣವೇ ವರದಿ ಮಾಡತಕ್ಕುದು.

(2) ಚುನಾವಣಾ ಆಯೋಗವು, (1)ನೇ ಉಪಪ್ರಕರಣದ ಮೇರೆಗೆ ಚುನಾವಣಾ ಅಧಿಕಾರಿಯಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಮತ್ತು ಎಲ್ಲ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ,-

(ಎ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕುದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕುದು ; ಅಥವಾ

(ಬಿ) ಅಧಿಕ ಸಂಖ್ಯೆಯ ಮತದಾನ ಕೇಂದ್ರಗಳು ಅಥವಾ ಸ್ಥಳಗಳು ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಗೆ ಒಳಗಾಗಿರುವ ಕಾರಣದಿಂದ ಆ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಂಭವವಿದೆಯೆಂದು, ಅಥವಾ ಆ ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಯು, ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರುವಂಥ ರೀತಿಯಲ್ಲಿ ಮತಗಳ ಎಣಿಕೆಯ ಮೇಲೆ ಪ್ರಭಾವ ಬೀರಿದ್ದಿತು ಎಂದು ಅದಕ್ಕೆ ಮನದಟ್ಟಾದರೆ, ಆ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯನ್ನು ಪ್ರತ್ಯಾದೇಶಿಸತಕ್ಕುದು.

ವಿವರಣೆ :- ಈ ಪ್ರಕರಣದಲ್ಲಿ "ಮತಗಟ್ಟೆ ವಶಪಡಿಸಿಕೊಳ್ಳುವಿಕೆ" ಎಂಬುದು 135ಎ ಪ್ರಕರಣದಲ್ಲಿ ಇರುವಂಥ ಅರ್ಥವನ್ನೇ ಹೊಂದಿರತಕ್ಕುದು.

**59. ಚುನಾವಣೆಗಳಲ್ಲಿ ಮತ ನೀಡುವ ವಿಧಾನ :-** ಮತದಾನ ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತಪತ್ರದ ಮೂಲಕ ಮತಗಳನ್ನು ನೀಡತಕ್ಕುದು ಮತ್ತು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು, ಯಾವ ಮತಗಳನ್ನೂ ಪ್ರತಿನಿಧಿ ಮತಗಳ ಮೂಲಕ ಪಡೆಯತಕ್ಕುದಲ್ಲ:

ಪರಂತು, ರಾಜ್ಯಸಭೆಯ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿಮಾಡಲು ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮುಕ್ತ ಮತದಾನದ ಮೂಲಕ ನೀಡತಕ್ಕದ್ದು.

**60. ಕೆಲವು ವರ್ಗಗಳ ವ್ಯಕ್ತಿಗಳು ಮತದಾನ ಮಾಡುವುದಕ್ಕೆ ವಿಶೇಷ ಕಾರ್ಯವಿಧಾನ :-** 59ನೇ ಪ್ರಕರಣದಲ್ಲಿ ಅಡಕವಾಗಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ,-

(ಎ) ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ 43) (ಈ ಪ್ರಕರಣದಲ್ಲಿ ಇನ್ನು ಮುಂದೆ 1950ರ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 20ನೇ ಪ್ರಕರಣದ (8)ನೇ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿತವಾದ ಯಾರೇ ವ್ಯಕ್ತಿಯು ಮತದಾನ ನಡೆಯುವ ಚುನಾವಣಾ ಕ್ಷೇತ್ರದಲ್ಲಿ ತನ್ನ ಮತವನ್ನು ತಾನೇ ಖುದ್ದಾಗಿ ಅಥವಾ ಅಂಚೆ ಮತಪತ್ರದ ಮೂಲಕ ಅಥವಾ ಪ್ರತಿನಿಧಿ ಮತದ ಮೂಲಕ ಮತ್ತು ಯಾವುದೇ ಇತರ ವಿಧಾನದಲ್ಲಿ ಅಲ್ಲದೆ ಮತ ನೀಡಲು ಸಾಧ್ಯವಾಗುವಂತೆ;

(ಬಿ) ಮತದಾನ ನಡೆಯುವ ಒಂದು ಚುನಾವಣಾ ಕ್ಷೇತ್ರದಲ್ಲಿ ಈ ಮುಂದಿನ ವ್ಯಕ್ತಿಗಳ ಪೈಕಿ ಯಾರೇ ವ್ಯಕ್ತಿಯು ತನ್ನ ಮತವನ್ನು ಖುದ್ದಾಗಿ ಅಥವಾ ಅಂಚೆ ಮತಪತ್ರದ ಮೂಲಕ ಮತ್ತು ಯಾವುದೇ ಇತರ ವಿಧಾನದಲ್ಲಿ ಅಲ್ಲದೆ ನೀಡಲು ಸಾಧ್ಯವಾಗುವಂತೆ, ಎಂದರೆ:-

(i) 1950ರ ಅಧಿನಿಯಮದ 20ನೇ ಪ್ರಕರಣದ (8)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಅಥವಾ (ಡಿ) ಖಂಡದಲ್ಲಿ ಉಲ್ಲೇಖಿತನಾದ ಯಾವನೇ ವ್ಯಕ್ತಿಯು;

(ii) 1950ರ ಅಧಿನಿಯಮದ 20ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳು ಯಾರಿಗೆ ಅನ್ವಯವಾಗುತ್ತವೆಯೋ ಅಂಥ ಯಾರೇ ವ್ಯಕ್ತಿಯ ಹೆಂಡತಿ ಮತ್ತು ಆ ಪ್ರಕರಣದ (6)ನೇ ಉಪಪ್ರಕರಣಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯೊಂದಿಗೆ ಸಾಮಾನ್ಯವಾಗಿ ವಾಸಿಸುತ್ತಿರುವ ಅಂಥ ಹೆಂಡತಿ;

(ಸಿ) ಚುನಾವಣಾ ಆಯೋಗವು, ಸರ್ಕಾರದೊಂದಿಗೆ ಸಮಾಲೋಚಿಸಿ ಅಧಿಸೂಚಿಸಿದ ವ್ಯಕ್ತಿಗಳ ವರ್ಗಕ್ಕೆ ಸೇರಿದ ಯಾರೇ ವ್ಯಕ್ತಿಯು, ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಗತ್ಯತೆಗಳ ಈಡೇರಿಕೆಗೆ ಒಳಪಟ್ಟು, ಮತದಾನ ನಡೆಯುವ ಚುನಾವಣಾ ಕ್ಷೇತ್ರದಲ್ಲಿನ ಒಂದು ಚುನಾವಣೆಯಲ್ಲಿ ತನ್ನ ಮತವನ್ನು ಅಂಚೆ ಮತಪತ್ರದ ಮೂಲಕ, ಆದರೆ ಬೇರೆ ಯಾವುದೇ ವಿಧಾನದಲ್ಲಿ ಅಲ್ಲದೆ ನೀಡಲು ಸಾಧ್ಯವಾಗುವಂತೆ;

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಯಾರೇ ವ್ಯಕ್ತಿಯು, ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಗತ್ಯತೆಗಳ ಈಡೇರಿಕೆಗೆ ಒಳಪಟ್ಟು, ಮತದಾನ ನಡೆಯುವ ಚುನಾವಣಾ ಕ್ಷೇತ್ರದಲ್ಲಿನ ಒಂದು ಚುನಾವಣೆಯಲ್ಲಿ ತನ್ನ ಮತವನ್ನು ಅಂಚೆ ಮತಪತ್ರದ ಮೂಲಕ, ಆದರೆ ಬೇರೆ ಯಾವುದೇ ವಿಧಾನದಲ್ಲಿ ಅಲ್ಲದೆ, ನೀಡಲು ಸಾಧ್ಯವಾಗುವಂತೆ

– ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

**61. ಮತದಾರರಂತೆ ನಟಿಸುವವರನ್ನು ತಡೆಗಟ್ಟುವುದಕ್ಕಾಗಿ ವಿಶೇಷ ಪ್ರಕ್ರಿಯೆ :–** ಮತದಾರರಂತೆ ನಟಿಸುವವರನ್ನು ತಡೆಗಟ್ಟುವ ದೃಷ್ಟಿಯಿಂದ –

(ಎ) ಮತದಾನ ಕೇಂದ್ರದಲ್ಲಿ ಮತ ನೀಡುವ ಉದ್ದೇಶಕ್ಕಾಗಿ ಮತಪತ್ರ ಅಥವಾ ಮತಪತ್ರಗಳನ್ನು ಕೋರುವ ಪ್ರತಿಯೊಬ್ಬ ಮತದಾರನಿಗೆ ಅಂಥ ಪತ್ರ ಅಥವಾ ಪತ್ರಗಳನ್ನು ನೀಡುವುದಕ್ಕೆ ಮೊದಲು ಅವನ ಹೆಬ್ಬೆರಳು ಅಥವಾ ಯಾವುದೇ ಇತರ ಬೆರಳಿನ ಮೇಲೆ ಅಳಿಸಲಾಗದ ಮಸಿಯಿಂದ ಗುರುತು ಮಾಡುವುದಕ್ಕಾಗಿ ;

(ಬಿ) ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950 ರ 43)ರ ಮೇರೆಗೆ ಈ ಬಗ್ಗೆ ರಚಿಸಲಾದ ನಿಯಮಗಳ ಮೇರೆಗೆ ಮತದಾನ ಕೇಂದ್ರವಿರುವ ಚುನಾವಣಾ ಕ್ಷೇತ್ರದ ಮತದಾರರಿಗೆ ಅವರವರ ಭಾವಚಿತ್ರಗಳು ಲಗತ್ತಾದ ಅಥವಾ ಲಗತ್ತಾಗದೇ ಇರುವ ಗುರುತು ಚೀಟಿಗಳನ್ನು ಸರಬರಾಜು ಮಾಡಲಾಗಿದ್ದರೆ ಮೇಲೆ ಹೇಳಿರುವ ಪ್ರತಿಯೊಬ್ಬ ಅಂಥ ಮತದಾರನಿಗೆ ಮತಪತ್ರ ಅಥವಾ ಮತಪತ್ರಗಳನ್ನು ನೀಡುವುದಕ್ಕೆ ಮೊದಲು ಅವನು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯ ಅಥವಾ ಮತದಾನಾಧಿಕಾರಿಯ ಮುಂದೆ ತನ್ನ ಗುರುತು ಚೀಟಿಯನ್ನು ಹಾಜರುಪಡಿಸುವುದಕ್ಕಾಗಿ ; ಮತ್ತು

(ಸಿ) ಯಾವನೇ ವ್ಯಕ್ತಿಯು ಯಾವುದೇ ಮತಪತ್ರವನ್ನು ಕೋರುವ ಸಮಯದಲ್ಲಿ ಅವನ ಹೆಬ್ಬೆರಳಿನ ಅಥವಾ ಯಾವುದೇ ಇತರ ಬೆರಳಿನ ಮೇಲೆ ಈಗಾಗಲೇ ಅಂಥ ಗುರುತನ್ನು ಹೊಂದಿದ್ದರೆ ಅಥವಾ ಕೇಳಿದಾಗ ತನ್ನ ಗುರುತಿನ ಚೀಟಿಯನ್ನು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯ ಅಥವಾ ಮತದಾನ ಅಧಿಕಾರಿಯ ಮುಂದೆ ಹಾಜರುಪಡಿಸದಿದ್ದರೆ, ಮತದಾನ ಕೇಂದ್ರದಲ್ಲಿ ಮತ ನೀಡಲು ಅಂಥ ವ್ಯಕ್ತಿಗೆ ಅಂಥ ಪತ್ರ ನೀಡುವುದನ್ನು ನಿಷೇಧಿಸುವುದಕ್ಕಾಗಿ

– ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

**61ಎ. ಚುನಾವಣೆಗಳಲ್ಲಿ ಮತದಾನ ಯಂತ್ರಗಳು :–** ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮದಲ್ಲಿ ಏನೇ ಅಡಕವಾಗಿದ್ದರೂ, ಚುನಾವಣಾ ಆಯೋಗವು ಪ್ರತಿಯೊಂದು ಸಂದರ್ಭದ ಸನ್ನಿವೇಶಗಳನ್ನು ಗಮನಿಸಿ ನಿರ್ದಿಷ್ಟಪಡಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತದಾನ ಯಂತ್ರಗಳ ಮೂಲಕ ಮತ ನೀಡುವುದನ್ನು ಮತ್ತು ದಾಖಲಿಸುವುದನ್ನು ಅಂಗೀಕರಿಸಬಹುದು.

ವಿವರಣೆ :– ಈ ಪ್ರಕರಣದ ಉದ್ದೇಶಕ್ಕಾಗಿ "ಮತದಾನ ಯಂತ್ರ" ಎಂದರೆ ಮತಗಳನ್ನು ನೀಡಲು ಅಥವಾ ದಾಖಲಿಸಲು ಎಲೆಕ್ಟ್ರಾನಿಕ್ ಚಾಲಿತ ಅಥವಾ ಇತರೆ ರೀತಿಯಲ್ಲಿ ಉಪಯೋಗಿಸುವ ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರ ಕುರಿತ ಯಾವುದೇ ಉಲ್ಲೇಖವನ್ನು ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತದಾನ ಯಂತ್ರವನ್ನು ಉಪಯೋಗಿಸಿದಲ್ಲೆಲ್ಲ ಅಂಥ ಮತದಾನ ಯಂತ್ರವನ್ನು ಕುರಿತ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದು.

**62. ಮತ ನೀಡುವ ಹಕ್ಕು :–** (1) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತತ್ಕಾಲದಲ್ಲಿ ನಮೂದಾಗಿರದ ಯಾವನೇ ವ್ಯಕ್ತಿಯು ಆ ಚುನಾವಣಾ ಕ್ಷೇತ್ರದಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕದಲ್ಲ ಮತ್ತು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಉಪಬಂಧಿಸಿರುವ ಹೊರತು, ಹಾಗೆ ನಮೂದಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕದು.

(2) ಯಾವನೇ ವ್ಯಕ್ತಿ ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 16ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟಿದ್ದರೆ, ಅವನು ಯಾವುದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯಲ್ಲಿ ಮತ ನೀಡತಕ್ಕದಲ್ಲ.

(3) ಯಾವನೇ ವ್ಯಕ್ತಿಯು ಸಾರ್ವತ್ರಿಕ ಚುನಾವಣೆಯಲ್ಲಿ ಒಂದೇ ವರ್ಗದ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ಮತ ನೀಡತಕ್ಕುದಲ್ಲ ಮತ್ತು ಒಬ್ಬ ವ್ಯಕ್ತಿಯು ಅಂಥ ಒಂದಕ್ಕಿಂತ ಹೆಚ್ಚಿನ ಚುನಾವಣಾ ಕ್ಷೇತ್ರಗಳಲ್ಲಿ ಮತ ನೀಡಿದರೆ ಅಂಥ ಎಲ್ಲ ಚುನಾವಣಾ ಕ್ಷೇತ್ರಗಳಲ್ಲಿನ ಅವನ ಮತಗಳು ಶೂನ್ಯವಾಗತಕ್ಕುದು.

(4) ಯಾವನೇ ವ್ಯಕ್ತಿಯ ಹೆಸರು ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ನೋಂದಾಯಿತವಾಗಿರಬಹುದಾದಾಗ್ಯೂ ಅವನು ಯಾವುದೇ ಚುನಾವಣೆಯಲ್ಲಿ ಅದೇ ಚುನಾವಣಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಸಲ ಮತ ನೀಡತಕ್ಕುದಲ್ಲ ಮತ್ತು ಅವನು ಹಾಗೆ ಮತ ನೀಡಿದ್ದೇ ಆದರೆ ಆ ಕ್ಷೇತ್ರದಲ್ಲಿನ ಅವನ ಎಲ್ಲಾ ಮತಗಳು ಶೂನ್ಯವಾಗತಕ್ಕುದು.

(5) ಯಾವನೇ ವ್ಯಕ್ತಿಯು ಕಾರಾವಾಸದ ಅಥವಾ ಗಡಿಪಾರು ಶಿಕ್ಷೆಯ ಮೇರೆಗೆ ಅಥವಾ ಅನ್ಯಥಾ ಕಾರಾಗೃಹದಲ್ಲಿ ಬಂಧಿತನಾಗಿದ್ದರೆ ಅಥವಾ ಪೊಲೀಸರ ಕಾನೂನು ಸಮ್ಮತ ಅಭಿರಕ್ಷೆಯಲ್ಲಿದ್ದರೆ ಅವನು ಯಾವುದೇ ಚುನಾವಣೆಯಲ್ಲಿ ಮತ ನೀಡತಕ್ಕುದಲ್ಲ :

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ವ್ಯಕ್ತಿಗೆ ಅನ್ವಯವಾಗತಕ್ಕುದಲ್ಲ.

(6) (3) ಮತ್ತು (4)ನೇ ಉಪಪ್ರಕರಣಗಳಲ್ಲಿರುವುದು ಯಾವುದೂ, ಈ ಅಧಿನಿಯಮದ ಅಡಿಯಲ್ಲಿ ಒಬ್ಬ ಮತದಾರನಿಗೆ ಪ್ರತಿನಿಧಿ ಮತವೆಂದು ಮತನೀಡುವಷ್ಟು ಮಟ್ಟಿಗೆ ಅಂಥ ಮತದಾರನಿಗಾಗಿ ಪ್ರತಿನಿಧಿ ಮತವೆಂದು ಮತ ಚಲಾಯಿಸಲು ಅಧಿಕೃತನಾದ ಒಬ್ಬ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**63.** (ನಿರಸನಗೊಳಿಸಲಾಗಿದೆ).

## ಅಧ್ಯಾಯ - V

## ಮತಗಳ ಎಣಿಕೆ

**64. ಮತಗಳ ಎಣಿಕೆ :-** ಮತದಾನ ನಡೆದಿರುವ ಪ್ರತಿಯೊಂದು ಚುನಾವಣೆಯಲ್ಲಿ ಚುನಾವಣಾಧಿಕಾರಿಯ ಮೂಲಕ, ಅಥವಾ ಅವನ ಮೇಲ್ವಿಚಾರಣೆ ಮತ್ತು ನಿರ್ದೇಶನದ ಮೇರೆಗೆ ಮತಗಳನ್ನು ಎಣಿಕೆ ಮಾಡತಕ್ಕುದು, ಮತ್ತು ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿ, ಅವನ ಚುನಾವಣಾ ಏಜೆಂಟ್ ಮತ್ತು ಅವನ ಎಣಿಕೆ ಏಜೆಂಟರು ಎಣಿಕೆ ಸಮಯದಲ್ಲಿ ಹಾಜರಿರುವ ಹಕ್ಕನ್ನು ಹೊಂದಿರತಕ್ಕುದು.

**64ಎ. ಎಣಿಕೆ ಸಮಯದಲ್ಲಿ ಮತಪತ್ರಗಳ ನಾಶ, ನಷ್ಟ, ಇತ್ಯಾದಿ :-** (1) ಮತಪತ್ರಗಳ ಎಣಿಕೆಯು ಪೂರ್ಣಗೊಳ್ಳುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳದಲ್ಲಿ ಉಪಯೋಗಿಸಿದ ಯಾವುವೇ ಮತಪತ್ರಗಳನ್ನು ಚುನಾವಣಾಧಿಕಾರಿಯ ಅಭಿರಕ್ಷೆಯಿಂದ ಕಾನೂನು ಬಾಹಿರವಾಗಿ ಹೊರಕ್ಕೆ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಗೊಳಿಸಿದರೆ ಅಥವಾ ನಷ್ಟಗೊಳಿಸಿದರೆ ಅಥವಾ ಆ ಮತದಾನ ಕೇಂದ್ರದಲ್ಲಿನ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಷ್ಟು ಹಾನಿಗೊಳಿಸಿದರೆ ಅಥವಾ ಅದರೊಂದಿಗೆ ಹಸ್ತಕ್ಷೇಪ ಮಾಡಿದರೆ ಚುನಾವಣಾಧಿಕಾರಿಯು ಆ ವಿಷಯವನ್ನು ತಕ್ಷಣವೇ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕುದು.

(2) ಆ ತರುವಾಯ, ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು,-

(ಎ) ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ನಿರ್ದೇಶಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕುದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಅಧಿಸೂಚಿಸತಕ್ಕುದು ; ಅಥವಾ

(ಬಿ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಹೊಸ ಮತದಾನದ ಫಲಿತಾಂಶವು ಯಾವುದೇ ರೀತಿಯಲ್ಲಿ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವುದಿಲ್ಲವೆಂದು ಅದಕ್ಕೆ ಮನದಟ್ಟಾದರೆ, ಮತಗಳ ಎಣಿಕೆಯ ಪುನರಾರಂಭ ಮತ್ತು ಪೂರ್ಣಗೊಳಿಸುವುದಕ್ಕಾಗಿ ಮತ್ತು ಯಾವ ಚುನಾವಣೆಗೆ ಸಂಬಂಧಿಸಿದಂತೆ ಮತಗಳನ್ನು ಎಣಿಕೆ ಮಾಡಲಾಗಿದೆಯೋ ಆ ಚುನಾವಣೆಯನ್ನು ಮುಂದುವರಿಸುವುದಕ್ಕಾಗಿ ಮತ್ತು ಪೂರ್ಣಗೊಳಿಸುವುದಕ್ಕಾಗಿ ಅದು ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಚುನಾವಣಾಧಿಕಾರಿಗೆ ನೀಡತಕ್ಕುದು.

(3) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಅಥವಾ ಆದೇಶಗಳ ಉಪಬಂಧಗಳು ಮೂಲ ಮತದಾನಕ್ಕೆ ಅನ್ವಯಿಸುವಂತೆ ಪ್ರತಿ ಹೊಸ ಮತದಾನಕ್ಕೆ ಅನ್ವಯವಾಗತಕ್ಕುದು.

**65. ಸಮಾನ ಮತಗಳು :-** ಮತಗಳ ಎಣಿಕೆಯು ಪೂರ್ಣಗೊಂಡ ತರುವಾಯ ಯಾರೇ ಅಭ್ಯರ್ಥಿಗಳ ನಡುವೆ ಮತಗಳು ಸಮಾನವಿರುವುದಾಗಿ ಕಂಡುಬಂದರೆ, ಮತ್ತು ಒಂದು ಮತದ ಸೇರ್ಪಡೆಯಿಂದ ಆ ಅಭ್ಯರ್ಥಿಗಳ ಪೈಕಿ ಯಾವನಾದರೂ ಚುನಾಯಿತನೆಂದು ಘೋಷಿತನಾಗಲು ಹಕ್ಕುಳ್ಳವನಾಗುವುದಾದರೆ ಚುನಾವಣಾ ಅಧಿಕಾರಿಯು, ಆ ಅಭ್ಯರ್ಥಿಗಳ ನಡುವೆ ಚೀಟಿ ಎತ್ತುವುದರ ಮೂಲಕ ಫಲಿತಾಂಶವನ್ನು ತಕ್ಷಣವೇ ನಿರ್ಧರಿಸತಕ್ಕುದು, ಮತ್ತು ಚೀಟಿ ಯಾವ ಅಭ್ಯರ್ಥಿಯ ಪರ ಬರುವುದೋ ಆ ಅಭ್ಯರ್ಥಿಯು ಒಂದು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಮುಂದುವರೆಯತಕ್ಕುದು.

**66. ಫಲಿತಾಂಶಗಳ ಘೋಷಣೆ :-** ಮತಗಳ ಎಣಿಕೆಯು ಪೂರ್ಣಗೊಂಡಾಗ ಚುನಾವಣಾ ಅಧಿಕಾರಿಯು, ಚುನಾವಣಾ ಆಯೋಗದಿಂದ ತದ್ವಿರುದ್ಧವಾದ ಯಾವುದೇ ನಿರ್ದೇಶನ ಇಲ್ಲದಿರುವಲ್ಲಿ, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿರುವ ನಿಯಮಗಳ ಮೂಲಕ ಉಪಬಂಧಿತವಾಗಿರುವ ರೀತಿಯಲ್ಲಿ ಚುನಾವಣೆಯ ಫಲಿತಾಂಶವನ್ನು ತಕ್ಷಣವೇ ಘೋಷಿಸತಕ್ಕುದು.

**67. ಫಲಿತಾಂಶದ ವರದಿ :-** ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ ಆದಷ್ಟು ಬೇಗನೆ, ಚುನಾವಣಾಧಿಕಾರಿಯು ಸಮುಚಿತ ಪ್ರಾಧಿಕಾರ ಮತ್ತು ಚುನಾವಣಾ ಆಯೋಗಕ್ಕೆ ಮತ್ತು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದ ಚುನಾವಣೆಯ ಸಂದರ್ಭದಲ್ಲಿ ಆ ಸದನದ ಕಾರ್ಯದರ್ಶಿಗೆ ಸಹ ಫಲಿತಾಂಶವನ್ನು ವರದಿ ಮಾಡತಕ್ಕುದು, ಮತ್ತು ಸಮುಚಿತ ಪ್ರಾಧಿಕಾರವು ಚುನಾಯಿತರಾದ ಅಭ್ಯರ್ಥಿಗಳ ಹೆಸರುಗಳನ್ನೊಳಗೊಂಡಿರುವ ಘೋಷಣೆಗಳನ್ನು ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕುದು.

**67ಎ. ಅಭ್ಯರ್ಥಿಯು ಆಯ್ಕೆಯಾದ ದಿನಾಂಕ :-** ಈ ಅಧಿನಿಯಮದ ಉದ್ದೇಶಗಳಿಗಾಗಿ, 53ನೇ ಪ್ರಕರಣದ ಅಥವಾ 66ನೇ ಪ್ರಕರಣದ ಉಪಬಂಧಗಳ ಮೇರೆಗೆ ಚುನಾವಣಾ ಅಧಿಕಾರಿಯು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದನಕ್ಕೆ ಒಬ್ಬ ಅಭ್ಯರ್ಥಿಯು ಆಯ್ಕೆಗೊಂಡಿರುವನೆಂದು ಘೋಷಿಸುವ ದಿನಾಂಕವು ಆ ಅಭ್ಯರ್ಥಿಯು ಆಯ್ಕೆಯಾದ ದಿನಾಂಕವಾಗಿರತಕ್ಕುದು.

## ಅಧ್ಯಾಯ – VI

## ಬಹುಪದೀಯ ಚುನಾವಣೆ

**68. ಸಂಸತ್ತಿನ ಉಭಯ ಸದನಗಳಿಗೆ ಆಯ್ಕೆಯಾದಾಗ ಸ್ಥಾನಗಳನ್ನು ತೆರವು ಮಾಡುವುದು :-** (1) ಲೋಕಸಭೆ ಮತ್ತು ರಾಜ್ಯ ಸಭೆಯ ಎರಡೂ ಸದನಗಳಿಗೆ ಸದಸ್ಯನೆಂದು ಚುನಾಯಿತನಾಗಿರುವ ಮತ್ತು ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರದ ಯಾವನೇ ವ್ಯಕ್ತಿಯು ಲಿಖಿತ ನೋಟೀಸಿಗೆ ಸಹಿ ಹಾಕಿ ಮತ್ತು ಅವನು ಹಾಗೆ ಆಯ್ಕೆಗೊಂಡ ದಿನಾಂಕ ಅಥವಾ ದಿನಾಂಕಗಳ ತರುವಾಯದ ದಿನಾಂಕದಿಂದ ಹತ್ತು ದಿವಸಗಳೊಳಗಾಗಿ ಚುನಾವಣಾ ಆಯೋಗದ ಕಾರ್ಯದರ್ಶಿಗೆ ಅದನ್ನು ಒಪ್ಪಿಸಿ ಅವನು ಆ ಸದನಗಳ ಪೈಕಿ ಯಾವುದರಲ್ಲಿ ಸೇವೆ ಸಲ್ಲಿಸಲು ಇಚ್ಛಿಸುತ್ತಾನೋ ಅದನ್ನು ತಿಳಿಸಬಹುದು, ಮತ್ತು ಆ ತರುವಾಯ ಅವನು ಸೇವೆ ಸಲ್ಲಿಸಲು ಇಚ್ಛಿಸದ ಸದನದಲ್ಲಿನ ಅವನ ಸ್ಥಾನವು ತೆರವಾಗತಕ್ಕುದು.

(2) ಮೇಲೆ ಹೇಳಿದ ಅವಧಿಯೊಳಗಾಗಿ ಹಾಗೆ ತಿಳಿಸಲು ತಪ್ಪಿದಲ್ಲಿ, ರಾಜ್ಯ ಸಭೆಯಲ್ಲಿನ ಅವನ ಸ್ಥಾನವು ಆ ಅವಧಿಯು ಮುಕ್ತಾಯಗೊಂಡ ತರುವಾಯ ತೆರವಾಗತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ನೀಡಿದ ಯಾವುದೇ ನೋಟೀಸು ಅಂತಿಮವಾದುದು ಮತ್ತು ಹಿಂತೆಗೆದುಕೊಳ್ಳಲಿಕ್ಕಾಗದಂತಹುದಾಗಿರತಕ್ಕುದು.

(4) ಈ ಪ್ರಕರಣ ಮತ್ತು 69ನೇ ಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನೆಂದು ಆಯ್ಕೆಗೊಂಡಿರುವ ದಿನಾಂಕವು, ಚುನಾಯಿತ ಸದಸ್ಯನ ಸಂದರ್ಭದಲ್ಲಿ ಅವನು ಚುನಾಯಿತನಾದ ದಿನಾಂಕವು ಮತ್ತು ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ ಭಾರತ ರಾಜಪತ್ರದಲ್ಲಿ ಅವನ ನಾಮನಿರ್ದೇಶನದ ಮೊದಲ ಪ್ರಕಟಣೆ ದಿನಾಂಕವು ಆಗಿರತಕ್ಕುದು.

**69. ಈಗಾಗಲೇ ಒಂದು ಸದನದ ಸದಸ್ಯರಾಗಿರುವ ವ್ಯಕ್ತಿಗಳು ಸಂಸತ್ತಿನ ಇನ್ನೊಂದು ಸದನಕ್ಕೆ ಚುನಾಯಿತರಾದಾಗ ಸ್ಥಾನಗಳನ್ನು ತೆರವು ಮಾಡುವುದು :-** (1) ಈಗಾಗಲೇ ಲೋಕಸಭೆಯ ಸದಸ್ಯನಾಗಿರುವ ಮತ್ತು ಅಂಥ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ಒಬ್ಬ ವ್ಯಕ್ತಿಯು ರಾಜ್ಯ ಸಭೆಯ ಸದಸ್ಯನಾಗಿ ಆಯ್ಕೆಗೊಂಡರೆ ಲೋಕಸಭೆಯಲ್ಲಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಯಾದ ದಿನಾಂಕದಂದು ತೆರವಾಗತಕ್ಕುದು.

(2) ಈಗಾಗಲೇ ರಾಜ್ಯ ಸಭೆಯ ಸದಸ್ಯನಾಗಿರುವ ಮತ್ತು ಅಂಥ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ಒಬ್ಬ ವ್ಯಕ್ತಿಯು ಲೋಕಸಭೆಯ ಸದಸ್ಯನಾಗಿ ಆಯ್ಕೆಯಾದರೆ, ರಾಜ್ಯ ಸಭೆಯಲ್ಲಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಯಾದ ದಿನಾಂಕದಂದು ತೆರವಾಗತಕ್ಕುದು.

**70. ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಎರಡು ಸದನಗಳ ಪೈಕಿ ಯಾವುದೇ ಸದನದಲ್ಲಿನ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಗೊಳ್ಳುವುದು :-** ಒಬ್ಬ

ವ್ಯಕ್ತಿಯು ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಯಾಗಿದ್ದರೆ, ಆಗ ಸಂದರ್ಭಾನುಸಾರ, ಅಧ್ಯಕ್ಷ ಅಥವಾ ಸಭಾಪತಿಗೆ ಅಥವಾ ನಿಯಮಿಸಬಹುದಾದಂಥ ಇತರ ಪ್ರಾಧಿಕಾರ ಅಥವಾ ಅಧಿಕಾರಿಗೆ ತನ್ನ ಹಸ್ತಾಕ್ಷರದೊಡನೆ ಬರೆಯುವ ಮೂಲಕ ಆ ಸ್ಥಾನಗಳ ಪೈಕಿ ಒಂದನ್ನು ಉಳಿದು ಎಲ್ಲವುಗಳಿಗೆ ನಿಯಮಿಸಿದ ಕಾಲದೊಳಗೆ ಅವನು ರಾಜೀನಾಮೆ ನೀಡುವ ಹೊರತು, ಎಲ್ಲ ಸ್ಥಾನಗಳು ತೆರವಾಗತಕ್ಕುದು.

## ಅಧ್ಯಾಯ - VII

## ಚುನಾವಣಾ ಫಲಿತಾಂಶಗಳು ಮತ್ತು ನಾಮನಿರ್ದೇಶನಗಳ ಪ್ರಕಟಣೆ

**71. ರಾಜ್ಯಸಭೆಯ ಚುನಾವಣೆಗಳ ಫಲಿತಾಂಶಗಳು ಮತ್ತು ರಾಷ್ಟ್ರಪತಿಯು ನಾಮನಿರ್ದೇಶನ ಮಾಡಿದ ವ್ಯಕ್ತಿಗಳ ಹೆಸರುಗಳ ಪ್ರಕಟಣೆ :–** 12ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳಿಗೆ ಅನುಸಾರವಾಗಿ ಯಾವುದೇ ವರ್ಷದಲ್ಲಿ ಚುನಾವಣೆಗಳನ್ನು ನಡೆಸಿದ ತರುವಾಯ ಸದರಿ ಚುನಾವಣೆಗಳಲ್ಲಿ ರಾಜ್ಯ ವಿಧಾನ ಸಭೆಗಳ ಚುನಾಯಿತ ಸದಸ್ಯರು ಮತ್ತು ವಿವಿಧ ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿನ ಚುನಾಯಕ ಗಣಗಳ ಸದಸ್ಯರು ಚುನಾಯಿಸಿರುವ ಸದಸ್ಯರ ಹೆಸರುಗಳನ್ನು 80ನೇ ಅನುಚ್ಛೇದದ (1)ನೇ ಖಂಡದ (ಎ) ಉಪಖಂಡದ ಮೇರೆಗೆ ಅಥವಾ ಯಾವುದೇ ಇತರ ಉಪಬಂಧಗಳ ಮೇರೆಗೆ ರಾಷ್ಟ್ರಪತಿಯು ರಾಜ್ಯ ಸಭೆಗೆ ನಾಮನಿರ್ದೇಶನ ಮಾಡಿರುವ ಯಾರೇ ವ್ಯಕ್ತಿಗಳ ಹೆಸರುಗಳೊಂದಿಗೆ ರಾಜಪತ್ರದಲ್ಲಿ ಸಮುಚಿತ ಪ್ರಾಧಿಕಾರವು ಅಧಿಸೂಚಿಸತಕ್ಕುದು.

**72.** (ನಿರಸನಗೊಳಿಸಲಾಗಿದೆ).

**73. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಸಾರ್ವತ್ರಿಕ ಚುನಾವಣಾ ಫಲಿತಾಂಶಗಳ ಪ್ರಕಟಣೆ :–** ಹೊಸ ಲೋಕಸಭೆ ಅಥವಾ ಹೊಸ ರಾಜ್ಯ ವಿಧಾನಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಗಳು ನಡೆದಿರುವಲ್ಲಿ (30ನೇ ಪ್ರಕರಣದ (ಡಿ) ಖಂಡದ ಮೇರೆಗೆ ಮೂಲತಃ ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕಾಗಿ ಮತದಾನವು ನಡೆಯದೇ ಇರತಕ್ಕಂಥ ಅಥವಾ 153ನೇ ಪ್ರಕರಣದ ಉಪಬಂಧಗಳ ಮೇರೆಗೆ ಚುನಾವಣೆ ಪೂರ್ಣಗೊಳಿಸುವ ಕಾಲವನ್ನು ವಿಸ್ತರಿಸಲಾಗಿರುವಂಥ ಚುನಾವಣಾ ಕ್ಷೇತ್ರಗಳನ್ನು ಹೊರತುಪಡಿಸಿ) ಇತರ ಎಲ್ಲ ಚುನಾವಣಾ ಕ್ಷೇತ್ರಗಳಲ್ಲಿನ ಚುನಾವಣಾ ಫಲಿತಾಂಶಗಳನ್ನು ಚುನಾವಣಾಧಿಕಾರಿಯು ಸಂದರ್ಭಾನುಸಾರ 53ನೇ ಪ್ರಕರಣ ಅಥವಾ 66ನೇ ಪ್ರಕರಣದ ಉಪಬಂಧಗಳ ಮೇರೆಗೆ ಘೋಷಿಸಿದ ತರುವಾಯ ಚುನಾವಣಾ ಆಯೋಗವು ಸಾಧ್ಯವಾದಷ್ಟು ಬೇಗನೆ ರಾಜಪತ್ರದಲ್ಲಿ ಆ ಚುನಾವಣಾ ಕ್ಷೇತ್ರಗಳಿಗಾಗಿ ಚುನಾಯಿತರಾಗಿರುವ ಸದಸ್ಯರ ಹೆಸರುಗಳನ್ನು ಅಧಿಸೂಚಿಸತಕ್ಕುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಆ ಲೋಕ ಸಭೆ ಅಥವಾ ವಿಧಾನಸಭೆಯನ್ನು ಕ್ರಮಬದ್ಧವಾಗಿ ರಚಿಸಲಾಗಿದೆ ಎಂದು ಭಾವಿಸತಕ್ಕುದು :

ಪರಂತು, ಅಂಥ ಅಧಿಸೂಚನೆಯ ಹೊರಡಿಸುವಿಕೆಯು –

(ಎ) (i) 30ನೇ ಪ್ರಕರಣದ (ಡಿ) ಖಂಡದ ಮೇರೆಗೆ ಮೂಲತಃ ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕಾಗಿ ಮತದಾನವು ನಡೆಯದಿರತಕ್ಕಂಥ ಯಾವುದೇ ಸಂಸದೀಯ ಅಥವಾ ವಿಧಾನಸಭೆಯ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ಮತದಾನ ನಡೆಸುವುದನ್ನು ಮತ್ತು ಚುನಾವಣೆ ಪೂರ್ಣಗೊಳಿಸುವುದನ್ನು ; ಅಥವಾ

(ii) 153ನೇ ಪ್ರಕರಣದ ಉಪಬಂಧಗಳ ಮೇರೆಗೆ ಕಾಲವನ್ನು ವಿಸ್ತರಿಸಿದ ಯಾವುದೇ ಸಂಸದೀಯ ಅಥವಾ ವಿಧಾನ ಸಭೆ ಚುನಾವಣಾ ಕ್ಷೇತ್ರ ಅಥವಾ ಚುನಾವಣಾ ಕ್ಷೇತ್ರಗಳಲ್ಲಿನ ಚುನಾವಣೆ ಪೂರ್ಣಗೊಳ್ಳುವುದನ್ನು

– ಪ್ರತಿವಾರಿಸುವುದಾಗಿ ; ಅಥವಾ

(ಬಿ) ಸದರಿ ಅಧಿಸೂಚನೆಯನ್ನು ಹೊರಡಿಸುವ ನಿಕಟ ಪೂರ್ವದಲ್ಲಿ ಕಾರ್ಯನಿರ್ವಹಿಸುವ ಲೋಕಸಭೆ ಅಥವಾ ರಾಜ್ಯ ವಿಧಾನ ಸಭೆ, ಯಾವುದಾದರೂ ಇದ್ದರೆ ಅದರ ಅವಧಿಯ ಮೇಲೆ ಪರಿಣಾಮ ಬೀರುವುದಾಗಿ

– ಭಾವಿಸತಕ್ಕುದಲ್ಲ.

**73ಎ. ಕೆಲವು ಚುನಾವಣೆಗಳ ಬಗ್ಗೆ ವಿಶೇಷ ಉಪಬಂಧ :–** 73ನೇ ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಇದ್ದಾಗ್ಯೂ, ಒಂಬತ್ತನೇ ಲೋಕಸಭೆಯನ್ನು ವಿಘಟಿಸಿದ ತರುವಾಯ ಹೊಸ ಲೋಕಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ,–

(ಎ) 73ನೇ ಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿನ ಸಂಸದೀಯ ಚುನಾವಣಾ ಕ್ಷೇತ್ರಗಳನ್ನು ಗಣನೆಗೆ ತೆಗೆದುಕೊಳ್ಳದೆ ಹೊರಡಿಸಬಹುದು ; ಮತ್ತು

(ಬಿ) ಚುನಾವಣಾ ಆಯೋಗವು, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿನ ಸಂಸದೀಯ ಚುನಾವಣಾ ಕ್ಷೇತ್ರಗಳಿಂದ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಮತ್ತು ಅದು ಸಮುಚಿತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ದಿನಾಂಕಗಳಂದು ಕ್ರಮಗಳನ್ನು ಕೈಗೊಳ್ಳಬಹುದು.

**74. ರಾಜ್ಯ ವಿಧಾನಪರಿಷತ್ತುಗಳ ಚುನಾವಣೆಗಳ ಫಲಿತಾಂಶಗಳನ್ನು ಮತ್ತು ಅಂಥ ಪರಿಷತ್ತುಗಳಿಗೆ ನಾಮನಿರ್ದೇಶಿತರಾದ ವ್ಯಕ್ತಿಗಳ ಹೆಸರುಗಳನ್ನು ಪ್ರಕಟಿಸುವುದು :-** 15ಎ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಗನುಸಾರವಾಗಿ ಅಥವಾ 16ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಗಳಿಗನುಸಾರವಾಗಿ ಯಾವುದೇ ವರ್ಷದಲ್ಲಿ ನಡೆದ ಚುನಾವಣೆಗಳ ತರುವಾಯ ಸದರಿ ಚುನಾವಣೆಗಳಲ್ಲಿ ಪರಿಷತ್ತಿನ ವಿವಿಧ ಚುನಾವಣಾ ಕ್ಷೇತ್ರಗಳಿಗಾಗಿ ಆಯ್ಕೆಯಾದ ಮತ್ತು ರಾಜ್ಯ ವಿಧಾನ ಸಭೆಯ ಸದಸ್ಯರಿಂದ ಆಯ್ಕೆಯಾದ ಸದಸ್ಯರ ಹೆಸರುಗಳನ್ನು, 171ನೇ ಅನುಚ್ಛೇದದ (3)ನೇ ಖಂಡದ (ಇ) ಉಪಖಂಡದ ಮೇರೆಗೆ ರಾಜ್ಯಪಾಲನು ನಾಮನಿರ್ದೇಶನ ಮಾಡಿರುವ ಯಾರೇ ವ್ಯಕ್ತಿಗಳ ಹೆಸರುಗಳೊಂದಿಗೆ ಸಮುಚಿತ ಪ್ರಾಧಿಕಾರವು ರಾಜಪತ್ರದಲ್ಲಿ ಅಧಿಸೂಚಿಸತಕ್ಕುದು.

## ಅಧ್ಯಾಯ - VIIಎ

## ಆಸ್ತಿಗಳ ಮತ್ತು ಹೊಣೆಗಳ ಘೋಷಣೆ

**75ಎ. ಆಸ್ತಿಗಳ ಮತ್ತು ಹೊಣೆಗಳ ಘೋಷಣೆ :-** (1) ಸಂಸತ್ತಿನ ಒಂದು ಸದನಕ್ಕೆ ಚುನಾಯಿತನಾದ ಪ್ರತಿಯೊಬ್ಬ ಅಭ್ಯರ್ಥಿಯು, ಲೋಕಸಭೆಯ ಉಭಯ ಸದನಗಳಲ್ಲಿ ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಳ್ಳುವುದಕ್ಕಾಗಿ ಸಂವಿಧಾನದ ಮೂರನೆಯ ಅನುಸೂಚಿಯಲ್ಲಿ ಈ ಉದ್ದೇಶಕ್ಕಾಗಿ ನಿರೂಪಿಸಿರುವ ನಮೂನೆಗೆ ಅನುಸಾರವಾಗಿ ಅವನು ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ಸಹಿ ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಈ ಕೆಳಕಂಡವುಗಳಿಗೆ ಸಂಬಂಧಿಸಿ ಮಾಹಿತಿಯನ್ನು ರಾಜ್ಯ ಸಭೆಯ ಅಧ್ಯಕ್ಷರಿಗೆ ಅಥವಾ ಸಂದರ್ಭಾನುಸಾರ ಲೋಕಸಭೆಯ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು,-

(i) ಅವನಾಗಲಿ, ಅವನ ಪತ್ನಿಯಾಗಲಿ ಮತ್ತು ಅವನ ಅವಲಂಬಿತ ಮಕ್ಕಳಾಗಲಿ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಮಾಲೀಕರಾಗಿ ಅಥವಾ ಫಲಾನುಭವಿಗಳಾಗಿ ಹೊಂದಿರುವ ಚರ ಮತ್ತು ಸ್ಥಿರ ಸ್ವತ್ತು;

(ii) ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆಗೆ ಸಂಬಂಧಿಸಿದ ಅವನ ಹೊಣೆಗಾರಿಕೆಗಳು; ಮತ್ತು

(iii) ಕೇಂದ್ರ ಸರ್ಕಾರಕ್ಕೆ, ಅಥವಾ ರಾಜ್ಯ ಸರ್ಕಾರಕ್ಕೆ ಅವನ ಹೊಣೆಗಳು.

(2) (1)ನೇ ಉಪಪ್ರಕರಣದ ಮೇರೆಗಿನ ಮಾಹಿತಿಯನ್ನು (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿಯಮಿಸಿಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒದಗಿಸತಕ್ಕದ್ದು.

(3) ರಾಜ್ಯ ಸಭಾಧ್ಯಕ್ಷರಾಗಲಿ ಅಥವಾ ಸಂದರ್ಭಾನುಸಾರ ಲೋಕ ಸಭಾಧ್ಯಕ್ಷರಾಗಲಿ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸಭಾಧ್ಯಕ್ಷರು ಅಥವಾ ಲೋಕ ಸಭಾಧ್ಯಕ್ಷರು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ಸಭೆಯ ಮುಂದೆ ಅಥವಾ ಸಂದರ್ಭಾನುಸಾರ ಲೋಕ ಸಭೆಯ ಮುಂದೆ ಅದು ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು 30 ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು 30 ದಿನಗಳ ಸದರಿ ಅವಧಿಯು ಮುಕ್ತಾಯವಾದ ತರುವಾಯ, ರಾಜ್ಯ ಸಭೆಯು ಅಥವಾ ಲೋಕ ಸಭೆಯು ಆ ನಿಯಮದಲ್ಲಿ ಯಾವುವೇ ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಆದಷ್ಟು ಬೇಗನೆ ಅನುಮೋದಿಸಿದ ಅಥವಾ ಅನುಮೋದಿಸಿರದ ಹೊರತು ಹಾಗೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ಹಾಗೆ ಆ ನಿಯಮಗಳನ್ನು ಅನುಮೋದಿಸಿರುವಲ್ಲಿ, ಅವುಗಳನ್ನು ಹೇಗೆ ಮಂಡಿಸಲಾಗಿತ್ತೋ ಹಾಗೆ ಅಥವಾ ಸಂದರ್ಭಾನುಸಾರ, ಮಾರ್ಪಾಟಾದಂಥ ರೂಪದಲ್ಲಿ ಹಾಗೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ನಿಯಮಗಳನ್ನು ಅನುಮೋದಿಸಿರದಿದ್ದರೆ ಪರಿಣಾಮಕಾರಿಯಾಗತಕ್ಕದ್ದಲ್ಲ.

(5) ರಾಜ್ಯಸಭೆಯ ಅಧ್ಯಕ್ಷರು ಅಥವಾ ಸಂದರ್ಭಾನುಸಾರ, ಲೋಕಸಭೆಯ ಅಧ್ಯಕ್ಷರು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಲೋಕಸಭೆಯ ಚುನಾಯಿತ ಅಭ್ಯರ್ಥಿಯು (3)ನೆಯ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವ ಸಂದರ್ಭದಲ್ಲಿ ಅದನ್ನು, ರಾಜ್ಯಸಭೆಯ ಅಥವಾ ಸಂದರ್ಭಾನುಸಾರ, ಲೋಕಸಭೆಯ ವಿಶೇಷ ಅಧಿಕಾರದ ಉಲ್ಲಂಘನೆಯ ಸಂಬಂಧ ವ್ಯವಹರಿಸುವ ರೀತಿಯಲ್ಲಿಯೇ ವ್ಯವಹರಿಸಬಹುದೆಂದು ನಿರ್ದೇಶಿಸಬಹುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(i) "ಸ್ಥಿರ ಸ್ವತ್ತು" ಎಂದರೆ ಜಮೀನು ಮತ್ತು ಅಂಥ ಜಮೀನಿಗೆ ಹೊಂದಿಕೊಂಡಿರುವಂಥ ಅಥವಾ ಶಾಶ್ವತವಾಗಿ ಜೋಡಿಸಿದ ಯಾವುದೇ ಕಟ್ಟಡ ಅಥವಾ ಇತರೆ ನಿರ್ಮಾಣವೂ ಒಳಗೊಳ್ಳುತ್ತದೆ;

(ii) "ಚರ ಸ್ವತ್ತು" ಎಂದರೆ ಸ್ಥಿರ ಸ್ವತ್ತು ಆಗಿರದ ಯಾವುದೇ ಇತರೆ ಸ್ವತ್ತು ಮತ್ತು ಪ್ರತಿಯೊಂದು ಮೂರ್ತ ಮತ್ತು ಅಮೂರ್ತ ಸ್ವತ್ತುಗಳೂ ಸೇರುತ್ತವೆ;

(iii) "ಸಾರ್ವಜನಿಕ ಹಣಕಾಸು ಸಂಸ್ಥೆ" ಎಂದರೆ ಕಂಪನಿಗಳ ಅಧಿನಿಯಮ, 1956 (1956ರ 1)ರ 4ಎ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಸಾರ್ವಜನಿಕ ಹಣಕಾಸು ಸಂಸ್ಥೆ ಮತ್ತು ಬ್ಯಾಂಕು ಒಳಗೊಳ್ಳುತ್ತದೆ;

(iv) (iii)ನೇ ಖಂಡದಲ್ಲಿ ಉಲ್ಲೇಖಿಸಿದ "ಬ್ಯಾಂಕು" ಎಂದರೆ,-

(ಎ) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (1955ರ 23)ರ 3ನೇ ಪ್ರಕರಣದ ಮೇರೆಗೆ ರಚಿತವಾದ ಭಾರತೀಯ ಸ್ಟೇಟ್ ಬ್ಯಾಂಕು;

(ಬಿ) ಸಹವರ್ತಿ ಬ್ಯಾಂಕ್ ಇದು, ಭಾರತೀಯ ಸ್ಟೇಟ್ ಬ್ಯಾಂಕ್ (ಸಹವರ್ತಿ ಬ್ಯಾಂಕುಗಳು) ಅಧಿನಿಯಮ, 1959 (1959ರ 38)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಗೊತ್ತುಪಡಿಸಿರುವಂಥ ಅರ್ಥವನ್ನೇ ಹೊಂದಿರುತ್ತದೆ;

(ಸಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮ, 1976 (1976ರ 21)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕು;

(ಡಿ) ಸಂವಾದಿ ಹೊಸ ಬ್ಯಾಂಕು, ಇದು ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10)ರ 5ನೇ ಪ್ರಕರಣದ (ಡಿಎ) ಖಂಡದಲ್ಲಿ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರುವಂಥ ಬ್ಯಾಂಕು; ಮತ್ತು

(ಇ) ಸಹಕಾರಿ ಬ್ಯಾಂಕು, ಇದು ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949ರ ಆ ಅಧಿನಿಯಮದ 56ನೇ ಪ್ರಕರಣದ (ಸಿ) ಖಂಡದ (i)ನೇ ಉಪಖಂಡದ ಮೂಲಕ ಮಾರ್ಪಡಿಸಲಾದಂತೆ ಆ ಅಧಿನಿಯಮದ 5ನೇ ಪ್ರಕರಣದ (ಸಿಸಿಐ) ಖಂಡದಲ್ಲಿ ಗೊತ್ತುಪಡಿಸಿರುವ ಅರ್ಥವನ್ನೆ ಹೊಂದಿರುವಂಥ ಬ್ಯಾಂಕು; ಮತ್ತು

(v) "ಅವಲಂಬಿತ ಮಕ್ಕಳು" ಎಂದರೆ ಪ್ರತ್ಯೇಕ ಸಂಪಾದನೆಯಿಲ್ಲದ ಮತ್ತು ತಮ್ಮ ಜೀವನೋಪಾಯಕ್ಕಾಗಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಚುನಾಯಿತ ಅಭ್ಯರ್ಥಿಯ ಮೇಲೆಯೇ ಸಂಪೂರ್ಣವಾಗಿ ಅವಲಂಬಿತರಾಗಿರುವ ಪುತ್ರರು ಮತ್ತು ಪುತ್ರಿಯರು.

## ಅಧ್ಯಾಯ – VIII

## ಚುನಾವಣಾ ವೆಚ್ಚಗಳು

**76. ಅಧ್ಯಾಯದ ಅನ್ವಯ :-** ಈ ಅಧ್ಯಾಯವು ಲೋಕಸಭೆಯ ಮತ್ತು ರಾಜ್ಯ ವಿಧಾನ ಸಭೆಯ ಚುನಾವಣೆಗಳಿಗೆ ಮಾತ್ರ ಅನ್ವಯವಾಗತಕ್ಕುದು.

**77. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳು ಮತ್ತು ಅದರ ಪರಮಾವಧಿ :-** (1) ಪ್ರತಿಯೊಬ್ಬ ಚುನಾವಣಾ ಅಭ್ಯರ್ಥಿಯು, ಸ್ವತಃ ಅಥವಾ ತನ್ನ ಚುನಾವಣಾ ಏಜೆಂಟನ ಮೂಲಕ ಅವನನ್ನು ನಾಮನಿರ್ದೇಶನ ಮಾಡಲಾಗಿರುವ ದಿನಾಂಕ ಮತ್ತು ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕ, ಇವೆರಡೂ ದಿನಾಂಕಗಳೂ ಸೇರಿದಂತೆ ಈ ನಡುವಿನ ಅವಧಿಯಲ್ಲಿ ಅಥವಾ ಚುನಾವಣೆಯ ಸಂಬಂಧದಲ್ಲಿ ಅವನು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿರುವ ಅಥವಾ ಅಧಿಕೃತಗೊಳಿಸಿರುವ ಎಲ್ಲಾ ವೆಚ್ಚದ ಬಗ್ಗೆ ಪ್ರತ್ಯೇಕ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕುದು.

ವಿವರಣೆ 1:- ಸಂದೇಹಗಳ ನಿವಾರಣೆಗಾಗಿ,-

(ಎ) ರಾಜಕೀಯ ಪಕ್ಷದ ಕಾರ್ಯಕ್ರಮದ ಪ್ರಚಾರಕ್ಕಾಗಿ ರಾಜಕೀಯ ಪಕ್ಷದ ಮುಖಂಡರು ವಿಮಾನದ ಮೂಲಕ ಅಥವಾ ಯಾವುದೇ ಇತರ ಸಾರಿಗೆ ಸಾಧನಗಳ ಮೂಲಕ ಕೈಗೊಂಡ ಪ್ರಯಾಣಕ್ಕೆ ಭರಿಸಿದ ವೆಚ್ಚವನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಆ ರಾಜಕೀಯ ಪಕ್ಷದ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಚುನಾವಣೆಯ ಸಂಬಂಧದಲ್ಲಿ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ;

(ಬಿ) ಸರ್ಕಾರದ ಸೇವೆಯಲ್ಲಿರುವ ಮತ್ತು 123ನೇ ಪ್ರಕರಣದ (7) ಖಂಡದಲ್ಲಿ ನಮೂದಿಸಿರುವ ಯಾವುದೇ ವರ್ಗಕ್ಕೆ ಸೇರಿದ ಯಾರೇ ವ್ಯಕ್ತಿಯು, ಆ ಖಂಡದ ಪರಂತುಕದಲ್ಲಿ ನಮೂದಿಸಿರುವಂತೆ ತನ್ನ ಪದೀಯ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಥವಾ ನಿರ್ವಹಿಸುವನೆಂದು ತಾತ್ಪರ್ಯವಾಗುವಲ್ಲಿ, ಮಾಡಿದ ಯಾವುವೇ ಏರ್ಪಾಟುಗಳು, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಇತರ ಯಾವುದೇ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿರುವ ಯಾವುದೇ ವೆಚ್ಚವು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಆ ಚುನಾವಣೆಯ ಸಂಬಂಧದಲ್ಲಿ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ

– ಎಂದು ಈ ಮೂಲಕ ಘೋಷಿಸಲಾಗಿದೆ.

ವಿವರಣೆ 2:– ವಿವರಣೆ–1ರ (ಎ) ಖಂಡದ ಉದ್ದೇಶಗಳಿಗಾಗಿ, ಯಾವುದೇ ಚುನಾವಣೆಯ ಸಂಬಂಧದಲ್ಲಿ, "ರಾಜಕೀಯ ಪಕ್ಷದ ಮುಖಂಡರು" ಎಂಬ ಪದಾವಳಿಗೆ,–

ಈ ಅಧಿನಿಯಮದ ಅಡಿಯಲ್ಲಿ ಭಾರತ ರಾಜಪತ್ರದಲ್ಲಿ ಅಥವಾ ಸಂದರ್ಭಾನುಸಾರ, ರಾಜ್ಯದ ರಾಜಪತ್ರದಲ್ಲಿ ಪ್ರಕಟಗೊಂಡ ಅಂಥ ಚುನಾವಣೆಯ ಅಧಿಸೂಚನೆಯ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ, ಅಂಥ ಚುನಾವಣೆಯ ಉದ್ದೇಶಗಳಿಗಾಗಿ ಮುಖಂಡರೆಂಬುದಾಗಿ ರಾಜಕೀಯ ಪಕ್ಷವು ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಯಾರ ಹೆಸರುಗಳನ್ನು ತಿಳಿಸಲಾಗಿದೆಯೋ ಅಂಥ ಮುಂದಿನ ವ್ಯಕ್ತಿಗಳು ಎಂದರೆ,–

(i) ಅಂಥ ರಾಜಕೀಯ ಪಕ್ಷವು ಮಾನ್ಯತೆ ಪಡೆದ ರಾಜಕೀಯ ಪಕ್ಷವಾಗಿದ್ದಲ್ಲಿ, ನಲವತ್ತನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು; ಮತ್ತು

(ii) ಅಂಥ ರಾಜಕೀಯ ಪಕ್ಷವು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಹೊರತಾದ ಬೇರೆ ಪಕ್ಷವಾಗಿದ್ದಲ್ಲಿ, ಇಪ್ಪತ್ತನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು

– ಎಂದು ಅರ್ಥ:

ಪರಂತು, ಒಂದು ರಾಜಕೀಯ ಪಕ್ಷವು, (i)ನೇ ಖಂಡದಲ್ಲಿ ಅಥವಾ ಸಂದರ್ಭಾನುಸಾರ, (ii)ನೇ ಖಂಡದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು ಮರಣ ಹೊಂದಿದ ಅಥವಾ ಅಂಥ ರಾಜಕೀಯ ಪಕ್ಷದ ಸದಸ್ಯನಾಗಿರುವುದು ನಿಂತುಹೋದ ಸಂದರ್ಭದಲ್ಲಿ, ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಮತ್ತೊಮ್ಮೆ ತಿಳಿಸುವ ಮೂಲಕ, ಮರಣ ಹೊಂದಿದ ಅಥವಾ ಸದಸ್ಯನಾಗಿರುವುದ ನಿಂತುಹೋದ ಅಂಥ ವ್ಯಕ್ತಿಯ ಹೆಸರಿಗೆ ಬದಲಾಗಿ, ಅವನ ಸ್ಥಾನದಲ್ಲಿ ಹೊಸ ನಾಯಕನನ್ನು ನೇಮಕಮಾಡುವ ಉದ್ದೇಶಗಳಿಗಾಗಿ, ಅಂಥ ಚುನಾವಣೆಯ ಕೊನೆಯ ಮತದಾನವು ಮುಕ್ತಾಯಗೊಳ್ಳುವುದಕ್ಕೆ ನಿಗದಿಪಡಿಸಿದ ಸಮಯದ ಸಮಾಪ್ತಿಯ ನಲವತ್ತೆಂಟು ಗಂಟೆಗಳ ನಿಕಟಪೂರ್ವಕ್ಕೆ ಸಮಾಪ್ತವಾಗುವ ಅವಧಿಯಲ್ಲಿ ಹೊಸ ಹೆಸರನ್ನು ಪ್ರತಿಯೋಜಿಸಬಹುದು.

(2) ಲೆಕ್ಕಪತ್ರವು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕುದು.

(3) ಸದರಿ ವೆಚ್ಚದ ಒಟ್ಟು ಮೊತ್ತವು ನಿಯಮಿಸಬಹುದಾದಂಥ ಮೊಬಲಗನ್ನು ಮೀರತಕ್ಕುದಲ್ಲ.

**78. ಜಿಲ್ಲಾ ಚುನಾವಣಾ ಅಧಿಕಾರಿಯ ಬಳಿ ಲೆಕ್ಕಪತ್ರವನ್ನು ದಾಖಲು ಮಾಡುವುದು :–** (1) ಒಂದು ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾಯಿತ ಅಭ್ಯರ್ಥಿಯ ಆಯ್ಕೆಯ ದಿನಾಂಕದಿಂದ ಅಥವಾ ಆ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚಿಗೆ ಚುನಾಯಿತ ಅಭ್ಯರ್ಥಿಗಳಿದ್ದರೆ ಮತ್ತು ಅವರ ಆಯ್ಕೆಯ ದಿನಾಂಕಗಳು ಬೇರೆ ಬೇರೆ ಇದ್ದರೆ, ಆ ಎರಡು ದಿನಾಂಕಗಳ ಪೈಕಿ ತರುವಾಯದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅವನ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಜಿಲ್ಲಾ ಚುನಾವಣಾ ಅಧಿಕಾರಿಯ ಬಳಿ ದಾಖಲು ಮಾಡತಕ್ಕದ್ದು ; ಆ ಲೆಕ್ಕಪತ್ರವು 77ನೇ ಪ್ರಕರಣದ ಮೇರೆಗೆ ಅವನು ಅಥವಾ ಅವನ ಚುನಾವಣಾ ಏಜೆಂಟನು ಇಟ್ಟಿರುವ ಲೆಕ್ಕಪತ್ರದ ಯಥಾ ಪ್ರತಿಯಾಗಿರತಕ್ಕುದು.

## ಭಾಗ – Vಎ

## ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಕೆಲವು ಸಾಮಗ್ರಿಗಳ ಉಚಿತ ಸರಬರಾಜು

**78ಎ. ಮತದಾರ ಪಟ್ಟಿಗಳ ಪ್ರತಿಗಳ ಉಚಿತ ಪೂರೈಕೆ :–** (1) ಸರ್ಕಾರವು, ಲೋಕಸಭೆಯನ್ನು ಅಥವಾ ರಾಜ್ಯದ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ನಡೆಸಬೇಕಾದ ಯಾವುದೇ ಚುನಾವಣೆಯಲ್ಲಿ, ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ 43) ಅಡಿಯಲ್ಲಿ ಅಂತಿಮವಾಗಿ ಪ್ರಕಟಗೊಂಡಿರುವಂತೆ, ಅಂಥ ಸಂಖ್ಯೆಯ ಮತದಾರ ಪಟ್ಟಿಯ ಪ್ರತಿಗಳನ್ನು ಮತ್ತು ನಿಯಮಿಸಬಹುದಾದ ಅಂಥ ಇತರ ಸಾಮಗ್ರಿಯನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಉಚಿತವಾಗಿ ಒದಗಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಾಮಗ್ರಿಯನ್ನು,–

(i) 77ನೇ ಪ್ರಕರಣದ ಮೂಲಕ ಅಭ್ಯರ್ಥಿಯು ಭರಿಸಬಹುದಾದ ಗರಿಷ್ಠ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ ವಿಧಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು; ಮತ್ತು

(ii) ಚುನಾವಣಾ ಆಯೋಗವು ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗನುಸಾರವಾಗಿ ಕಾರ್ಯನಿರ್ವಹಿಸತಕ್ಕ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳ ಮೂಲಕ

- ಒದಗಿಸತಕ್ಕದ್ದು.

**78ಬಿ. ಅಭ್ಯರ್ಥಿಗಳಿಗೆ ಕೆಲವು ಬಾಬುಗಳನ್ನು ಒದಗಿಸುವುದು, ಇತ್ಯಾದಿ :-** (1) ಚುನಾವಣಾ ಆಯೋಗವು, ಲೋಕಸಭೆಯನ್ನು ಅಥವಾ ಒಂದು ರಾಜ್ಯದ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ಚುನಾವಣೆಯನ್ನು ಸಾರಿದ ಅಧಿಸೂಚನೆಯು ಪ್ರಕಟವಾದ ದಿನಾಂಕದ ಮತ್ತು ಮತದಾನವು ನಡೆಯುವ ದಿನಾಂಕದ ನಡುವಿನ ಯಾವುದೇ ಸಮಯದಲ್ಲಿ ಸಂಬಂಧಪಟ್ಟ ಚುನಾವಣಾ ಕ್ಷೇತ್ರದ ಮತದಾರರಿಗೆ ಅಥವಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ನಿಲ್ಲಿಸಿದ ಅಭ್ಯರ್ಥಿಗಳಿಗೆ, ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ, ಆದೇಶದ ಮೂಲಕ ನಿರ್ಧರಿಸಬಹುದಾದಂಥ ಬಾಬುಗಳನ್ನು ಒದಗಿಸತಕ್ಕದ್ದು ಅಥವಾ ಒದಗಿಸುವಂತೆ ಮಾಡತಕ್ಕದ್ದು.

(2) ಚುನಾವಣಾ ಆಯೋಗವು (1)ನೇ ಉಪಪ್ರಕರಣದ ಅಡಿಯಲ್ಲಿ ಅಭ್ಯರ್ಥಿಗಳಿಗೆ ಬಾಬುಗಳನ್ನು ಒದಗಿಸಿರುವಲ್ಲಿ, ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ, 77ನೇ ಪ್ರಕರಣದ ಅಡಿಯಲ್ಲಿ ಅಭ್ಯರ್ಥಿಯು ಭರಿಸಬಹುದಾದ ಗರಿಷ್ಠ ವೆಚ್ಚವನ್ನು ಕಡಿಮೆ ಮಾಡುವ ಸಂಬಂಧದಲ್ಲಿ ಷರತ್ತುಗಳನ್ನು ವಿಧಿಸಬಹುದು.

ವಿವರಣೆ:- 39ಎ ಪ್ರಕರಣದ ಉದ್ದೇಶಕ್ಕಾಗಿ, ಈ ಅಧ್ಯಾಯದ ಮತ್ತು 169ನೇ ಪ್ರಕರಣದ (2)ನೇ ಉಪಪ್ರಕರಣದ (ಹೆಚ್‌ಹೆಚ್) ಖಂಡದ ಉದ್ದೇಶಗಳಿಗಾಗಿ, "ಮಾನ್ಯತೆ ಪಡೆದ ರಾಜಕೀಯ ಪಕ್ಷ" ಎಂಬ ಪದಾವಳಿಯು, ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968 ರಲ್ಲಿ ಅದಕ್ಕೆ ಗೊತ್ತುಪಡಿಸಿದ ಅರ್ಥವನ್ನೇ ಹೊಂದಿರುವುದು.

## ಭಾಗ - VI

## ಚುನಾವಣೆಗಳಿಗೆ ಸಂಬಂಧಿಸಿದ ವಿವಾದಗಳು

## ಅಧ್ಯಾಯ - I

## ಅರ್ಥ ವಿವರಣೆ

**79. ಪರಿಭಾಷೆಗಳು :-** ಈ ಭಾಗದಲ್ಲಿ ಮತ್ತು VIIನೇ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಉಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಅಥವಾ ನ್ಯಾಯಾಧೀಶನನ್ನು ಕುರಿತ ಯಾವುದೇ ಉಲ್ಲೇಖವನ್ನು ನ್ಯಾಯಿಕ ಕಮೀಷನರನ ನ್ಯಾಯಾಲಯ ಇರುವ ಒಂದು ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಸಂದರ್ಭಾನುಸಾರ ನ್ಯಾಯಿಕ ಕಮೀಷನರ್‌ನ ಸದರಿ ನ್ಯಾಯಾಲಯ ಅಥವಾ ನ್ಯಾಯಿಕ ಕಮೀಷನರ್ ಅಥವಾ ಯಾವನೇ ಅಡಿಷನಲ್ ನ್ಯಾಯಿಕ ಕಮೀಷನರ್‌ನನ್ನು ಕುರಿತ ಉಲ್ಲೇಖವೆಂದು ಅರ್ಥೈಸತಕ್ಕುದು ;

(ಬಿ) "ಅಭ್ಯರ್ಥಿ" ಎಂದರೆ ಯಾವುದೇ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿ ನಾಮ ನಿರ್ದೇಶಿತನಾಗಿರುವ ಅಥವಾ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿರುವುದಾಗಿ ಕ್ಲೇಮು ಮಾಡುವ ಒಬ್ಬ ವ್ಯಕ್ತಿ ;

(ಸಿ) "ಖರ್ಚುಗಳು" ಎಂದರೆ, ಚುನಾವಣಾ ಅರ್ಜಿಯ ಅಧಿವಿಚಾರಣೆಯ ಅಥವಾ ಅದಕ್ಕೆ ಪ್ರಾಸಂಗಿಕವಾದ ಎಲ್ಲಾ ಖರ್ಚುಗಳು, ಚಾರ್ಜುಗಳು ಮತ್ತು ವೆಚ್ಚಗಳು ;

(ಡಿ) "ಚುನಾವಣಾ ಹಕ್ಕು" ಎಂದರೆ, ಒಬ್ಬ ವ್ಯಕ್ತಿಯು ಒಂದು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿ ಸ್ಪರ್ಧಿಸುವುದಕ್ಕೆ ಅಥವಾ ಸ್ಪರ್ಧಿಸದಿರುವ, ಅಥವಾ ಒಬ್ಬ ಅಭ್ಯರ್ಥಿಯಾಗಿರುವುದನ್ನು ವಾಪಸ್ಸು ತೆಗೆದುಕೊಳ್ಳುವ ಅಥವಾ ವಾಪಸ್ಸು ತೆಗೆದುಕೊಳ್ಳದಿರುವ ಅಥವಾ ಮತ ನೀಡುವ ಅಥವಾ ನೀಡದಿರುವ ಅವನ ಹಕ್ಕು ;

(ಇ) "ಉಚ್ಚ ನ್ಯಾಯಾಲಯ" ಎಂದರೆ, ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಚುನಾವಣಾ ಅರ್ಜಿಗೆ ಸಂಬಂಧಿಸಿದ ಚುನಾವಣೆಯನ್ನು ನಡೆಸಲಾಗಿದೆಯೋ ಆ ನ್ಯಾಯಾಲಯ ;

(ಎಫ್) "ಚುನಾಯಿತ ಅಭ್ಯರ್ಥಿ" ಎಂದರೆ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು 67ನೇ ಪ್ರಕರಣದ ಮೇರೆಗೆ ಯಾವ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಲಾಗಿದೆಯೋ ಆ ಅಭ್ಯರ್ಥಿ.

## ಅಧ್ಯಾಯ – II

## ಉಚ್ಚ ನ್ಯಾಯಾಲಯಕ್ಕೆ ಚುನಾವಣಾ ಅರ್ಜಿಗಳನ್ನು ಸಲ್ಲಿಸುವುದು

**80. ಚುನಾವಣಾ ಅರ್ಜಿಗಳು :-** ಈ ಭಾಗದ ಉಪಬಂಧಗಳಿಗನುಸಾರವಾಗಿ ಸಲ್ಲಿಸಿದ ಚುನಾವಣಾ ಅರ್ಜಿಯ ಮೂಲಕವಾಗಿ ಹೊರತು ಯಾವ ಚುನಾವಣೆಯನ್ನೂ ಪ್ರಶ್ನಿಸತಕ್ಕುದಲ್ಲ.

**80ಎ. ಉಚ್ಚ ನ್ಯಾಯಾಲಯವು ಚುನಾವಣಾ ಅರ್ಜಿಗಳನ್ನು ಅಧಿವಿಚಾರಣೆ ಮಾಡುವುದು : –** (1) ಚುನಾವಣಾ ಅರ್ಜಿಯನ್ನು ಅಧಿ ವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯವು ಉಚ್ಚ ನ್ಯಾಯಾಲಯವಾಗಿರತಕ್ಕುದು.

(2) ಅಂಥ ಅಧಿಕಾರ ವ್ಯಾಪ್ತಿಯನ್ನು ಸಾಮಾನ್ಯವಾಗಿ ಉಚ್ಚ ನ್ಯಾಯಾಲಯದ ಒಬ್ಬನೇ ನ್ಯಾಯಾಧೀಶನು ಚಲಾಯಿಸತಕ್ಕುದು ಮತ್ತು ಮುಖ್ಯ ನ್ಯಾಯಮೂರ್ತಿಯು ಆಗಿಂದಾಗ್ಗೆ, ಆ ಉದ್ದೇಶಕ್ಕಾಗಿ ಒಬ್ಬ ಅಥವಾ ಹೆಚ್ಚು ನ್ಯಾಯಾಧೀಶನನ್ನು ಗೊತ್ತುಪಡಿಸತಕ್ಕುದು :

ಪರಂತು, ಉಚ್ಚ ನ್ಯಾಯಾಲಯವು ಒಬ್ಬನೇ ನ್ಯಾಯಾಧೀಶನನ್ನು ಒಳಗೊಂಡಿರುವಲ್ಲಿ, ಆ ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲ ಚುನಾವಣಾ ಅರ್ಜಿಗಳನ್ನು ಅವನು ಅಧಿವಿಚಾರಣೆ ಮಾಡತಕ್ಕುದು.

(3) ಉಚ್ಚ ನ್ಯಾಯಾಲಯವು, ತನ್ನ ವಿವೇಚನಾನುಸಾರ ನ್ಯಾಯೋದ್ದೇಶ ಅಥವಾ ಅನುಕೂಲದ ದೃಷ್ಟಿಯಿಂದ ಒಂದು ಚುನಾವಣಾ ಅರ್ಜಿಯ ಅಧಿವಿಚಾರಣೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಉಚ್ಚ ನ್ಯಾಯಾಲಯವು ಇರುವ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ಸಹ ನಡೆಸಬಹುದು.

**81. ಅರ್ಜಿಗಳನ್ನು ಸಲ್ಲಿಸುವುದು :-** (1) ಯಾವುದೇ ಚುನಾವಣೆಯನ್ನು ಪ್ರಶ್ನಿಸುವ ಚುನಾವಣಾ ಅರ್ಜಿಯನ್ನು ಅಂಥ ಚುನಾವಣೆಯಲ್ಲಿನ ಯಾವನೇ ಅಭ್ಯರ್ಥಿಯು ಅಥವಾ ಯಾವನೇ ಮತದಾರನು ಚುನಾಯಿತ ಅಭ್ಯರ್ಥಿಯ ಆಯ್ಕೆಯ ದಿನಾಂಕದಿಂದ, ಆದರೆ ಅದಕ್ಕಿಂತ ಮೊದಲಲ್ಲದೆ, ಅಥವಾ ಆ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚಿಗೆ ಚುನಾಯಿತ ಅಭ್ಯರ್ಥಿಗಳಿದ್ದರೆ ಮತ್ತು ಅವರ ಆಯ್ಕೆಯ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ಎರಡು ದಿನಾಂಕಗಳ ಪೈಕಿ ತರುವಾಯದ ದಿನಾಂಕದಿಂದ 45 ದಿವಸಗಳೊಳಗಾಗಿ, 100ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮತ್ತು 101ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಥವಾ ಹೆಚ್ಚು ಆಧಾರಗಳ ಮೇಲೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬಹುದು.

ವಿವರಣೆ :- ಈ ಉಪಪ್ರಕರಣದಲ್ಲಿ, 'ಮತದಾರ' ಎಂದರೆ ಚುನಾವಣಾ ಅರ್ಜಿಗೆ ಸಂಬಂಧಿಸಿದಂಥ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳವನಾಗಿದ್ದಂಥ ವ್ಯಕ್ತಿ – ಅವನು ಅಂಥ ಚುನಾವಣೆಯಲ್ಲಿ ಮತ ನೀಡಿರಲಿ ಅಥವಾ ನೀಡದಿರಲಿ.

(2) (ಬಿಟ್ಟು ಬಿಡಲಾಗಿದೆ).

(3) ಪ್ರತಿಯೊಂದು ಚುನಾವಣಾ ಅರ್ಜಿಯು, ಅರ್ಜಿಯಲ್ಲಿ ನಮೂದಿಸಿರುವ ಪ್ರತ್ಯರ್ಜಿದಾರರಷ್ಟು ಸಂಖ್ಯೆಯ ಆ ಅರ್ಜಿಯ ಪ್ರತಿಗಳನ್ನೊಳಗೊಂಡಿರತಕ್ಕುದು ಮತ್ತು ಅಂಥ ಪ್ರತಿಯೊಂದು ಪ್ರತಿಯು ಆ ಅರ್ಜಿಯ ಯಥಾ ಪ್ರತಿಯಾಗಿದೆಯೆಂದು ಅದಕ್ಕೆ ತನ್ನ ಸಹಿ ಹಾಕಿ ಅದನ್ನು ಅವನು ಅನುಪ್ರಮಾಣಿಸತಕ್ಕುದು.

**82. ಅರ್ಜಿಯ ಪಕ್ಷಕಾರರು :-** ಒಬ್ಬ ಅರ್ಜಿದಾರನು –

(ಎ) ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಣೆಯನ್ನು ಕ್ಲೇಮು ಮಾಡುವುದರ ಜೊತೆಗೆ ತಾನೇ ಸ್ವತಃ ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆ ಎಂದು ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡುವಲ್ಲಿ, ಆ ಅರ್ಜಿದಾರನನ್ನು ಹೊರತುಪಡಿಸಿ ಇತರ ಎಲ್ಲಾ ಸ್ಪರ್ಧಿಸಿರುವ ಅಭ್ಯರ್ಥಿಗಳನ್ನು ಮತ್ತು ಅಂಥ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡದಿರುವಲ್ಲಿ ಚುನಾಯಿತರಾದ ಎಲ್ಲ ಅಭ್ಯರ್ಥಿಗಳನ್ನು ; ಮತ್ತು

(ಬಿ) ಯಾವ ಅಭ್ಯರ್ಥಿಯ ವಿರುದ್ಧ ಯಾವುದೇ ಭ್ರಷ್ಟಾಚಾರದ ಆಪಾದನೆಗಳನ್ನು ಮಾಡಲಾಗಿದೆಯೋ ಆ ಯಾವನೇ ಇತರ ಅಭ್ಯರ್ಥಿಯನ್ನು

– ತನ್ನ ಅರ್ಜಿಗೆ ಪ್ರತ್ಯರ್ಜಿದಾರರೆಂದು ಸೇರಿಸಿಕೊಳ್ಳತಕ್ಕುದು.

**83. ಅರ್ಜಿಯ ಒಳಾಂಶಗಳು :-** (1) ಚುನಾವಣಾ ಅರ್ಜಿಯು –

(ಎ) ಅರ್ಜಿದಾರನು ಅವಲಂಬಿಸಿರುವ ಮುಖ್ಯ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕುದು ;

(ಬಿ) ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾರೆಂದು ಆಪಾದಿಸಲಾಗಿರುವ ಪಕ್ಷಕಾರರ ಹೆಸರುಗಳು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರ ಮಾಡಿದ ದಿನಾಂಕ ಮತ್ತು ಸ್ಥಳ ಇವುಗಳ ಬಗ್ಗೆ ಸಾಧ್ಯವಾದಷ್ಟು ಪೂರ್ಣ ನಿರೂಪಣೆ ಸೇರಿದಂತೆ ಅರ್ಜಿದಾರನು ಆಪಾದಿಸುವ ಯಾವುದೇ ಅಂಥ ಭ್ರಷ್ಟಾಚಾರದ ಪೂರ್ಣ ವಿವರಗಳನ್ನು ನಮೂದಿಸತಕ್ಕುದು ; ಮತ್ತು

(ಸಿ) ಅರ್ಜಿದಾರನು ಅದಕ್ಕೆ ಸಹಿ ಹಾಕತಕ್ಕುದು ಮತ್ತು ವಾದ ಪ್ರತಿವಾದ ಪತ್ರಗಳ ಸತ್ಯಾಪನೆ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ನಿರೂಪಿಸಿರುವ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕುದು :

ಪರಂತು, ಅರ್ಜಿದಾರನು ಯಾವುದೇ ಭ್ರಷ್ಟಾಚಾರದ ಆಪಾದನೆಯನ್ನು ಮಾಡಿರುವಲ್ಲಿ ಆ ಅರ್ಜಿಯ ಜೊತೆಗೆ ಅಂಥ ಭ್ರಷ್ಟಾಚಾರದ ಆಪಾದನೆ ಮತ್ತು ಅದರ ವಿವರಗಳ ಸಮರ್ಥನೆಗಾಗಿ ನಿಯಮಿಸಿದ ನಮೂನೆಯಲ್ಲಿರುವ ಒಂದು ಶಪಥ ಪತ್ರವು ಇರತಕ್ಕುದು.

(2) ಅರ್ಜಿಯ ಯಾವುದೇ ಅನುಸೂಚಿ ಅಥವಾ ಅನುಬಂಧಕ್ಕೆ ಸಹ ಅರ್ಜಿದಾರನು ಸಹಿ ಹಾಕಿರತಕ್ಕುದು ಮತ್ತು ಅದನ್ನು ಅರ್ಜಿಯಂತೆಯೇ ಅದೇ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕುದು.

**84. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ :-** ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂಬ ಘೋಷಣೆಯನ್ನು ಕ್ಲೇಮು ಮಾಡುವುದರ ಜೊತೆಗೆ ಒಬ್ಬ ಅರ್ಜಿದಾರನು ತಾನೇ ಸ್ವತಃ ಅಥವಾ ಯಾವನೇ ಇತರ ಅಭ್ಯರ್ಥಿ ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆ ಎಂಬ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡಬಹುದು.

**85.** (ನಿರಸನಗೊಳಿಸಲಾಗಿದೆ).

## ಅಧ್ಯಾಯ - III

## ಚುನಾವಣಾ ಅರ್ಜಿಗಳ ಅಧಿವಿಚಾರಣೆ

**86. ಚುನಾವಣಾ ಅರ್ಜಿಗಳ ಅಧಿವಿಚಾರಣೆ :-** (1) ಉಚ್ಚ ನ್ಯಾಯಾಲಯವು, 81ನೇ ಪ್ರಕರಣದ ಅಥವಾ 82ನೇ ಪ್ರಕರಣದ ಅಥವಾ 117ನೇ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವ ಚುನಾವಣಾ ಅರ್ಜಿಯನ್ನು ವಜಾ ಮಾಡತಕ್ಕುದು.

ವಿವರಣೆ :- ಈ ಉಪಪ್ರಕರಣದ ಮೇರೆಗೆ ಚುನಾವಣಾ ಅರ್ಜಿಯನ್ನು ವಜಾ ಮಾಡುವ ಉಚ್ಚ ನ್ಯಾಯಾಲಯದ ಆದೇಶವು 98ನೇ ಪ್ರಕರಣದ (ಎ) ಖಂಡದ ಮೇರೆಗೆ ಮಾಡಿದ ಆದೇಶವಾಗಿರುವುದೆಂದು ಭಾವಿಸತಕ್ಕುದು.

(2) ಚುನಾವಣಾ ಅರ್ಜಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ತರುವಾಯ ಆದಷ್ಟು ಬೇಗನೆ 80ಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಚುನಾವಣಾ ಅರ್ಜಿಗಳ ಅಧಿವಿಚಾರಣೆಗಾಗಿ ಮುಖ್ಯ ನ್ಯಾಯಾಧೀಶನು ಗೊತ್ತುಪಡಿಸಿರುವ ನ್ಯಾಯಾಧೀಶನಿಗೆ ಅಥವಾ ನ್ಯಾಯಾಧೀಶರಲ್ಲಿ ಒಬ್ಬನಿಗೆ ಅದನ್ನು ಕಳಿಸಿಕೊಡತಕ್ಕುದು.

(3) ಒಂದೇ ಚುನಾವಣೆಯ ಸಂಬಂಧದಲ್ಲಿ ಉಚ್ಚ ನ್ಯಾಯಾಲಯಕ್ಕೆ ಒಂದಕ್ಕಿಂತ ಹೆಚ್ಚು ಚುನಾವಣಾ ಅರ್ಜಿಗಳನ್ನು ಸಲ್ಲಿಸಿರುವಲ್ಲಿ, ಅವೆಲ್ಲವುಗಳನ್ನು ಒಬ್ಬನೇ ನ್ಯಾಯಾಧೀಶನಿಗೆ ಕಳುಹಿಸತಕ್ಕುದು, ಅವನು ತನ್ನ ವಿವೇಚನೆಯ ಮೇರೆಗೆ ಅವುಗಳನ್ನು ಪ್ರತ್ಯೇಕವಾಗಿ ಅಥವಾ ಒಂದು ಅಥವಾ ಹೆಚ್ಚಿನ ಗುಂಪುಗಳಲ್ಲಿ ಅಧಿವಿಚಾರಣೆ ಮಾಡಬಹುದು.

(4) ಈಗಾಗಲೇ ಪ್ರತ್ಯರ್ಜಿದಾರನಾಗಿರದ ಯಾವನೇ ಅಭ್ಯರ್ಥಿಯು ಅಧಿವಿಚಾರಣೆಯು ಪ್ರಾರಂಭವಾದ ದಿನಾಂಕದಿಂದ 14 ದಿವಸಗಳೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ಉಚ್ಚ ನ್ಯಾಯಾಲಯವು ಖರ್ಚುಗಳಿಗಾಗಿ ಭದ್ರತೆ ಬಗ್ಗೆ ಮಾಡಬಹುದಾದ ಯಾವುದೇ ಆದೇಶಕ್ಕೆ ಒಳಪಟ್ಟು, ಪ್ರತ್ಯರ್ಜಿದಾರನೆಂದು ಸೇರಿಕೊಳ್ಳುವುದಕ್ಕೆ ಹಕ್ಕುಳ್ಳವನಾಗಿರತಕ್ಕುದು.

ವಿವರಣೆ :- ಈ ಉಪ ಪ್ರಕರಣದ ಮತ್ತು 97ನೇ ಪ್ರಕರಣದ ಉದ್ದೇಶಗಳಿಗಾಗಿ ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಅರ್ಜಿಯಲ್ಲಿ ಮಾಡಲಾದ ಕ್ಲೇಮು ಅಥವಾ ಕ್ಲೇಮುಗಳಿಗೆ ಉತ್ತರಿಸಲು ಪ್ರತ್ಯರ್ಜಿದಾರರಿಗಾಗಿ ನಿಗದಿಪಡಿಸಿದ ದಿನಾಂಕದಂದು ಅರ್ಜಿಯ ಅಧಿವಿಚಾರಣೆಯು ಪ್ರಾರಂಭವಾಗುವುದೆಂದು ಭಾವಿಸತಕ್ಕುದು.

(5) ಉಚ್ಚ ನ್ಯಾಯಾಲಯವು ಖರ್ಚುಗಳ ಬಗ್ಗೆ ಮತ್ತು ಅನ್ಯಥಾ ಅದು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ಅರ್ಜಿಯ ನ್ಯಾಯಸಮ್ಮತ ಮತ್ತು ಪರಿಣಾಮಕಾರಿ ಅಧಿವಿಚಾರಣೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಅದರ ಅಭಿಪ್ರಾಯದಲ್ಲಿ ಅವಶ್ಯವಾಗಬಹುದಾದಂಥ ರೀತಿಯಲ್ಲಿ ಅರ್ಜಿಯಲ್ಲಿ ಆಪಾದಿಸಿರುವ ಯಾವುದೇ ಭ್ರಷ್ಟಾಚಾರದ ವಿವರಗಳನ್ನು ತಿದ್ದುಪಡಿ ಮಾಡಲು ಅಥವಾ ವಿಷದೀಕರಿಸಲು ಅನುಮತಿಸಬಹುದು, ಆದರೆ ಆ ಅರ್ಜಿಯಲ್ಲಿ ಈ ಹಿಂದೆ ಆಪಾದಿಸಿರದ ಯಾವುದೇ ಭ್ರಷ್ಟಾಚಾರದ ವಿವರಗಳನ್ನು ಸೇರಿಸುವ ಪರಿಣಾಮವುಳ್ಳಂಥ ಅರ್ಜಿಯ ಯಾವುದೇ ತಿದ್ದುಪಡಿಯನ್ನು ಅನುಮತಿಸತಕ್ಕುದಲ್ಲ.

(6) ಚುನಾವಣಾ ಅರ್ಜಿಯ ಅಧಿವಿಚಾರಣೆಯನ್ನು ಆ ಅಧಿವಿಚಾರಣೆಯ ಸಂಬಂಧದಲ್ಲಿ ನ್ಯಾಯೋದ್ದೇಶಗಳಿಗೆ ಸಂಗತವಾದ ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಉಚ್ಚ ನ್ಯಾಯಾಲಯವು ಕಾರಣಗಳನ್ನು ದಾಖಲಿಸಿ ಆ ಅಧಿವಿಚಾರಣೆಯನ್ನು

ಮುಂದಿನ ದಿನದ ಆಚೆಗೆ ಮುಂದೂಡುವುದು ಅವಶ್ಯವೆಂದು ನ್ಯಾಯಾಲಯಕ್ಕೆ ಕಂಡುಬರುವ ಹೊರತು, ಅದು ಪೂರ್ಣಗೊಳ್ಳುವವರೆಗೆ ಪ್ರತಿ ದಿನ ಮುಂದುವರಿಸತಕ್ಕುದು.

(7) ಪ್ರತಿಯೊಂದು ಚುನಾವಣಾ ಅರ್ಜಿಯನ್ನು ಸಾಧ್ಯವಾದಷ್ಟು ಬೇಗ ಅಧಿವಿಚಾರಣೆ ಮಾಡತಕ್ಕುದು ಮತ್ತು ಚುನಾವಣಾ ಅರ್ಜಿಯನ್ನು ಅಧಿವಿಚಾರಣೆಗಾಗಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಆ ಅಧಿವಿಚಾರಣೆಯನ್ನು ಮುಕ್ತಾಯ ಮಾಡಲು ಪ್ರಯತ್ನಿಸತಕ್ಕುದು.

**87. ಉಚ್ಚ ನ್ಯಾಯಾಲಯದಲ್ಲಿ ಪ್ರಕ್ರಿಯೆ :-** (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ಚುನಾವಣಾ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಗಳ ಅಧಿವಿಚಾರಣೆಗೆ ಅನ್ವಯವಾಗುವ ಪ್ರಕ್ರಿಯೆಗೆ ಅನುಸಾರವಾಗಿ ಆದಷ್ಟು ಮಟ್ಟಿಗೆ ಉಚ್ಚ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕುದು :

ಪರಂತು, ಅರ್ಜಿಯ ತೀರ್ಮಾನಕ್ಕಾಗಿ ಯಾವನೇ ಸಾಕ್ಷಿದಾರನ ಅಥವಾ ಸಾಕ್ಷಿದಾರರ ಸಾಕ್ಷ್ಯವು ಮುಖ್ಯವಲ್ಲವೆಂದು ಅಥವಾ ಅಂಥ ಸಾಕ್ಷಿದಾರ ಅಥವಾ ಸಾಕ್ಷಿದಾರರನ್ನು ಕರೆದಿರುವ ಪಕ್ಷಕಾರನು ಕ್ಷುಲ್ಲಕ ಆಧಾರಗಳ ಮೇಲೆ ಅಥವಾ ವ್ಯವಹರಣೆಗಳನ್ನು ವಿಳಂಬಗೊಳಿಸುವ ದೃಷ್ಟಿಯಿಂದ ಹಾಗೆ ಮಾಡುತ್ತಿದ್ದಾನೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಬರವಣಿಗೆಯಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಂಥ ಸಾಕ್ಷಿದಾರ ಅಥವಾ ಸಾಕ್ಷಿದಾರರನ್ನು ಪರೀಕ್ಷಿಸಲು ನಿರಾಕರಿಸುವ ವಿವೇಚನಾಧಿಕಾರವನ್ನು ಹೊಂದಿರತಕ್ಕುದು.

(2) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚುನಾವಣಾ ಅರ್ಜಿಯ ಅಧಿವಿಚಾರಣೆಗೆ ಎಲ್ಲ ವಿಧದಲ್ಲಿಯೂ ಅನ್ವಯವಾಗುತ್ತದೆಂದು ಭಾವಿಸತಕ್ಕುದು.

**88-92.** (ನಿರಸಿತ).

**93. ದಸ್ತಾವೇಜೀಯ ಸಾಕ್ಷ್ಯ :-** ಯಾವುದೇ ಅಧಿನಿಯಮಿತಿಯಲ್ಲಿ ತದ್ವಿರುದ್ಧವಾದುದು ಏನೇ ಇದ್ದಾಗ್ಯೂ, ಯಾವುದೇ ದಸ್ತಾವೇಜಿಗೆ ಕ್ರಮಬದ್ಧವಾಗಿ ಸ್ಟಾಂಪು ಅಂಟಿಸಿಲ್ಲವೆಂಬ ಅಥವಾ ಅದನ್ನು ನೋಂದಾಯಿಸಿಲ್ಲವೆಂಬ ಆಧಾರದ ಮೇಲೆ ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿನ ಸಾಕ್ಷ್ಯದಲ್ಲಿ ಅದು ಅಂಗೀಕಾರಾರ್ಹವಾಗದೇ ಇರತಕ್ಕುದಲ್ಲ.

**94. ಮತದಾನದ ರಹಸ್ಯವನ್ನು ಉಲ್ಲಂಘಿಸದಿರುವುದು :-** ಯಾವನೇ ಸಾಕ್ಷಿದಾರನು ಅಥವಾ ಇತರ ವ್ಯಕ್ತಿಯು, ಚುನಾವಣೆಯಲ್ಲಿ ಅವನು ಯಾರ ಪರವಾಗಿ ಮತದಾನ ಮಾಡಿದ್ದಾನೆ ಎಂದು ಹೇಳಲು ಅವನನ್ನು ಅಗತ್ಯಪಡಿಸತಕ್ಕುದಲ್ಲ:

ಪರಂತು, ಈ ಪ್ರಕರಣವು ಮುಕ್ತ ಮತದಾನದ ಮೂಲಕ ಮತ ಚಲಾಯಿಸಿದ ಅಂಥ ಸಾಕ್ಷಿದಾರನಿಗೆ ಅಥವಾ ಇತರ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**95. ಅಪರಾಧದಲ್ಲಿ ಸಿಕ್ಕಿಸುವ ಪ್ರಶ್ನೆಗಳನ್ನು ಉತ್ತರಿಸುವುದು ಮತ್ತು ನಷ್ಟಭರ್ತಿ ಪ್ರಮಾಣ ಪತ್ರ :-** (1) ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿ ವಾದಗ್ರಸ್ತವಾದ ವಿಷಯಕ್ಕೆ ಸುಸಂಬದ್ಧವಾದ ಯಾವುದೇ ವಿಷಯದ ಬಗೆಗಿನ ಯಾವುದೇ ಪ್ರಶ್ನೆಯ ಉತ್ತರವು ಯಾವನೇ ಸಾಕ್ಷಿದಾರನನ್ನು ಅಪರಾಧದಲ್ಲಿ ಸಿಕ್ಕಿಸಬಹುದು ಅಥವಾ ಅವನನ್ನು ಅಪರಾಧದಲ್ಲಿ ಸಿಕ್ಕಿಸಲು ಪ್ರವೃತ್ತವಾಗಬಹುದೆಂಬ ಅಥವಾ ಯಾವುದೇ ದಂಡ ಅಥವಾ ಮುಟ್ಟುಗೋಲಿಗೆ ಅವನನ್ನು ಗುರಿಪಡಿಸಬಹುದು ಅಥವಾ ಗುರಿಪಡಿಸಲು ಪ್ರವೃತ್ತವಾಗಬಹುದೆಂಬ ಆಧಾರದ ಮೇಲೆ ಅಂಥ ಯಾವುದೇ ಪ್ರಶ್ನೆಗೆ ಉತ್ತರ ಕೊಡದಿರಲು ಆ ಸಾಕ್ಷಿದಾರನಿಗೆ ವಿನಾಯಿತಿ ಇರತಕ್ಕುದಲ್ಲ :

ಪರಂತು,-

(ಎ) ಯಾವ ಪ್ರಶ್ನೆಗಳನ್ನು ಉತ್ತರಿಸಲು ಸಾಕ್ಷಿದಾರನನ್ನು ಅಗತ್ಯಪಡಿಸಲಾಗಿದೆಯೋ ಆ ಎಲ್ಲ ಪ್ರಶ್ನೆಗಳನ್ನು ಸರಿಯಾಗಿ ಉತ್ತರಿಸುವ ಸಾಕ್ಷಿದಾರನು ಉಚ್ಚ ನ್ಯಾಯಾಲಯದಿಂದ ನಷ್ಟಭರ್ತಿ ಪ್ರಮಾಣ ಪತ್ರವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕುದು ; ಮತ್ತು

(ಬಿ) ಉಚ್ಚ ನ್ಯಾಯಾಲಯವು ಕೇಳುವ ಅಥವಾ ಅದರ ಮುಂದೆ ಕೇಳಲಾದ ಪ್ರಶ್ನೆಗೆ ಸಾಕ್ಷಿದಾರನು ಕೊಟ್ಟಿರುವ ಉತ್ತರವು, ಈ ಸಾಕ್ಷ್ಯಕ್ಕೆ ಸಂಬಂಧಪಟ್ಟಂತೆ ಸುಳ್ಳು ಸಾಕ್ಷ್ಯಕ್ಕಾಗಿ ಯಾವುದೇ ಕ್ರಿಮಿನಲ್ ವ್ಯವಹರಣೆಯ ಸಂದರ್ಭದಲ್ಲಿ ಹೊರತು,

- ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ಅವನ ವಿರುದ್ಧ ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾಗತಕ್ಕುದಲ್ಲ.

(2) ಯಾವನೇ ಸಾಕ್ಷಿದಾರನಿಗೆ ನಷ್ಟ ಭರ್ತಿ ಪ್ರಮಾಣ ಪತ್ರವನ್ನು ನೀಡಿರುವಾಗ, ಅವನು ಆ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಹೇಳಿಕೊಳ್ಳಬಹುದು ಮತ್ತು ಭಾರತ ದಂಡ ಸಂಹಿತೆ (1860ರ 45)ರ IX ಎ ಅಧ್ಯಾಯದ ಅಥವಾ ಈ ಅಧಿನಿಯಮದ VII ನೆಯ ಭಾಗದ ಮೇರೆಗೆ, ಅಂಥ ಪ್ರಮಾಣ ಪತ್ರವು ಸಂಬಂಧಪಡುವಂಥ ವಿಷಯದಿಂದ ಉದ್ಭವಿಸುವ ಯಾವುದೇ ಆರೋಪಣೆಗೆ ಅಥವಾ ಆರೋಪಣೆ ಮೇಲೆ ಅದು ಪೂರ್ಣ ಮತ್ತು ಸಮಗ್ರ ಪ್ರತಿರಕ್ಷೆಯಾಗಿರತಕ್ಕುದು, ಆದರೆ ಈ ಅಧಿನಿಯಮ ಅಥವಾ

ಯಾವುದೇ ಇತರೆ ಕಾನೂನಿನ ಮೂಲಕ ವಿಧಿಸಲಾದ ಚುನಾವಣಾ ಸಂಬಂಧದ ಯಾವುದೇ ಅನರ್ಹತೆಯಿಂದ ಅದು ಅವನನ್ನು ಮುಕ್ತಗೊಳಿಸುತ್ತದೆಂದು ಭಾವಿಸತಕ್ಕುದಲ್ಲ.

**96. ಸಾಕ್ಷಿದಾರರ ವೆಚ್ಚಗಳು :–** ಸಾಕ್ಷ್ಯವನ್ನು ನೀಡಲು ಹಾಜರಾಗುವ ಯಾವನೇ ವ್ಯಕ್ತಿಯು ವಹಿಸಿದ ಯುಕ್ತ ವೆಚ್ಚಗಳನ್ನು, ಅಂಥ ವ್ಯಕ್ತಿಗೆ ಉಚ್ಚ ನ್ಯಾಯಾಲಯವು ಅನುಮತಿಸಬಹುದು ಮತ್ತು ಉಚ್ಚ ನ್ಯಾಯಾಲಯವು ಅನ್ಯಥಾ ನಿರ್ದೇಶಿಸುವ ಹೊರತು, ಅವುಗಳು ಖರ್ಚುಗಳ ಭಾಗವಾಗಿವೆ ಎಂದು ಭಾವಿಸತಕ್ಕುದು.

**97. ಸ್ಥಾನವನ್ನು ಕ್ಲೇಮು ಮಾಡಿದಾಗ ಪ್ರತ್ಯಾರೋಪ :–** (1) ಚುನಾಯಿತ ಅಭ್ಯರ್ಥಿಯನ್ನು ಹೊರತುಪಡಿಸಿ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂಬ ಘೋಷಣೆಯನ್ನು ಚುನಾವಣಾ ಅರ್ಜಿಯಲ್ಲಿ ಕ್ಲೇಮು ಮಾಡಿದಾಗ, ಅಂಥ ಅಭ್ಯರ್ಥಿಯು ಚುನಾಯಿತ ಅಭ್ಯರ್ಥಿಯಾಗಿದ್ದಿದ್ದರೆ ಮತ್ತು ಅವನ ಆಯ್ಕೆಯನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿದ್ದಾಗಿದ್ದರೆ ಅಂಥ ಅಭ್ಯರ್ಥಿಯ ಆಯ್ಕೆಯು ಶೂನ್ಯವಾಗಬಹುದಾಗಿದ್ದಿತು ಎಂದು ರುಜುವಾತುಪಡಿಸಲು ಚುನಾಯಿತ ಅಭ್ಯರ್ಥಿಯು ಅಥವಾ ಯಾವನೇ ಇತರೆ ಪಕ್ಷಕಾರನು ಸಾಕ್ಷ್ಯವನ್ನು ನೀಡಬಹುದು :

ಪರಂತು, ಚುನಾಯಿತ ಅಭ್ಯರ್ಥಿ ಅಥವಾ ಮೇಲೆ ಹೇಳಿದ ಅಂಥ ಇತರ ಪಕ್ಷಕಾರನು ಅಧಿವಿಚಾರಣೆ ಪ್ರಾರಂಭವಾಗುವ ದಿನಾಂಕದಿಂದ 14 ದಿವಸಗಳೊಳಗಾಗಿ ಅಂಥ ಸಾಕ್ಷ್ಯವನ್ನು ನೀಡುವ ತನ್ನ ಉದ್ದೇಶದ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ನೋಟೀಸನ್ನು ಕೊಟ್ಟ ಹೊರತು ಮತ್ತು ಅನುಕ್ರಮವಾಗಿ 117ನೇ ಪ್ರಕರಣ ಮತ್ತು 118ನೇ ಪ್ರಕರಣಗಳಲ್ಲಿ ಉಲ್ಲೇಖಿಸಿರುವ ಭದ್ರತೆ ಮತ್ತು ಹೆಚ್ಚಿನ ಭದ್ರತೆಯನ್ನು ಸಹ ನೀಡಿರುವ ಹೊರತು ಹಾಗೆ ಮಾಡಲು ಹಕ್ಕುಳ್ಳವನಾಗತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ನೋಟೀಸಿನೊಂದಿಗೆ ಚುನಾವಣಾ ಅರ್ಜಿಯ ಸಂದರ್ಭದಲ್ಲಿ 83ನೇ ಪ್ರಕರಣದ ಮೂಲಕ ಅಗತ್ಯಪಡಿಸಿದ ಹೇಳಿಕೆ ಮತ್ತು ವಿವರಗಳು ಇರತಕ್ಕುದು ಮತ್ತು ಆ ನೋಟೀಸಿಗೆ ಅಗತ್ಯಪಡಿಸಿದ ರೀತಿಯಲ್ಲಿ ಸಹಿ ಹಾಕತಕ್ಕುದು ಮತ್ತು ಅದನ್ನು ಸತ್ಯಾಪನೆ ಮಾಡತಕ್ಕುದು.

**98. ಉಚ್ಚ ನ್ಯಾಯಾಲಯದ ತೀರ್ಮಾನ :–** ಚುನಾವಣಾ ಅರ್ಜಿಯ ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ಉಚ್ಚ ನ್ಯಾಯಾಲಯವು,–

(ಎ) ಚುನಾವಣಾ ಅರ್ಜಿಯನ್ನು ವಜಾ ಮಾಡಿ ; ಅಥವಾ

(ಬಿ) ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಿಸಿ ; ಅಥವಾ

(ಸಿ) ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂದು ಮತ್ತು ಅರ್ಜಿದಾರನು ಅಥವಾ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂದು ಘೋಷಿಸಿ

– ಆದೇಶವನ್ನು ಮಾಡತಕ್ಕುದು.

**99. ಉಚ್ಚ ನ್ಯಾಯಾಲಯವು ಮಾಡಬೇಕಾದ ಇತರೆ ಆದೇಶಗಳು :–** (1) 98ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಕಾಲದಲ್ಲಿ ಉಚ್ಚ ನ್ಯಾಯಾಲಯವು –

(ಎ) ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರವನ್ನು ಮಾಡಲಾಗಿದೆ ಎಂದು ಅರ್ಜಿಯಲ್ಲಿ ಯಾವುದೇ ಆರೋಪವನ್ನು ಮಾಡಿರುವಲ್ಲಿ,–

(i) ಆ ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರ ಮಾಡಿರುವುದನ್ನು ರುಜುವಾತುಪಡಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತೀರ್ಮಾನವನ್ನು, ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು ; ಮತ್ತು

(ii) ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥರೆಂದು ಅಧಿವಿಚಾರಣೆಯಲ್ಲಿ ರುಜುವಾತುಪಡಿಸಲಾಗಿರುವ ವ್ಯಕ್ತಿಗಳು ಯಾರಾದರೂ ಇದ್ದರೆ, ಆ ಎಲ್ಲ ವ್ಯಕ್ತಿಗಳ ಹೆಸರುಗಳು ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು ದಾಖಲಿಸಿ ಸಹ ; ಮತ್ತು

(ಬಿ) ಸಂದಾಯವಾಗಬೇಕಾದ ಖರ್ಚುಗಳ ಒಟ್ಟು ಮೊಬಲಗನ್ನು ನಿಗದಿಪಡಿಸಿ ಮತ್ತು ಯಾವ ವ್ಯಕ್ತಿಗಳು ಮತ್ತು ಯಾರಿಗೆ ಆ ಖರ್ಚುಗಳನ್ನು ಸಂದಾಯ ಮಾಡಬೇಕೋ ಆ ವ್ಯಕ್ತಿಗಳನ್ನು ನಿರ್ದಿಷ್ಟಪಡಿಸಿ ಸಹ

– ಆ ಆದೇಶವನ್ನು ಮಾಡತಕ್ಕುದು :

ಪರಂತು, ಅರ್ಜಿಗೆ ಪಕ್ಷಕಾರನಾಗಿರದ ವ್ಯಕ್ತಿಗೆ –

(ಎ) ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಅವನನ್ನು ಏಕೆ ಹೆಸರಿಸಬಾರದೆಂಬುದಕ್ಕೆ ಕಾರಣವನ್ನು ತೋರಿಸಲು ನೋಟೀಸನ್ನು ಕೊಟ್ಟಿರುವ ಹೊರತು ; ಮತ್ತು

(ಬಿ) ಆ ನೋಟೀಸಿಗನುಸಾರವಾಗಿ ಅವನು ಹಾಜರಾದರೆ, ಉಚ್ಚ ನ್ಯಾಯಾಲಯವು ಈಗಾಗಲೇ ಪರೀಕ್ಷಿಸಿರುವ ಯಾವ ಸಾಕ್ಷಿದಾರನು ತನ್ನ ವಿರುದ್ಧ ಸಾಕ್ಷ್ಯವನ್ನು ಕೊಟ್ಟಿರುವನೋ ಆ ಯಾವನೇ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡಲು ತನ್ನ ಪ್ರತಿರಕ್ಷೆಯಲ್ಲಿ ಸಾಕ್ಷ್ಯವನ್ನು ಕರೆಯಲು ಮತ್ತು ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ನೀಡಿದ ಹೊರತು

– (ಎ) ಖಂಡದ (ii)ನೇ ಉಪಖಂಡದ ಮೇರೆಗಿನ ಆದೇಶದಲ್ಲಿ ಅವನನ್ನು ಹಾಗೆ ಹೆಸರಿಸತಕ್ಕುದಲ್ಲ.

(2) ಈ ಪ್ರಕರಣದಲ್ಲಿ ಮತ್ತು 100ನೇ ಪ್ರಕರಣದಲ್ಲಿ 'ಏಜೆಂಟ್' ಎಂಬ ಪದವು 123ನೇ ಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕುದು.

**100. ಚುನಾವಣೆಯನ್ನು ಶೂನ್ಯವೆಂದು ಘೋಷಿಸಲು ಆಧಾರಗಳು :–** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಉಚ್ಚ ನ್ಯಾಯಾಲಯವು–

(ಎ) ಚುನಾಯಿತ ಅಭ್ಯರ್ಥಿಯು ತನ್ನ ಚುನಾವಣಾ ದಿನಾಂಕದಂದು, ಸಂವಿಧಾನದ ಅಥವಾ ಈ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, 1963 (1963ರ 20)ರ ಮೇರೆಗೆ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹನಾಗಿದ್ದನೆಂದು ; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಅಥವಾ ಚುನಾಯಿತ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರೆ ವ್ಯಕ್ತಿಯು ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾನೆಂದು ;

(ಸಿ) ಯಾವುದೇ ನಾಮನಿರ್ದೇಶನ ಪತ್ರವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆ ಎಂದು ಅಭಿಪ್ರಾಯಪಟ್ಟರೆ ; ಅಥವಾ

(ಡಿ) ಚುನಾವಣೆಯ ಫಲಿತಾಂಶವು, ಚುನಾಯಿತ ಅಭ್ಯರ್ಥಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅದು–

(i) ಯಾವುದೇ ನಾಮನಿರ್ದೇಶನ ಪತ್ರದ ಅನುಚಿತ ಅಂಗೀಕಾರದ ಮೂಲಕ ; ಅಥವಾ

(ii) ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ ಇತರ ಯಾವನೇ ಏಜೆಂಟನು ಚುನಾಯಿತ ಅಭ್ಯರ್ಥಿಯ ಹಿತಾಸಕ್ತಿಯನ್ನು ಮಾಡಿರುವ ಯಾವುದೇ ಭ್ರಷ್ಟಾಚಾರದ ಮೂಲಕ ; ಅಥವಾ

(iii) ಯಾವುದೇ ಮತದ ಅನುಚಿತ ಸ್ವೀಕಾರ, ನಿರಾಕರಣೆ ಅಥವಾ ತಿರಸ್ಕರಣೆಯ ಅಥವಾ ಶೂನ್ಯವಾಗಿರುವ ಯಾವುದೇ ಮತದ ಸ್ವೀಕಾರದ ಮೂಲಕ ; ಅಥವಾ

(iv) ಸಂವಿಧಾನದ ಅಥವಾ ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳು ಅಥವಾ ಆದೇಶಗಳ ಉಪಬಂಧಗಳ ಯಾವುದೇ ಅನನುಪಾಲನೆಯ ಮೂಲಕ ವಸ್ತುತಃ ಬಾಧಿತವಾಗಿದೆ ಎಂದು ಅಭಿಪ್ರಾಯಪಟ್ಟರೆ,

– ಉಚ್ಚ ನ್ಯಾಯಾಲಯವು ಅಂಥ ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಘೋಷಿಸತಕ್ಕುದು.

(2) ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಒಬ್ಬ ಚುನಾಯಿತ ಅಭ್ಯರ್ಥಿಯು ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ ಇತರ ಯಾವನೇ ಏಜೆಂಟನ ಮೂಲಕ ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಆದರೆ ಉಚ್ಚ ನ್ಯಾಯಾಲಯಕ್ಕೆ–

(ಎ) ಆ ಅಭ್ಯರ್ಥಿಯು ಅಥವಾ ಚುನಾವಣಾ ಏಜೆಂಟನು ಚುನಾವಣೆಯಲ್ಲಿ ಯಾವುದೇ ಅಂಥ ಭ್ರಷ್ಟಾಚಾರವನ್ನು ಮಾಡಿಲ್ಲವೆಂದು, ಮತ್ತು ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಆದೇಶಗಳಿಗೆ ವಿರುದ್ಧವಾಗಿ ಮತ್ತು ಅವರ ಸಮ್ಮತಿಯಿಲ್ಲದೆ ಅಂಥ ಪ್ರತಿಯೊಂದು ಭ್ರಷ್ಟಾಚಾರವನ್ನು ಮಾಡಲಾಗಿದೆಯೆಂದು ;

(ಬಿ) (ಲೋಪಿಸಲಾಗಿದೆ).

(ಸಿ) ಚುನಾವಣೆಯಲ್ಲಿ ಭ್ರಷ್ಟಾಚಾರಗಳು ನಡೆಯುವುದನ್ನು ತಡೆಯಲು ಅಭ್ಯರ್ಥಿ ಮತ್ತು ಅವನ ಚುನಾವಣಾ ಏಜೆಂಟನು ಎಲ್ಲ ಯುಕ್ತ ಕ್ರಮಗಳನ್ನು ಕೈಗೊಂಡಿದ್ದರೆಂದು ; ಮತ್ತು

(ಡಿ) ಎಲ್ಲ ಇತರ ವಿಧದಲ್ಲಿಯೂ ಚುನಾವಣೆಯು ಅಭ್ಯರ್ಥಿಯ ಅಥವಾ ಯಾವನೇ ಅವನ ಏಜೆಂಟನ ಕಡೆಯಿಂದ ಯಾವುದೇ ಭ್ರಷ್ಟಾಚಾರದಿಂದ ಮುಕ್ತವಾಗಿತ್ತೆಂದು,

– ಮನವರಿಕೆಯಾದರೆ ಆಗ ಉಚ್ಚ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಆಯ್ಕೆಯು ಶೂನ್ಯವಾಗಿಲ್ಲವೆಂದು ತೀರ್ಮಾನಿಸಬಹುದು.

**101. ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದ ಆಧಾರಗಳು :-** ಅರ್ಜಿಯನ್ನು ಸಲ್ಲಿಸಿರುವ ಯಾವನೇ ವ್ಯಕ್ತಿಯು ಚುನಾಯಿತ ಅಭ್ಯರ್ಥಿಯ ಆಯ್ಕೆಯನ್ನು ಪ್ರಶ್ನಿಸುವುದರ ಜೊತೆಗೆ ತಾನೇ ಸ್ವತಃ ಅಥವಾ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂಬ ಘೋಷಣೆಯನ್ನು ಕ್ಲೇಮು ಮಾಡಿದ್ದರೆ, ಮತ್ತು ಉಚ್ಚ ನ್ಯಾಯಾಲಯವು -

(ಎ) ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ವಾಸ್ತವವಾಗಿ ಸಿಂಧುವಾದ ಅಧಿಕ ಸಂಖ್ಯೆಯ ಮತಗಳನ್ನು ಪಡೆದಿದ್ದನೆಂದು ; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಭ್ರಷ್ಟಾಚಾರದ ಮೂಲಕ ಮತಗಳನ್ನು ಪಡೆದಿರದಿದ್ದರೆ ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಅಧಿಕ ಸಂಖ್ಯೆಯ ಮತಗಳನ್ನು ಪಡೆದುಕೊಳ್ಳಬಹುದಾಗಿದ್ದಿತೆಂದು

- ಅಭಿಪ್ರಾಯಪಟ್ಟರೆ ಉಚ್ಚ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಿಸಿದ ಬಳಿಕ, ಸಂದರ್ಭಾನುಸಾರ ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು, ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂದು ಘೋಷಿಸತಕ್ಕದು.

**102. ಸಮಾನ ಮತಗಳ ಸಂದರ್ಭದಲ್ಲಿ ಪ್ರಕ್ರಿಯೆ :-** ಚುನಾವಣಾ ಅರ್ಜಿಯ ಅಧಿವಿಚಾರಣೆಯ ಕಾಲದಲ್ಲಿ, ಆ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಗಳ ನಡುವೆ ಮತಗಳು ಸಮಾನವಾಗಿವೆಯೆಂದು ಮತ್ತು ಒಂದು ಮತದ ಸೇರ್ಪಡೆಯಿಂದ ಅಭ್ಯರ್ಥಿಗಳ ಪೈಕಿ ಯಾವೊಬ್ಬನು ಚುನಾಯಿತನೆಂದು ಘೋಷಿಸುವುದಕ್ಕೆ ಹಕ್ಕುಳ್ಳವನಾಗಬಹುದೆಂದು ಕಂಡುಬಂದರೆ, ಆಗ-

(ಎ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಚುನಾವಣಾ ಅಧಿಕಾರಿಯು ಮಾಡಿದ ಯಾವುದೇ ತೀರ್ಮಾನವು, ಆ ಅಭ್ಯರ್ಥಿಗಳ ನಡುವಣ ಪ್ರಶ್ನೆಯನ್ನು ನಿರ್ಧರಿಸುವಷ್ಟರ ಮಟ್ಟಿಗೆ, ಅರ್ಜಿಯ ಉದ್ದೇಶಗಳಿಗಾಗಿ ಸಹ ಪರಿಣಾಮಕಾರಿಯಾಗತಕ್ಕದು ; ಮತ್ತು

(ಬಿ) ಅಂಥ ತೀರ್ಮಾನವು ಆ ಪ್ರಶ್ನೆಯನ್ನು ನಿರ್ಧರಿಸದಿರುವಷ್ಟರ ಮಟ್ಟಿಗೆ ಉಚ್ಚ ನ್ಯಾಯಾಲಯವು ಅವರಿಬ್ಬರ ನಡುವಿನ ಪ್ರಶ್ನೆಯನ್ನು ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕದು ಮತ್ತು ಚೀಟಿ ಯಾರ ಪರವಾಗಿ ಬಂದಿದೆಯೋ ಅವನು ಒಂದು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಕ್ರಮವನ್ನು ಜರುಗಿಸತಕ್ಕದು.

**103. ಉಚ್ಚ ನ್ಯಾಯಾಲಯದ ಆದೇಶಗಳನ್ನು ತಿಳಿಸುವುದು :-** ಉಚ್ಚ ನ್ಯಾಯಾಲಯವು, ಚುನಾವಣಾ ಅರ್ಜಿಯ ಅಧಿವಿಚಾರಣೆಯ ಮುಕ್ತಾಯದ ತರುವಾಯ ಆದಷ್ಟು ಬೇಗನೆ, ತೀರ್ಮಾನದ ಸಾರಾಂಶವನ್ನು ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಅಧ್ಯಕ್ಷ ಅಥವಾ ಸಭಾಪತಿಗೆ ತಿಳಿಸತಕ್ಕದು ಮತ್ತು, ಆ ತರುವಾಯ ಆದಷ್ಟು ಬೇಗನೆ ಚುನಾವಣಾ ಆಯೋಗಕ್ಕೆ ಆ ತೀರ್ಮಾನದ ಅಧಿಪ್ರಮಾಣಿತ ಪ್ರತಿಯನ್ನು ಕಳುಹಿಸತಕ್ಕದು.

**104.** (ನಿರಸನಗೊಳಿಸಲಾಗಿದೆ).

**105.** (ನಿರಸನಗೊಳಿಸಲಾಗಿದೆ).

**106. ಸಮುಚಿತ ಪ್ರಾಧಿಕಾರ ಮುಂತಾದವುಗಳಿಗೆ ಆದೇಶದ ರವಾನೆ ಮತ್ತು ಅದರ ಪ್ರಕಟಣೆ :-** 98ನೇ ಪ್ರಕರಣದ ಅಥವಾ 99ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಯಾವುದೇ ಆದೇಶವನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಚುನಾವಣಾ ಆಯೋಗವು ಆ ಆದೇಶದ ಪ್ರತಿಗಳನ್ನು ಸಮುಚಿತ ಪ್ರಾಧಿಕಾರಕ್ಕೆ, ಮತ್ತು ಸಂಸತ್ತಿನ ಸದನದ ಚುನಾವಣೆಗೆ ಅಥವಾ ರಾಜ್ಯದ ವಿಧಾನ ಮಂಡಲದ ಸದನದ ಅಥವಾ ಒಂದು ಸದನದ ಚುನಾವಣೆಗೆ ಸಂಬಂಧಪಡುವಂಥ ಆದೇಶವು ಇರುವ ಸಂದರ್ಭದಲ್ಲಿ ಸಂದರ್ಭಾನುಸಾರ ಸಂಬಂಧಪಟ್ಟ ಸದನದ ಅಧ್ಯಕ್ಷ ಅಥವಾ ಸಭಾಪತಿಗೆ ಸಹ ಕಳುಹಿಸತಕ್ಕದು ಮತ್ತು ಅಂಥ ಆದೇಶವನ್ನು -

(ಎ) ಆ ಆದೇಶವು ಸಂಸತ್ತಿನ ಒಂದು ಸದನದ ಚುನಾವಣೆಗೆ ಸಂಬಂಧಿಸಿರುವಲ್ಲಿ ಭಾರತದ ರಾಜಪತ್ರದಲ್ಲಿ ಹಾಗೂ ಸಂಬಂಧಪಟ್ಟ ರಾಜ್ಯದ ರಾಜಪತ್ರದಲ್ಲಿ ; ಮತ್ತು

(ಬಿ) ಆ ಆದೇಶವು ರಾಜ್ಯ ವಿಧಾನ ಮಂಡಲದ ಸದನದ ಅಥವಾ ಒಂದು ಸದನದ ಚುನಾವಣೆಗೆ ಸಂಬಂಧಿಸಿರುವಲ್ಲಿ ರಾಜ್ಯದ ರಾಜಪತ್ರದಲ್ಲಿ

- ಪ್ರಕಟಿಸುವಂತೆ ಮಾಡತಕ್ಕದು.

**107. ಉಚ್ಚ ನ್ಯಾಯಾಲಯದ ಆದೇಶಗಳ ಜಾರಿ :-** (1) 98ನೇ ಪ್ರಕರಣ ಅಥವಾ 99ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ಆದೇಶದ ಜಾರಿಯ ತಡೆಗೆ ಸಂಬಂಧಿಸಿದಂತೆ IV ಎ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಉಚ್ಚ ನ್ಯಾಯಾಲಯವು ಅಂಥ ಪ್ರತಿಯೊಂದು ಆದೇಶವನ್ನು ನೀಡಿದ ಕೂಡಲೇ ಅದು ಜಾರಿಗೆ ಬರತಕ್ಕದು.

(2) 98ನೇ ಪ್ರಕರಣದ ಮೇರೆಗಿನ ಆದೇಶದ ಮೂಲಕ ಚುನಾಯಿತ ಅಭ್ಯರ್ಥಿಯ ಆಯ್ಕೆಯನ್ನು ಶೂನ್ಯವೆಂದು ಘೋಷಿಸಿರುವಲ್ಲಿ, ಆ ಚುನಾಯಿತ ಅಭ್ಯರ್ಥಿಯು ಆ ಆದೇಶದ ದಿನಾಂಕಕ್ಕೆ ಮುಂಚೆ ಸಂಸತ್ತಿನ ಸದಸ್ಯನಾಗಿ ಅಥವಾ ರಾಜ್ಯದ ವಿಧಾನ

ಮಂಡಲದ ಸದಸ್ಯನಾಗಿ ಭಾಗವಹಿಸಿರುವ ಕಾರ್ಯಗಳು ಮತ್ತು ವ್ಯವಹರಣೆಗಳು ಆ ಆದೇಶದ ಕಾರಣದಿಂದಾಗಿ ಅಸಿಂಧುಗೊಳ್ಳತಕ್ಕುದಲ್ಲ, ಮತ್ತು ಅಂಥ ಅಭ್ಯರ್ಥಿಯನ್ನು ಹಾಗೆ ಭಾಗವಹಿಸಿರುವ ಆಧಾರದ ಮೇಲೆ ಯಾವುದೇ ಹೊಣೆಗಾರಿಕೆ ಅಥವಾ ದಂಡನೆಗೆ ಗುರಿಪಡಿಸತಕ್ಕುದಲ್ಲ.

## ಅಧ್ಯಾಯ – IV

## ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವಿಕೆ ಮತ್ತು ಕೊನೆಗೊಳ್ಳುವಿಕೆ

**108.** (ನಿರಸನಗೊಳಿಸಲಾಗಿದೆ).

**109.** ಚುನಾವಣಾ ಅರ್ಜಿಗಳ ಹಿಂತೆಗೆದುಕೊಳ್ಳುವಿಕೆ :– (1) ಚುನಾವಣಾ ಅರ್ಜಿಯನ್ನು ಉಚ್ಚ ನ್ಯಾಯಾಲಯದ ಅನುಮತಿಯಿಂದ ಮಾತ್ರವೇ ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹಿಂತೆಗೆದುಕೊಳ್ಳುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಆ ಅರ್ಜಿಯ ಸುನಾವಣೆಗಾಗಿ ದಿನಾಂಕವನ್ನು ನಿಗದಿಪಡಿಸಿ ಅದರ ನೋಟೀಸನ್ನು ಆ ಅರ್ಜಿಯ ಎಲ್ಲ ಇತರ ಪಕ್ಷಕಾರರಿಗೆ ಕೊಡತಕ್ಕುದು ಮತ್ತು ಅದನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

**110. ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಪ್ರಕ್ರಿಯೆ :–** (1) ಒಬ್ಬನಿಗಿಂತ ಹೆಚ್ಚು ಅರ್ಜಿದಾರರಿದ್ದರೆ, ಎಲ್ಲ ಅರ್ಜಿದಾರರ ಸಮ್ಮತಿಯಿಂದ ಹೊರತು ಚುನಾವಣಾ ಅರ್ಜಿಯನ್ನು ಹಿಂತೆಗೆದುಕೊಳ್ಳಲು ಯಾವುದೇ ಆವೇದನವನ್ನು ಸಲ್ಲಿಸತಕ್ಕುದಲ್ಲ.

(2) ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಹಿಂತೆಗೆದುಕೊಳ್ಳುವುದಕ್ಕಾಗಿನ ಅಂಥ ಅರ್ಜಿಯು ಅನುಮತಿಸಕೂಡದಂಥ ಯಾವುದೇ ಚೌಕಾಸಿ ಅಥವಾ ಪ್ರತಿಫಲದಿಂದ ಪ್ರೇರೇಪಿತವಾಗಿದ್ದರೆ, ಈ ಅರ್ಜಿಯನ್ನು ಮಂಜೂರು ಮಾಡತಕ್ಕುದಲ್ಲ.

(3) ಅರ್ಜಿಯನ್ನು ಮಂಜೂರು ಮಾಡಿದರೆ –

(ಎ) ಆವರೆಗೆ ವಹಿಸಲಾದ ಪ್ರತ್ಯರ್ಜಿದಾರರ ಖರ್ಚುಗಳನ್ನು ಅಥವಾ ಉಚ್ಚ ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ ಅದರ ಭಾಗವನ್ನು ಸಂದಾಯ ಮಾಡಲು ಅರ್ಜಿದಾರನಿಗೆ ಆದೇಶಿಸತಕ್ಕುದು ;

(ಬಿ) ಉಚ್ಚ ನ್ಯಾಯಾಲಯವು ಹಿಂತೆಗೆದುಕೊಳ್ಳುವಿಕೆಯ ನೋಟೀಸನ್ನು ರಾಜಪತ್ರದಲ್ಲಿ ಮತ್ತು ಅದು ನಿರ್ದಿಷ್ಟಪಡಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸತಕ್ಕುದೆಂದು ನಿರ್ದೇಶಿಸತಕ್ಕುದು ಮತ್ತು ಆಮೇಲೆ ಆ ನೋಟೀಸನ್ನು ತದನುಸಾರವಾಗಿ ಪ್ರಕಟಿಸತಕ್ಕುದು ;

(ಸಿ) ತಾನೇ ಸ್ವತಃ ಅರ್ಜಿದಾರನಾಗಬಹುದಾಗಿದ್ದ ಒಬ್ಬ ವ್ಯಕ್ತಿಯು ಅಂಥ ಪ್ರಕಟಣೆಯ 14 ದಿವಸಗಳೊಳಗಾಗಿ, ಹಿಂತೆಗೆದುಕೊಳ್ಳುವ ಪಕ್ಷಕಾರನ ಸ್ಥಾನದಲ್ಲಿ ಅರ್ಜಿದಾರನೆಂದು ಸೇರಿಸಿಕೊಳ್ಳುವಂತೆ ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಭದ್ರತೆಯ ಬಗ್ಗೆ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಪಾಲಿಸಿದ ತರುವಾಯ ಹಾಗೆ ಸೇರಿಸಿಕೊಳ್ಳಲು ಮತ್ತು ಉಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ಆ ವ್ಯವಹರಣೆಗಳನ್ನು ಮುಂದುವರಿಸಲು ಅವನು ಹಕ್ಕುಳ್ಳವನಾಗಿರತಕ್ಕುದು.

**111. ಉಚ್ಚ ನ್ಯಾಯಾಲಯವು ಹಿಂತೆಗೆದುಕೊಳ್ಳುವಿಕೆಯನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡುವುದು :–** ಹಿಂತೆಗೆದುಕೊಳ್ಳುವಿಕೆಯ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಮಂಜೂರು ಮಾಡಿದಾಗ ಮತ್ತು ಹಿಂತೆಗೆದುಕೊಳ್ಳುವ ಪಕ್ಷಕಾರನ ಸ್ಥಾನದಲ್ಲಿ 110ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅರ್ಜಿದಾರನೆಂದು ಯಾವನೇ ವ್ಯಕ್ತಿಯನ್ನು ಸೇರಿಸದಿರುವಾಗ ಉಚ್ಚ ನ್ಯಾಯಾಲಯವು ಆ ಸಂಗತಿಯನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕುದು ಮತ್ತು ಆ ತರುವಾಯ ಚುನಾವಣಾ ಆಯೋಗವು ಆ ವರದಿಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

**112. ಚುನಾವಣಾ ಅರ್ಜಿಗಳ ಕೊನೆಗೊಳಿಸುವಿಕೆ :–** (1) ಒಂದು ಚುನಾವಣಾ ಅರ್ಜಿಯು ಏಕೈಕ ಅರ್ಜಿದಾರನ ಅಥವಾ ಅನೇಕ ಅರ್ಜಿದಾರರ ಪೈಕಿ ಉತ್ತರ ಜೀವಿಯ ಮರಣದ ತರುವಾಯ ಮಾತ್ರವೇ ಕೊನೆಗೊಳ್ಳತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಚುನಾವಣಾ ಅರ್ಜಿಯು ಕೊನೆಗೊಂಡಿರುವಲ್ಲಿ, ಉಚ್ಚ ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಆ ಸಂಗತಿಯನ್ನು ಪ್ರಕಟಿಸುವಂತೆ ಮಾಡತಕ್ಕುದು.

(3) ತಾನೇ ಸ್ವತಃ ಅರ್ಜಿದಾರನಾಗಬಹುದಾಗಿದ್ದ ಯಾವನೇ ವ್ಯಕ್ತಿಯು ಅಂಥ ಪ್ರಕಟಣೆಯ ಹದಿನಾಲ್ಕು ದಿವಸಗಳೊಳಗಾಗಿ, ಅರ್ಜಿದಾರನೆಂದು ಸೇರಿಸಿಕೊಳ್ಳುವಂತೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಭದ್ರತೆಯ ಬಗ್ಗೆ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಪಾಲಿಸಿದ ತರುವಾಯ ಹಾಗೆ ಸೇರಿಸಿಕೊಳ್ಳಲು ಮತ್ತು ಉಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ಆ ವ್ಯವಹರಣೆಗಳನ್ನು ಮುಂದುವರಿಸಲು ಅವನು ಹಕ್ಕುಳ್ಳವನಾಗಿರತಕ್ಕುದು.

**113- 115.** (ನಿರಸನಗೊಳಿಸಲಾಗಿದೆ).

**116. ಪ್ರತ್ಯರ್ಜಿದಾರನ ಮರಣದ ತರುವಾಯ ಕೊನೆಗೊಳ್ಳುವಿಕೆ ಅಥವಾ ಪ್ರತ್ಯಾಯೋಜನೆ :-** ಚುನಾವಣಾ ಅರ್ಜಿಯ ಅಧಿವಿಚಾರಣೆಯು ಮುಕ್ತಾಯವಾಗುವುದಕ್ಕೆ ಮುಂಚೆ ಏಕೈಕ ಪ್ರತ್ಯರ್ಜಿದಾರನು ಮರಣ ಹೊಂದಿದರೆ ಅಥವಾ ಅರ್ಜಿಯನ್ನು ವಿರೋಧಿಸಲು ಉದ್ದೇಶಿಸಿಲ್ಲವೆಂದು ಅವನು ನೋಟೀಸು ನೀಡಿದರೆ ಅಥವಾ ಯಾವನೇ ಪ್ರತ್ಯರ್ಜಿದಾರನು ಮರಣ ಹೊಂದಿದರೆ ಅಥವಾ ಅಂಥ ನೋಟೀಸನ್ನು ನೀಡಿದರೆ ಮತ್ತು ಅರ್ಜಿಯನ್ನು ವಿರೋಧಿಸುವ ಇತರ ಯಾವನೇ ಪ್ರತ್ಯರ್ಜಿದಾರನು ಇಲ್ಲದಿದ್ದರೆ, ಉಚ್ಚ ನ್ಯಾಯಾಲಯವು, ಅಂಥ ಸಂಗತಿಯ ಬಗ್ಗೆ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕುದು ಮತ್ತು ಆ ತರುವಾಯ ಅರ್ಜಿದಾರನಾಗಬಹುದಾಗಿದ್ದ ಯಾವನೇ ವ್ಯಕ್ತಿಯು, ಅಂಥ ಪ್ರಕಟಣೆಯ ಹದಿನಾಲ್ಕು ದಿವಸಗಳೊಳಗಾಗಿ ಅರ್ಜಿಯನ್ನು ವಿರೋಧಿಸಲು ಅಂಥ ಪ್ರತ್ಯರ್ಜಿದಾರನ ಸ್ಥಾನದಲ್ಲಿ ಸೇರಿಕೊಳ್ಳಲು ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಉಚ್ಚ ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳ ಮೇಲೆ ವ್ಯವಹರಣೆಗಳನ್ನು ಮುಂದುವರಿಸಲು ಅವನು ಹಕ್ಕುಳ್ಳವನಾಗಿರತಕ್ಕುದು.

## ಅಧ್ಯಾಯ - IV ಎ

## ಅಪೀಲುಗಳು

**116ಎ. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲುಗಳು :-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, 98ನೇ ಪ್ರಕರಣ ಅಥವಾ 99ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಪ್ರತಿಯೊಂದು ಆದೇಶದ ಬಗ್ಗೆ ಯಾವುದೇ ಪ್ರಶ್ನೆಯ (ಅದು ಕಾನೂನಿನದಾಗಿರಲಿ, ಅಥವಾ ಸಂಗತಿಯದಾಗಿರಲಿ) ಮೇಲೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕುದು.

(2) ಈ ಅಧ್ಯಾಯದ ಮೇರೆಗಿನ ಪ್ರತಿಯೊಂದು ಅಪೀಲನ್ನು 98ನೇ ಪ್ರಕರಣ ಅಥವಾ 99ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗಾಗಿ ಸಲ್ಲಿಸತಕ್ಕುದು :

ಪರಂತು, 30 ದಿವಸಗಳ ಅಂಥ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣ ಇದ್ದಿತೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ಅವಧಿಯ ಮುಕ್ತಾಯದ ತರುವಾಯ ಅಪೀಲನ್ನು ಪುರಸ್ಕರಿಸಬಹುದು.

**116ಬಿ. ಉಚ್ಚ ನ್ಯಾಯಾಲಯದ ಆದೇಶದ ಜಾರಿಯ ತಡೆ :-** (1) 98ನೇ ಪ್ರಕರಣ ಅಥವಾ 99ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಆದೇಶದ ಜಾರಿಯ ತಡೆಗಾಗಿ, ಆ ಆದೇಶದ ಬಗ್ಗೆ ಅಪೀಲು ಸಲ್ಲಿಸಲು ಅನುಮತಿಸಲಾದ ಕಾಲವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಉಚ್ಚ ನ್ಯಾಯಾಲಯವು, ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಆ ಆದೇಶದ ಜಾರಿಯನ್ನು ತಡೆ ಹಿಡಿಯಬಹುದು ; ಆದರೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಿದ ತರುವಾಯ ಉಚ್ಚ ನ್ಯಾಯಾಲಯಕ್ಕೆ ತಡೆಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸತಕ್ಕುದಲ್ಲ.

(2) 98ನೇ ಪ್ರಕರಣ ಅಥವಾ 99ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿರುವಲ್ಲಿ, ಸರ್ವೋಚ್ಚ ನ್ಯಾಯಾಲಯವು, ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(3) ಆದೇಶದ ಜಾರಿಯನ್ನು, ಸಂದರ್ಭಾನುಸಾರ, ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು ತಡೆ ಹಿಡಿದಿರುವಾಗ, ಆ ಆದೇಶವು 107ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವತ್ತೂ ಜಾರಿಗೆ ಬಂದಿಲ್ಲವೆಂಬುದಾಗಿ ಭಾವಿಸತಕ್ಕುದು, ಮತ್ತು ತಡೆ ಆದೇಶದ ಒಂದು ಪ್ರತಿಯನ್ನು ಸಂದರ್ಭಾನುಸಾರ ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು, ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಅಧ್ಯಕ್ಷ ಅಥವಾ ಸಭಾಪತಿಗೆ ಕೂಡಲೇ ಕಳುಹಿಸಿಕೊಡತಕ್ಕುದು.

**116ಸಿ. ಅಪೀಲಿನ ಪ್ರಕ್ರಿಯೆ :-** (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಯಾವುವಾದರೂ ಇದ್ದರೆ, ಅವುಗಳ ಉಪಬಂಧಗಳಿಗೆ ಒಳಪಟ್ಟು ಪ್ರತಿಯೊಂದು ಅಪೀಲನ್ನು, ಉಚ್ಚ ನ್ಯಾಯಾಲಯವು ತನ್ನ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ಹೊರಡಿಸಿದ ಯಾವುದೇ ಅಂತಿಮ ಆದೇಶದ ಬಗೆಗಿನ ಅಪೀಲಿನ ಸುನಾವಣೆ ಮತ್ತು ನಿರ್ಧಾರಣೆಗೆ ಅನ್ವಯವಾಗುವ ಪ್ರಕ್ರಿಯೆಗೆ ಅನುಸಾರವಾಗಿ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸರ್ವೋಚ್ಚ ನ್ಯಾಯಾಲಯವು ಪ್ರತಿಯೊಂದು ಅಪೀಲನ್ನು ಸುನಾವಣೆ ಮಾಡತಕ್ಕುದು ಮತ್ತು ನಿರ್ಧರಿಸತಕ್ಕುದು ; ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಎಲ್ಲ ಉಪಬಂಧಗಳು ಮತ್ತು ನ್ಯಾಯಾಲಯದ ನಿಯಮಗಳು (ಭದ್ರತೆಯನ್ನು ಒದಗಿಸುವುದು ಮತ್ತು ನ್ಯಾಯಾಲಯದ ಯಾವುದೇ ಆದೇಶದ ಅಮಲ್ಜಾರಿ ಇವುಗಳ ಬಗೆಗಿನ ಉಪಬಂಧಗಳನ್ನು ಸೇರಿಸಿ) ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅಂಥ ಅಪೀಲಿಗೆ ಸಂಬಂಧಿಸಿದಂತೆ ಅನ್ವಯಿಸತಕ್ಕುದು.

(2) ಅಪೀಲನ್ನು ತೀರ್ಮಾನಿಸಿದ ಕೂಡಲೆ, ಸರ್ವೋಚ್ಚ ನ್ಯಾಯಾಲಯವು ಆ ತೀರ್ಮಾನದ ಸಾರಾಂಶವನ್ನು ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಅಧ್ಯಕ್ಷ ಅಥವಾ ಸಭಾಪತಿಗೆ ತಿಳಿಸತಕ್ಕುದು ಮತ್ತು ತದನಂತರ ಸಾಧ್ಯವಾದಷ್ಟು ಬೇಗನೆ ತೀರ್ಮಾನದ ಅಧಿಪ್ರಮಾಣಿತ ಪ್ರತಿಯನ್ನು ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡತಕ್ಕುದು ; ಮತ್ತು ಅದನ್ನು ಸ್ವೀಕರಿಸಿದ ಮೇಲೆ ಚುನಾವಣಾ ಆಯೋಗವು-

(ಎ) 106ನೇ ಪ್ರಕರಣದ ಮೇರೆಗೆ ಕಳುಹಿಸಲಾಗಿದ್ದ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಗಳನ್ನು ಯಾವ ಪ್ರಾಧಿಕಾರಗಳಿಗೆ ಕಳುಹಿಸಲಾಗಿದ್ದಿತೋ ಆ ಪ್ರಾಧಿಕಾರಗಳಿಗೆ ಅದರ ಪ್ರತಿಗಳನ್ನು ಕಳುಹಿಸತಕ್ಕುದು ; ಮತ್ತು

(ಬಿ) ಆ ಆದೇಶವನ್ನು ಸದರಿ ಪ್ರಕರಣದ ಮೇರೆಗೆ ಯಾವ ರಾಜಪತ್ರ ಅಥವಾ ರಾಜಪತ್ರಗಳಲ್ಲಿ ಪ್ರಕಟಿಸಲಾಗಿದ್ದಿತೋ ಅದರಲ್ಲಿ ಅಥವಾ ಅವುಗಳಲ್ಲಿ ಆ ತೀರ್ಮಾನವನ್ನು ಪ್ರಕಟಿಸುವಂತೆ ಮಾಡತಕ್ಕುದು.

## ಅಧ್ಯಾಯ - V

## ಖರ್ಚುಗಳು ಮತ್ತು ಖರ್ಚುಗಳಿಗಾಗಿ ಭದ್ರತೆ

**117. ಖರ್ಚುಗಳಿಗಾಗಿ ಭದ್ರತೆ :-** (1) ಚುನಾವಣಾ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ, ಅರ್ಜಿದಾರನು ಉಚ್ಚ ನ್ಯಾಯಾಲಯದ ನಿಯಮಗಳಿಗನುಸಾರವಾಗಿ ಅರ್ಜಿಯ ಖರ್ಚುಗಳಿಗಾಗಿ ಭದ್ರತೆಯೆಂದು ಎರಡು ಸಾವಿರ ರೂಪಾಯಿಗಳ ಮೊತ್ತವನ್ನು ಉಚ್ಚ ನ್ಯಾಯಾಲಯದಲ್ಲಿ ಠೇವಣಿ ಇಡತಕ್ಕುದು.

(2) ಚುನಾವಣಾ ಅರ್ಜಿಯ ಅಧಿವಿಚಾರಣೆಯ ಕ್ರಮದಲ್ಲಿ, ಉಚ್ಚ ನ್ಯಾಯಾಲಯವು, ಯಾವುದೇ ಸಮಯದಲ್ಲಿ, ಅದು ನಿರ್ದೇಶಿಸಬಹುದಾದಂಥ ಖರ್ಚುಗಳಿಗಾಗಿ ಹೆಚ್ಚಿನ ಭದ್ರತೆಯನ್ನು ನೀಡಲು ಅರ್ಜಿದಾರನನ್ನು ಕೇಳಬಹುದು.

**118. ಖರ್ಚುಗಳಿಗಾಗಿ ಪ್ರತ್ಯರ್ಜಿದಾರನಿಂದ ಭದ್ರತೆ :-** ಯಾವನೇ ವ್ಯಕ್ತಿಯು ಖರ್ಚುಗಳ ಬಗ್ಗೆ ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಭದ್ರತೆಯನ್ನು ನೀಡಿದ ಹೊರತು, 86ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಪ್ರತ್ಯರ್ಜಿದಾರನೆಂದು ಸೇರಿಸಲ್ಪಡಲು ಹಕ್ಕುಳ್ಳವನಾಗತಕ್ಕುದಲ್ಲ.

**119. ಖರ್ಚುಗಳು :-** ಖರ್ಚುಗಳು ಉಚ್ಚ ನ್ಯಾಯಾಲಯದ ವಿವೇಚನೆಗೆ ಅನುಸಾರವಾಗಿರತಕ್ಕುದು :

ಪರಂತು, 98ನೇ ಪ್ರಕರಣದ (ಎ) ಖಂಡದ ಮೇರೆಗೆ ಅರ್ಜಿಯನ್ನು ವಜಾ ಮಾಡಿರುವ ಚುನಾಯಿತ ಅಭ್ಯರ್ಥಿಯು, ಆ ಅರ್ಜಿಯನ್ನು ವಿರೋಧಿಸುವಲ್ಲಿ ಅವನು ವಹಿಸಿರುವ ಖರ್ಚುಗಳನ್ನು ಪಡೆಯಲು ಹಕ್ಕುಳ್ಳವನಾಗತಕ್ಕುದು ಮತ್ತು ತದನುಸಾರವಾಗಿ ಉಚ್ಚ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಪರವಾಗಿ ಖರ್ಚುಗಳ ಬಗ್ಗೆ ಆದೇಶವನ್ನು ಮಾಡತಕ್ಕುದು.

**120.** (ನಿರಸನಗೊಳಿಸಲಾಗಿದೆ).

**121. ಭದ್ರತಾ ಠೇವಣಿಗಳಿಂದ ಖರ್ಚುಗಳ ಸಂದಾಯ ಮತ್ತು ಅಂಥ ಠೇವಣಿಗಳ ವಾಪಸಾತಿ :-** (1) ಈ ಭಾಗದ ಉಪಬಂಧಗಳ ಮೇರೆಗೆ ಖರ್ಚುಗಳ ಬಗ್ಗೆ ಯಾವುದೇ ಆದೇಶದಲ್ಲಿ ಯಾವನೇ ವ್ಯಕ್ತಿಗೆ ಯಾವನೇ ಪಕ್ಷಕಾರನು ಖರ್ಚುಗಳನ್ನು ಸಂದಾಯ ಮಾಡಲು ನಿರ್ದೇಶನವಿದ್ದರೆ, ಅಂಥ ಖರ್ಚುಗಳನ್ನು, ಈಗಾಗಲೇ ಸಂದಾಯ ಮಾಡಿರದಿದ್ದರೆ ಅವುಗಳನ್ನು ಯಾರ ಪರವಾಗಿ ಅಂಥ ಖರ್ಚುಗಳನ್ನು ನೀಡಲು ಆದೇಶಿಸಲಾಗಿದೆಯೋ ಆ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಆ ಬಗ್ಗೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಈ ಭಾಗದ ಮೇರೆಗೆ ಅಂಥ ಪಕ್ಷಕಾರನು ಕೊಟ್ಟಿರುವ ಭದ್ರತಾ ಠೇವಣಿ ಮತ್ತು ಹೆಚ್ಚಿನ ಭದ್ರತಾ ಠೇವಣಿ ಯಾವುದಾದರೂ ಇದ್ದರೆ ಅದು - ಇವುಗಳಿಂದ ಪೂರ್ಣವಾಗಿ ಅಥವಾ ಸಾಧ್ಯವಾದಷ್ಟು ಸಂದಾಯ ಮಾಡತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಖರ್ಚುಗಳನ್ನು ಆ ಉಪಪ್ರಕರಣದ ಮೇರೆಗೆ ಸಂದಾಯ ಮಾಡಿದ ತರುವಾಯ ಸದರಿ ಭದ್ರತಾ ಠೇವಣಿಗಳ ಪೈಕಿ ಯಾವುದರಲ್ಲಾದರೂ ಯಾವುದೇ ಶಿಲ್ಕು ಉಳಿದಿದ್ದರೆ, ಅಂಥ ಶಿಲ್ಕನ್ನು ಅಥವಾ ಯಾವುವೇ ಖರ್ಚುಗಳನ್ನು ಕೊಡಲು ಆದೇಶಿಸಿರದಿರುವಲ್ಲಿ ಅಥವಾ ಮೇಲೆ ಹೇಳಿದಂತೆ ಒಂದು ವರ್ಷದ ಸದರಿ ಅವಧಿಯೊಳಗೆ ಯಾವುದೇ ಅರ್ಜಿಯನ್ನು ಸಲ್ಲಿಸದಿರುವಲ್ಲಿ ಸದರಿ ಭದ್ರತಾ ಠೇವಣಿಗಳನ್ನು ಪೂರ್ಣವಾಗಿ ಠೇವಣಿಗಳನ್ನು ಇಟ್ಟಿರುವ ವ್ಯಕ್ತಿಯು ಅಥವಾ ಅಂಥ ಠೇವಣಿಗಳನ್ನು ಇಟ್ಟ ತರುವಾಯ ಅಂಥ ವ್ಯಕ್ತಿಯು ಮರಣ ಹೊಂದಿದರೆ, ಅಂಥ ವ್ಯಕ್ತಿಯ ಕಾನೂನು ಸಮ್ಮತ ಪ್ರತಿನಿಧಿಯು ಉಚ್ಚ ನ್ಯಾಯಾಲಯಕ್ಕೆ ಈ ಬಗ್ಗೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಸಂದರ್ಭಾನುಸಾರ ಸದರಿ ವ್ಯಕ್ತಿಗೆ ಅಥವಾ ಅವನ ಕಾನೂನು ಸಮ್ಮತ ಪ್ರತಿನಿಧಿಗೆ ಹಿಂತಿರುಗಿಸತಕ್ಕುದು.

**122. ಖರ್ಚುಗಳ ಬಗೆಗಿನ ಆದೇಶಗಳ ಅಮಲ್ಜಾರಿ :-** ಈ ಭಾಗದ ಉಪಬಂಧಗಳ ಮೇರೆಗೆ ಖರ್ಚುಗಳ ಬಗೆಗಿನ ಯಾವುದೇ ಆದೇಶವನ್ನು ಮೂಲ ಅಧಿಕಾರ ವ್ಯಾಪ್ತಿಯುಳ್ಳ ಯಾವ ಪ್ರಧಾನ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಯಾವುದೇ ಹಣದ ಮೊತ್ತವನ್ನು ಸಂದಾಯ ಮಾಡಲು ಅಂಥ ಆದೇಶದ ಮೂಲಕ ನಿರ್ದೇಶಿತನಾಗಿರುವ ಯಾವನೇ

ವ್ಯಕ್ತಿಯು ವಾಸಸ್ಥಳವನ್ನು ಅಥವಾ ವ್ಯವಹಾರದ ಸ್ಥಳವನ್ನು ಹೊಂದಿರುತ್ತಾನೋ ಆ ನ್ಯಾಯಾಲಯದ ಮುಂದೆ, ಅಥವಾ ಅಂಥ ಸ್ಥಳವು ಪ್ರೆಸಿಡೆನ್ಸಿ ಪಟ್ಟಣದೊಳಗಿರುವಲ್ಲಿ, ಅಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲಘು ವ್ಯಾಜ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು ಮತ್ತು ಅಂಥ ನ್ಯಾಯಾಲಯವು ದಾವೆಯಲ್ಲಿ ಅದೇ ಸ್ವತಃ ಹಣದ ಸಂದಾಯಕ್ಕೆ ಡಿಕ್ರಿಯನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ಅಂಥದೇ ರೀತಿಯಲ್ಲಿ ಮತ್ತು ಅಂಥದೇ ಪ್ರಕ್ರಿಯೆ ಮೂಲಕ ಆ ಆದೇಶವನ್ನು ಅಮಲ್ಜಾರಿಗೊಳಿಸತಕ್ಕುದು ಅಥವಾ ಅಮಲ್ಜಾರಿಗೊಳಿಸುವಂತೆ ಮಾಡತಕ್ಕುದು :

ಪರಂತು, ಯಾವುದೇ ಅಂಥ ಖರ್ಚುಗಳು ಅಥವಾ ಅವುಗಳ ಯಾವುದೇ ಭಾಗವನ್ನು 121ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯ ಮೂಲಕ ವಸೂಲಿ ಮಾಡಬಹುದಾಗಿರುವಲ್ಲಿ, ಆ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ತರುವಾಯ ಆ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಭದ್ರತಾ ಠೇವಣಿಗಳ ಮೊಬಲಗು ಸಾಕಷ್ಟಿಲ್ಲದಿರುವ ಕಾರಣದಿಂದ ವಸೂಲಾಗದೆ ಉಳಿದಿರುವ ಯಾವುವೇ ಖರ್ಚುಗಳ ಶಿಲ್ಕಿನ ವಸೂಲಾತಿಗಾಗಿ ಅರ್ಜಿ ಇರುವ ಹೊರತು, ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಈ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಲು ಅವಕಾಶ ಇರತಕ್ಕುದಲ್ಲ.

## ಭಾಗ - VII

## ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಪರಾಧಗಳು

## ಅಧ್ಯಾಯ - I

## ಭ್ರಷ್ಟಾಚಾರಗಳು

**123. ಭ್ರಷ್ಟಾಚಾರಗಳು :-** ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕುದು :-

(1) "ಲಂಚಗುಳಿತನ" ಎಂದರೆ,-

ಎ. ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಯಾವನೇ ವ್ಯಕ್ತಿಗಾಗಲೀ -

(ಎ) ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ನಿಲ್ಲದಿರಲು ಅಥವಾ ಅಭ್ಯರ್ಥಿಯಾಗಿ ಇರುವುದನ್ನು ಹಿಂದಕ್ಕೆ ತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಒಬ್ಬ ವ್ಯಕ್ತಿಯನ್ನು, ಅಥವಾ

(ಬಿ) ಚುನಾವಣೆಯಲ್ಲಿ ಮತದಾನ ಮಾಡಲು ಅಥವಾ ಮತದಾನ ಮಾಡದೇ ಇರಲು, ಅಥವಾ

(i) ಹಾಗೆ ನಿಂತಿರುವುದಕ್ಕಾಗಿ ಅಥವಾ ನಿಲ್ಲದಿರುವುದಕ್ಕಾಗಿ ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿರುವುದಕ್ಕಾಗಿ ಅಥವಾ ಹಿಂತೆಗೆದುಕೊಳ್ಳದಿರುವುದಕ್ಕಾಗಿ ಒಬ್ಬ ವ್ಯಕ್ತಿಗೆ; ಅಥವಾ

(ii) ಮತದಾನ ಮಾಡಿರುವುದಕ್ಕಾಗಿ ಅಥವಾ ಮಾಡದೇ ಇರುವುದಕ್ಕಾಗಿ, ಒಬ್ಬ ಮತದಾರನಿಗೆ ಬಹುಮಾನವೆಂದು, ಒಬ್ಬ ಮತದಾರನನ್ನು, ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ ಪ್ರೇರಿಸುವ ಉದ್ದೇಶದಿಂದ ಕೊಡುವ ಯಾವುದೇ ಪರಿತೋಷದ ಯಾವುದೇ ದಾನ, ಅದನ್ನು ಕೊಡುವುದಾಗಿ ಹೇಳುವುದು ಅಥವಾ ಅದರ ಯಾವುದೇ ಆಶ್ವಾಸನೆ;

ಬಿ. ಪ್ರೇರಣೆಯ ರೂಪದಲ್ಲಾಗಲಿ, ಬಹುಮಾನದ ರೂಪದಲ್ಲಾಗಲಿ -

(ಎ) ಒಬ್ಬ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ನಿಲ್ಲದೆ ಇರಲು ಅಥವಾ ಅಭ್ಯರ್ಥಿಯಾಗಿ ಇರುವುದನ್ನು ಹಿಂತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಒಬ್ಬ ವ್ಯಕ್ತಿಯು ; ಅಥವಾ

(ಬಿ) ಮತದಾನ ಮಾಡುವುದಕ್ಕಾಗಿ ಅಥವಾ ಮತದಾನ ಮಾಡದೆ ಇರುವುದಕ್ಕಾಗಿ, ಅಥವಾ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಯಾವನೇ ಮತದಾರನನ್ನು ಪ್ರೇರಿಸಲು ಅಥವಾ ಪ್ರೇರಿಸುವಂತೆ ಪ್ರಯತ್ನಿಸಲು, ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಯಾವನೇ ಅಭ್ಯರ್ಥಿಯನ್ನು ಪ್ರೇರಿಸಲು ಅಥವಾ ಪ್ರೇರಿಸುವಂತೆ ಪ್ರಯತ್ನಿಸಲು ತನಗೋಸ್ಕರ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಯಾವೊಬ್ಬ ವ್ಯಕ್ತಿಯು

- ಯಾವುದೇ ಪರಿತೋಷವನ್ನು ಸ್ವೀಕರಿಸುವುದು ಅಥವಾ ಸ್ವೀಕರಿಸಲು ಒಪ್ಪಿಕೊಳ್ಳುವುದು.

ವಿವರಣೆ :- ಈ ಖಂಡದ ಉದ್ದೇಶಗಳಿಗಾಗಿ 'ಪರಿತೋಷ' ಎಂಬ ಪದವು, ಆರ್ಥಿಕ ಪರಿತೋಷಗಳು ಅಥವಾ ಹಣದ ರೂಪದಲ್ಲಿ ಅಂದಾಜು ಮಾಡಬಹುದಾದ ಪರಿತೋಷಗಳಿಗೆ ಪರಿಮಿತವಾಗಿರುವುದಿಲ್ಲ ಮತ್ತು ಅದು ಬಹುಮಾನಕ್ಕಾಗಿ ಮನರಂಜನೆಯ ಎಲ್ಲ ಬಗೆಗಳನ್ನು ಮತ್ತು ನಿಯೋಜನೆಯ ಎಲ್ಲ ಬಗೆಗಳನ್ನು ಒಳಗೊಳ್ಳುತ್ತದೆ. ಆದರೆ ಯಾವುದೇ ಚುನಾವಣೆಯಲ್ಲಿ ಅಥವಾ ಅದರ

ಉದ್ದೇಶಕ್ಕಾಗಿ ವಾಸ್ತವವಾಗಿ ಮಾಡಿರುವ ಮತ್ತು 78ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಚುನಾವಣಾ ವೆಚ್ಚಗಳ ಲೆಕ್ಕದಲ್ಲಿ ಕ್ರಮಬದ್ಧವಾಗಿ ನಮೂದು ಮಾಡಿದ ಯಾವುವೇ ವೆಚ್ಚಗಳ ಸಂದಾಯವನ್ನು ಒಳಗೊಳ್ಳುವುದಿಲ್ಲ.

(2) ಅನುಚಿತ ಪ್ರಭಾವ, ಎಂದರೆ ಅಭ್ಯರ್ಥಿಯ ಅಥವಾ ಅವನ ಏಜೆಂಟನ, ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರೆ ವ್ಯಕ್ತಿಯ ಕಡೆಯಿಂದ ಯಾವುದೇ ಚುನಾವಣಾ ಹಕ್ಕಿನ ಅನಿರ್ಬಂಧಿತ ಚಲಾವಣೆಯಲ್ಲಿ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಹಸ್ತಕ್ಷೇಪ ಅಥವಾ ಹಸ್ತಕ್ಷೇಪಿಸಲು ಪ್ರಯತ್ನ:

ಪರಂತು,-

(ಎ) ಈ ಖಂಡದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅದರಲ್ಲಿ ಉಲ್ಲೇಖಿಸಲಾದ ಅಂಥ ಯಾವ ವ್ಯಕ್ತಿಯು -

(i) ಯಾವನೇ ಅಭ್ಯರ್ಥಿಗೆ, ಅಥವಾ ಯಾವನೇ ಮತದಾರನಿಗೆ, ಅಥವಾ ಅಭ್ಯರ್ಥಿಯು ಅಥವಾ ಮತದಾರನು ಹಿತಾಸಕ್ತನಾಗಿರುವ ಯಾವನೇ ವ್ಯಕ್ತಿಗೆ ಸಾಮಾಜಿಕ ಬಹಿಷ್ಕಾರ ಮತ್ತು ಜಾತಿ ಬಹಿಷ್ಕಾರ ಅಥವಾ ಯಾವುದೇ ಜಾತಿ ಅಥವಾ ಸಮುದಾಯದಿಂದ ಹೊರದೂಡುವುದು - ಇವುಗಳನ್ನು ಒಳಗೊಂಡು ಯಾವುದೇ ಬಗೆಯ ಕ್ಷತಿ ಉಂಟು ಮಾಡುವ ಬೆದರಿಕೆ ಹಾಕುತ್ತಾನೋ ; ಅಥವಾ

(ii) ಒಬ್ಬ ಅಭ್ಯರ್ಥಿಗೆ ಅಥವಾ ಮತದಾರನಿಗೆ ಅವನು ಅಥವಾ ಅವನು ಆಸಕ್ತನಾಗಿರುವ ಯಾವನೇ ವ್ಯಕ್ತಿಯು ದೈವಾಗ್ರಹಕ್ಕೆ ಅಥವಾ ದೈವಿಕ ಆಕ್ಷೇಪಣೆಗೆ ಗುರಿಯಾಗುವನೆಂದು ಅಥವಾ ಗುರಿಪಡಿಸುವಂತೆ ಮಾಡಲಾಗುವುದು ಎಂದು ನಂಬುವಂತೆ ಪ್ರೇರಿಸುತ್ತಾನೋ ಅಥವಾ ಪ್ರೇರಿಸಲು ಪ್ರಯತ್ನಿಸುತ್ತಾನೋ ಆ ವ್ಯಕ್ತಿಯು

- ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಅಂಥ ಅಭ್ಯರ್ಥಿಯ ಅಥವಾ ಮತದಾರನ ಚುನಾವಣಾ ಹಕ್ಕಿನ ಅನಿರ್ಬಂಧಿತ ಚಲಾವಣೆಯಲ್ಲಿ ಹಸ್ತಕ್ಷೇಪಿಸುತ್ತಾನೆಂದು ಭಾವಿಸತಕ್ಕುದು.

(ಬಿ) ಸಾರ್ವಜನಿಕ ಕಾರ್ಯ ನೀತಿಯ ಘೋಷಣೆ, ಅಥವಾ ಸಾರ್ವಜನಿಕ ಕ್ರಮದ ಆಶ್ವಾಸನೆ ಅಥವಾ ಚುನಾವಣಾ ಹಕ್ಕಿನಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶ ಇಲ್ಲದೆ ಕಾನೂನು ಸಮ್ಮತ ಹಕ್ಕನ್ನು ಮಾತ್ರ ಚಲಾಯಿಸುವುದು ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಹಸ್ತಕ್ಷೇಪ ಮಾಡಿಲ್ಲವೆಂದು ಭಾವಿಸತಕ್ಕುದಲ್ಲ.

(3) ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಯಾವನೇ ವ್ಯಕ್ತಿಯ ಧರ್ಮ, ಮೂಲ ವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಆ ವ್ಯಕ್ತಿಗಾಗಿ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಮಾಡಿಕೊಳ್ಳುವ ಮನವಿ, ಅಥವಾ ಧಾರ್ಮಿಕ ಚಿಹ್ನೆಗಳ ಉಪಯೋಗ ಅಥವಾ ಅವುಗಳತ್ತ ಮನಸೆಳೆಯುವಿಕೆ, ಅಥವಾ ರಾಷ್ಟ್ರೀಯ ಧ್ವಜ ಅಥವಾ ರಾಷ್ಟ್ರೀಯ ಲಾಂಛನ ಮುಂತಾದ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅವುಗಳತ್ತ ಮನಸೆಳೆಯುವುದು :

ಪರಂತು, ಈ ಅಧಿನಿಯಮದ ಮೇರೆಗೆ ಒಬ್ಬ ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಚಿಹ್ನೆಯನ್ನು ಈ ಖಂಡದ ಉದ್ದೇಶಗಳಿಗಾಗಿ ಧಾರ್ಮಿಕ ಚಿಹ್ನೆ ಅಥವಾ ರಾಷ್ಟ್ರೀಯ ಚಿಹ್ನೆ ಎಂದು ಭಾವಿಸತಕ್ಕುದಲ್ಲ.

(3ಎ) ಒಬ್ಬ ಅಭ್ಯರ್ಥಿಯ ಚುನಾವಣಾ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರಗಳ ಮೇಲೆ ಆ ವ್ಯಕ್ತಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, ಭಾರತದ ನಾಗರಿಕರ ಭಿನ್ನ ಭಿನ್ನ ವರ್ಗಗಳ ನಡುವೆ ಹಗೆತನದ ಅಥವಾ ದ್ವೇಷದ ಭಾವನೆಗಳನ್ನು ಬೆಳೆಸುವುದು ಅಥವಾ ಬೆಳೆಸಲು ಪ್ರಯತ್ನಿಸುವುದು.

(3ಬಿ) ಒಬ್ಬ ಅಭ್ಯರ್ಥಿಯ ಚುನಾವಣಾ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಸತಿ ಆಚರಣೆ ಅಥವಾ ಸತಿ ಹೋಗುವಿಕೆಯನ್ನು ಅಥವಾ ಅದರ ವೈಭವೀಕರಣವನ್ನು ಪ್ರಸಾರಗೊಳಿಸುವುದು.

ವಿವರಣೆ :- ಈ ಖಂಡದ ಉದ್ದೇಶಗಳಿಗಾಗಿ ಸತಿಗೆ ಸಂಬಂಧಿಸಿದಂತೆ "ಸತಿ" ಮತ್ತು "ವೈಭವೀಕರಣ" ಎಂಬವುಗಳು, ಸತಿಸಹಗಮನ (ಪ್ರತಿಬಂಧ) ಅಧಿನಿಯಮ, 1987 (1988ರ 3)ರಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿರುವ ಅರ್ಥಗಳನ್ನೇ ಹೊಂದಿರತಕ್ಕುದು.

(4) ಯಾವನೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡವಳಿಕೆಯ ಸಂಬಂಧದಲ್ಲಿ ಅಥವಾ ಯಾವನೇ ಅಭ್ಯರ್ಥಿಯ ಉಮೇದುವಾರಿಕೆ ಅಥವಾ ಹಿಂತೆಗೆದುಕೊಳ್ಳುವಿಕೆಯ ಸಂಬಂಧದಲ್ಲಿ ಸುಳ್ಳಾದ ಅಥವಾ ಅದು ಸುಳ್ಳು ಎಂದು ತಾನು ನಂಬುವ ಅಥವಾ ಅದು ನಿಜವೆಂದು ತಾನು ನಂಬದಿರುವ ಮತ್ತು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಮೇಲೆ ಪ್ರತಿಕೂಲ ಪ್ರಭಾವ ಬೀರಲು ಯುಕ್ತವಾಗಿ ಉದ್ದೇಶಿಸಿರುವ ಸಂಗತಿಯ ಯಾವುದೇ ನಿರೂಪಣೆಯನ್ನು ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಪ್ರಕಟಿಸುವುದು.

(5) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, 25ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಿದ ಯಾವುದೇ ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಸ್ಥಳಕ್ಕೆ (ಸ್ವತಃ ಅಭ್ಯರ್ಥಿ, ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತುಪಡಿಸಿ) ಯಾವನೇ ಮತದಾರನನ್ನು ಉಚಿತವಾಗಿ ಕರೆದೊಯ್ಯಲು ಅಥವಾ ಅಲ್ಲಿಂದ ಕರೆತರಲು ಯಾವುದೇ ವಾಹನ ಅಥವಾ ದೋಣಿಯನ್ನು ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಅಥವಾ ಅಂಥ ವಾಹನ ಅಥವಾ ದೋಣಿಯನ್ನು ಬಳಸುವುದು :

ಪರಂತು, ಯಾವುದೇ ಅಂಥ ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಕರೆದೊಯ್ಯುವ ಮತ್ತು ಅಲ್ಲಿಂದ ಕರೆತರುವ ಉದ್ದೇಶಕ್ಕಾಗಿ ಒಬ್ಬ ಮತದಾರನು ಅಥವಾ ಅನೇಕ ಮತದಾರರು ಅವರ ಒಟ್ಟು ಖರ್ಚಿನಲ್ಲಿ ಒಂದು ವಾಹನವನ್ನು ಅಥವಾ ದೋಣಿಯನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆ ಪಡೆದ ವಾಹನವು ಅಥವಾ ದೋಣಿಯು ಯಂತ್ರಚಾಲಿತ ವಾಹನ ಅಥವಾ ದೋಣಿ ಆಗಿರದಿದ್ದರೆ, ಈ ಖಂಡದ ಮೇರೆಗೆ ಭ್ರಷ್ಟಾಚಾರವಾಗಿರುವುದೆಂದು ಭಾವಿಸತಕ್ಕದಲ್ಲ :

ಮತ್ತೂ ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗುವುದು ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾವನೇ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ, ವಾಹನ ಅಥವಾ ದೋಣಿ ಅಥವಾ ಯಾವುದೇ ಟ್ರಾಮ್‌ಕಾರನ್ನು ಅಥವಾ ರೈಲು ಬೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟಾಚಾರವೆಂದು ಭಾವಿಸತಕ್ಕದಲ್ಲ.

ವಿವರಣೆ :- ಈ ಖಂಡದಲ್ಲಿ "ವಾಹನ" ಎಂಬ ಪದಕ್ಕೆ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ ; ಆ ವಾಹನವು ಯಂತ್ರ ಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು ; ಮತ್ತು ಅದು ಇತರ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವಂತಹದಾಗಿರಬಹುದು.

(6) 77ನೇ ಪ್ರಕರಣವನ್ನು ಉಲ್ಲಂಘಿಸಿ ವೆಚ್ಚವನ್ನು ವಹಿಸಿಕೊಳ್ಳುವುದು ಅಥವಾ ಅಧಿಕೃತಗೊಳಿಸುವುದು.

(7) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು, ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಹಮತಿಯಿಂದ ಯಾವನೇ ಇತರೆ ವ್ಯಕ್ತಿಯು ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಗಾಗಿ ಸರ್ಕಾರಿ ಸೇವೆಯಲ್ಲಿರುವ ಮತ್ತು ಈ ಕೆಳಕಂಡ ಯಾವುದೇ ವರ್ಗಕ್ಕೆ ಸೇರಿದ ಯಾವನೇ ವ್ಯಕ್ತಿಯಿಂದ (ಮತ ನೀಡುವುದನ್ನು ಹೊರತುಪಡಿಸಿ) ಯಾವುದೇ ಸಹಾಯವನ್ನು ಪಡೆದುಕೊಳ್ಳುವುದು ಅಥವಾ ದೊರಕಿಸಿಕೊಳ್ಳುವುದು ಅಥವಾ ಪಡೆದುಕೊಳ್ಳಲು ಅಥವಾ ದೊರಕಿಸಿಕೊಳ್ಳಲು ದುಷ್ಪ್ರೇರಿಸುವುದು ಅಥವಾ ಪ್ರಯತ್ನಿಸುವುದು, ಎಂದರೆ :-

(ಎ) ಗೆಜೆಟೆಡ್ ಅಧಿಕಾರಿಗಳು ;

(ಬಿ) ಸ್ಟೈಪಂಡರಿ ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು ;

(ಸಿ) ಒಕ್ಕೂಟ ಸಶಸ್ತ್ರ ಬಲಗಳ ಸದಸ್ಯರು ;

(ಡಿ) ಪೊಲೀಸ್ ಪಡೆಗಳ ಸದಸ್ಯರು ;

(ಇ) ಅಬ್ಕಾರಿ ಅಧಿಕಾರಿಗಳು ;

(ಎಫ್) ಭೂಕಂದಾಯವನ್ನು ಸಂಗ್ರಹಿಸುವುದು ಯಾರ ಕರ್ತವ್ಯವಾಗಿದೆಯೋ ಮತ್ತು ಅವರು ಸಂಗ್ರಹಿಸಿರುವ ಭೂಕಂದಾಯದ ಮೊಬಲಗಿನಲ್ಲಿ ಪಾಲು ಪಡೆಯುವ ಮೂಲಕ ಅಥವಾ ಅದರ ಮೇಲೆ ಕಮೀಷನ್ ಪಡೆಯುವ ಮೂಲಕ ಯಾರಿಗೆ ಪರಿಶ್ರಮ ಧನವನ್ನು ಕೊಡಲಾಗುತ್ತಿದೆಯೋ ಆದರೆ ಯಾರು ಯಾವುವೇ ಪೊಲೀಸ್ ಪ್ರಕಾರ್ಯಗಳನ್ನು ನಿರ್ವಹಿಸುತ್ತಿಲ್ಲವೋ ಮತ್ತು ಲಂಬಾರ್‌ದಾರರು ; ಮಾಲ್‌ಗುಜಾರರು, ಪಟೇಲರು, ದೇಶಮುಖರು ಅಥವಾ ಇತರ ಯಾವುದೇ ಹೆಸರಿನಿಂದ ಯಾರನ್ನು ಕರೆಯಲಾಗುತ್ತಿದೆಯೋ ಆ ಗ್ರಾಮ ಕಂದಾಯ ಅಧಿಕಾರಿಗಳನ್ನು ಹೊರತುಪಡಿಸಿದ ಕಂದಾಯ ಅಧಿಕಾರಿಗಳು ;

(ಜಿ) ನಿಯಮಿಸಬಹುದಾದಂಥ ಸರ್ಕಾರದ ಸೇವೆಯಲ್ಲಿರುವ ಇತರ ವರ್ಗದ ವ್ಯಕ್ತಿಗಳು :

ಪರಂತು, ಸರ್ಕಾರದ ಸೇವೆಯಲ್ಲಿರುವ ಮತ್ತು ಮೇಲೆ ಹೇಳಿದ ಯಾವುದೇ ವರ್ಗಕ್ಕೆ ಸೇರಿದ ಯಾವನೇ ವ್ಯಕ್ತಿಯು ತನ್ನ ಪದೀಯ ಕರ್ತವ್ಯದ ನಿರ್ವಹಣೆಯಲ್ಲಿ ಅಥವಾ ಹಾಗೆ ನಿರ್ವಹಿಸುವುದಾಗಿ ತಾತ್ಪರ್ಯವಾಗುವಲ್ಲಿ ಯಾವನೇ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಹಮತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಇತರೆ ವ್ಯಕ್ತಿ ಇವರಿಗಾಗಿ, ಇವರಿಗೆ ಅಥವಾ ಅವರ ಸಂಬಂಧದಲ್ಲಿ (ಆ ಅಭ್ಯರ್ಥಿಯು ಧಾರಣ ಮಾಡಿದ ಪದದ ಕಾರಣದಿಂದಾಗಿ ಅಥವಾ ಯಾವುದೇ ಇತರ ಕಾರಣಕ್ಕಾಗಿ) ಯಾವುವೇ ಏರ್ಪಾಟುಗಳನ್ನು ಮಾಡುವಲ್ಲಿ ಅಥವಾ ಯಾವುವೇ ಸೌಲಭ್ಯಗಳನ್ನು ಒದಗಿಸುವಲ್ಲಿ ಅಥವಾ ಯಾವುದೇ ಇತರ ಕಾರ್ಯ ಅಥವಾ ಕೃತ್ಯವನ್ನು ಮಾಡುವಲ್ಲಿ ಅಂಥ ಏರ್ಪಾಟುಗಳು, ಸೌಲಭ್ಯಗಳು ಅಥವಾ ಕಾರ್ಯ ಅಥವಾ ಕೃತ್ಯವನ್ನು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಗಾಗಿ ಮಾಡಿದ ಸಹಾಯವೆಂದು ಭಾವಿಸತಕ್ಕುದಲ್ಲ.

(8) ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಇತರ ವ್ಯಕ್ತಿಯು ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು.

ವಿವರಣೆ :- (1) ಈ ಪ್ರಕರಣದಲ್ಲಿ 'ಏಜೆಂಟ್' ಎಂಬ ಪದವು, ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಮತ್ತು ಅಭ್ಯರ್ಥಿಯ ಸಮ್ಮತಿಯಿಂದ ಚುನಾವಣೆಯ ಸಂಬಂಧದಲ್ಲಿ ಏಜೆಂಟನೆಂದು ಕಾರ್ಯ ನಿರ್ವಹಿಸಿರುವುದಾಗಿ ತೀರ್ಮಾನಿಸಲಾಗಿರುವ ಯಾವನೇ ವ್ಯಕ್ತಿ – ಇವರನ್ನು ಒಳಗೊಳ್ಳುತ್ತದೆ.

(2) (7)ನೇ ಖಂಡದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಯು ಒಬ್ಬ ಅಭ್ಯರ್ಥಿಯ ಚುನಾವಣಾ ಏಜೆಂಟನೆಂದು ಕಾರ್ಯ ನಿರ್ವಹಿಸಿದರೆ, ಅವನು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಯಲ್ಲಿ ಸಹಾಯ ಮಾಡುವನೆಂದು ಭಾವಿಸತಕ್ಕುದು.

(3) (7)ನೇ ಖಂಡದ ಉದ್ದೇಶಗಳಿಗಾಗಿ, ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರದ (ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತದ ಸಂಬಂಧದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯೂ ಸೇರಿದಂತೆ) ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು ಇವುಗಳ ಬಗ್ಗೆ ರಾಜಪತ್ರದಲ್ಲಿನ ಪ್ರಕಟಣೆಯು –

(i) ಸಂದರ್ಭಾನುಸಾರ ಅಂಥ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದು ಹಾಕುವುದು ಇವುಗಳ ಬಗ್ಗೆ, ಮತ್ತು

(ii) ಸಂದರ್ಭಾನುಸಾರ ಅಂಥ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು, ಇವು ಜಾರಿಗೆ ಬರುವ ದಿನಾಂಕವನ್ನು ಅಂಥ ಪ್ರಕಟಣೆಯಲ್ಲಿ ನಿರೂಪಿಸುವಲ್ಲಿ ಅಂಥ ವ್ಯಕ್ತಿಯನ್ನು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದಿತು, ಅಥವಾ ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದು ಹಾಕುವುದು ಈ ಸಂದರ್ಭದಲ್ಲಿ ಅಂಥ ವ್ಯಕ್ತಿಯು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಸೇವೆಯಲ್ಲಿ ಇರುವುದು ಮುಕ್ತಾಯಗೊಂಡಿದ್ದಿತು ಎಂಬ ಸಂಗತಿಯ ಬಗ್ಗೆ ಸಹ –

– ನಿರ್ಣಾಯಕ ರುಜುವಾತಾಗಿರತಕ್ಕುದು.

(4) 8ನೇ ಖಂಡದ ಉದ್ದೇಶಗಳಿಗಾಗಿ, "ಮತಗಟ್ಟೆ ವಶಪಡಿಸಿಕೊಳ್ಳುವುದು" ಎಂಬುದು 135ಎ ಪ್ರಕರಣದಲ್ಲಿ ಇರುವಂಥದೇ ಅರ್ಥವನ್ನು ಹೊಂದಿರತಕ್ಕುದು.

**124.** (ನಿರಸನಗೊಳಿಸಲಾಗಿದೆ)

## ಅಧ್ಯಾಯ – III

## ಚುನಾವಣಾ ಅಪರಾಧಗಳು

**125. ಚುನಾವಣಾ ಸಂಬಂಧದಲ್ಲಿ ವರ್ಗಗಳ ನಡುವೆ ಹಗೆತನವನ್ನು ಬೆಳೆಸುವುದು :–** ಈ ಅಧಿನಿಯಮದ ಮೇರೆಗೆ ಚುನಾವಣೆಯ ಸಂಬಂಧದಲ್ಲಿ ಯಾವನೇ ವ್ಯಕ್ತಿಯು, ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆ ಇವುಗಳ ಆಧಾರದ ಮೇಲೆ ಭಾರತದ ನಾಗರಿಕರ ಭಿನ್ನ ಭಿನ್ನ ವರ್ಗಗಳ ನಡುವೆ ಹಗೆತನ ಅಥವಾ ದ್ವೇಷ ಭಾವನೆಗಳನ್ನು ಬೆಳೆಸುವ ಅಥವಾ ಬೆಳೆಸಲು ಪ್ರಯತ್ನಿಸುವ ಯಾವನೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**125ಎ. ಸುಳ್ಳು ಶಪಥಪತ್ರ ಇತ್ಯಾದಿಗಳನ್ನು ಸಲ್ಲಿಸಿದ್ದಕ್ಕಾಗಿ ದಂಡ :–** ಅಭ್ಯರ್ಥಿಯು ಚುನಾವಣೆಯಲ್ಲಿ ಚುನಾಯಿತನಾಗಬೇಕೆಂಬ ಉದ್ದೇಶದಿಂದ ತಾನಾಗಿಯೇ ಆಗಲಿ ಅಥವಾ ಸಂದರ್ಭಾನುಸಾರ ಅವನ ಸೂಚಕನ ಮೂಲಕವಾಗಲಿ 33ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಿದ ಅವನ ನಾಮನಿರ್ದೇಶನ ಪತ್ರದಲ್ಲಿ ಅಥವಾ 33ಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಬೇಕೆಂದು ಅಗತ್ಯಪಡಿಸಿದ ಅವನ ಶಪಥಪತ್ರದಲ್ಲಿ,–

(i) 33ಎ ಪ್ರಕರಣದ (1)ನೇ ಉಪಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಲು ವಿಫಲನಾದರೆ; ಅಥವಾ

(ii) ಅವನಿಗೆ ಸುಳ್ಳು ಎಂದು ಗೊತ್ತಿದ್ದು ಅಥವಾ ಸುಳ್ಳು ಎಂದು ನಂಬಲು ಕಾರಣಗಳನ್ನು ಹೊಂದಿದ್ದು, ಸುಳ್ಳು ಮಾಹಿತಿಯನ್ನು ನೀಡಿದರೆ;

(iii) ಯಾವುವೇ ಮಾಹಿತಿಯನ್ನು ಬಚ್ಚಿಟ್ಟರೆ,

– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**126. ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಸಾರ್ವಜನಿಕ ಸಭೆಗಳ ನಿಷೇಧ :–** (1) ಯಾರೇ ವ್ಯಕ್ತಿಯು, ಯಾವುದೇ ಮತದಾನ ಪ್ರದೇಶದಲ್ಲಿನ ಯಾವುದೇ ಚುನಾವಣೆಗಾಗಿ ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯವು ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಯಾವುದೇ ಮತದಾನದ ಪ್ರದೇಶದಲ್ಲಿ –

(ಎ) ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಸಾರ್ವಜನಿಕ ಸಭೆಯನ್ನು ಅಥವಾ ಮೆರವಣಿಗೆಯನ್ನು ಕರೆಯತಕ್ಕದ್ದಲ್ಲ, ನಡೆಸತಕ್ಕದ್ದಲ್ಲ, ಅದರಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಸೇರತಕ್ಕದ್ದಲ್ಲ ಅಥವಾ ಅದನ್ನು ಉದ್ದೇಶಿಸಿ ಭಾಷಣ ಮಾಡತಕ್ಕದ್ದಲ್ಲ; ಅಥವಾ

(ಬಿ) ಚಲನಚಿತ್ರ ದರ್ಶಕ, ದೂರದರ್ಶನ ಅಥವಾ ಅಂಥದ್ದೇ ಇತರ ಪರಿಕರಗಳ ಮೂಲಕ ಸಾರ್ವಜನಿಕರಿಗೆ ಯಾವುದೇ ಚುನಾವಣಾ ವಿಷಯವನ್ನು ಪ್ರದರ್ಶಿಸತಕ್ಕದ್ದಲ್ಲ; ಅಥವಾ

(ಸಿ) ಚುನಾವಣಾ ವಿಷಯದ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯುವ ದೃಷ್ಟಿಯಿಂದ ಯಾವುದೇ ಸಂಗೀತ ಗೋಷ್ಠಿಯನ್ನು ಅಥವಾ ಯಾವುದೇ ನಾಟಕ ಪ್ರದರ್ಶನವನ್ನು ಅಥವಾ ಯಾವುದೇ ಇತರ ಮನರಂಜನೆ ಅಥವಾ ವಿನೋದ ಕಾರ್ಯಕ್ರಮವನ್ನು ನಡೆಸುವ ಮೂಲಕ ಅಥವಾ ನಡೆಯುವಂತೆ ವ್ಯವಸ್ಥೆ ಮಾಡುವ ಮೂಲಕ ಸಾರ್ವಜನಿಕರಿಗೆ ಯಾವುದೇ ಚುನಾವಣಾ ವಿಷಯವನ್ನು ಪ್ರಚಾರ ಮಾಡತಕ್ಕದ್ದಲ್ಲ.

(2) (1) ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದಲ್ಲಿ "ಚುನಾವಣಾ ವಿಷಯ" ಎಂಬ ಪದಾವಳಿಗೆ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವ ಅಥವಾ ಪರಿಣಾಮ ಉಂಟು ಮಾಡುವ ಆಶಯವಿರುವ ಅಥವಾ ಉದ್ದೇಶವಿರುವ ಯಾವುದೇ ವಿಷಯ ಎಂದು ಅರ್ಥ.

**127. ಚುನಾವಣಾ ಸಭೆಗಳಲ್ಲಿ ಗಲಭೆ :–** (1) ಈ ಪ್ರಕರಣವು ಅನ್ವಯಿಸುವ ಸಾರ್ವಜನಿಕ ಸಭೆಯಲ್ಲಿ, ಆ ಸಭೆಯನ್ನು ಯಾವ ಕಾರ್ಯ ನಿರ್ವಹಣೆಗಾಗಿ ಕರೆಯಲಾಗಿದ್ದಿತೋ ಅದನ್ನು ತಡೆಯುವ ಉದ್ದೇಶಕ್ಕಾಗಿ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸುವ ಅಥವಾ ವರ್ತಿಸುವಂತೆ ಇತರರನ್ನು ಚಿತಾವಣೆ ಮಾಡುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(1ಎ) (1) ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

(2) ಒಬ್ಬ ಸದಸ್ಯ ಅಥವಾ ಸದಸ್ಯರನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರಕ್ಕೆ ಕರೆ ನೀಡಿ ಈ ಅಧಿನಿಯಮದ ಮೇರೆಗೆ ಹೊರಡಿಸಿರುವ ಅಧಿಸೂಚನೆಯ ದಿನಾಂಕ ಮತ್ತು ಅಂಥ ಚುನಾವಣೆಯನ್ನು ನಡೆಸಲಾಗುವ ದಿನಾಂಕ ಇವುಗಳ ನಡುವಿನ ಅವಧಿಯಲ್ಲಿ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ನಡೆಯುವ ರಾಜಕೀಯ ಸ್ವರೂಪದ ಯಾವುದೇ ಸಾರ್ವಜನಿಕ ಸಭೆಗೆ ಈ ಪ್ರಕರಣವು ಅನ್ವಯಿಸುತ್ತದೆ.

(3) (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ಮಾಡುತ್ತಿದ್ದಾನೆಂದು ಯಾವನೇ ವ್ಯಕ್ತಿಯ ಬಗ್ಗೆ ಯಾವನೇ ಪೊಲೀಸ್ ಅಧಿಕಾರಿಯು ಯುಕ್ತವಾಗಿ ಸಂದೇಹಪಟ್ಟರೆ ಆ ಪೊಲೀಸ್ ಅಧಿಕಾರಿಯು, ಸಭೆಯ ಅಧ್ಯಕ್ಷನು ಹಾಗೆ ಮಾಡಲು ಕೋರಿದರೆ, ಕೂಡಲೇ ಅವನ ಹೆಸರು ಮತ್ತು ವಿಳಾಸವನ್ನು ತನ್ನ ಮುಂದೆ ಘೋಷಿಸುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಮತ್ತು ಆ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಹಾಗೆ ಘೋಷಿಸಲು ತಿರಸ್ಕರಿಸಿದರೆ ಅಥವಾ ತಪ್ಪಿದರೆ, ಅಥವಾ ಸುಳ್ಳು ಹೆಸರು ಅಥವಾ ವಿಳಾಸವನ್ನು ನೀಡಿದ್ದಾನೆಂದು ಅವನ ಬಗ್ಗೆ ಆ ಪೊಲೀಸ್ ಅಧಿಕಾರಿಯು ಯುಕ್ತವಾಗಿ ಸಂದೇಹಪಟ್ಟರೆ, ಆ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ಅವನನ್ನು ದಸ್ತಗಿರಿ ಮಾಡಬಹುದು.

**127ಎ. ಕಿರುಹೊತ್ತಿಗೆಗಳು, ಭಿತ್ತಿಪತ್ರಗಳು, ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧಗಳು :–** (1) ಯಾವ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರದ ಮೇಲೆ ಅದರ ಮುದ್ರಕ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸಗಳು ಇರುವುದಿಲ್ಲವೋ ಅವುಗಳನ್ನು ಯಾವನೇ ವ್ಯಕ್ತಿಯು ಮುದ್ರಿಸತಕ್ಕುದಲ್ಲ ಅಥವಾ ಪ್ರಕಟಿಸತಕ್ಕುದಲ್ಲ, ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕುದಲ್ಲ.

(2) ಯಾವನೇ ವ್ಯಕ್ತಿಯು –

(ಎ) ಯಾವುದೇ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರದ ಪ್ರಕಾಶಕನ ಗುರುತಿನ ಬಗ್ಗೆ ಅವನು ಸಹಿ ಹಾಕಿದ ಮತ್ತು ಅವನಿಗೆ ವೈಯಕ್ತಿಕವಾಗಿ ಗೊತ್ತಿರುವ ಇಬ್ಬರು ವ್ಯಕ್ತಿಗಳು ಅನುಪ್ರಮಾಣಿಸಿದ ಘೋಷಣೆಯನ್ನು ಅವನು ದ್ವಿಪ್ರತಿಯಲ್ಲಿ ಮುದ್ರಕನಿಗೆ ಕೊಟ್ಟಿರುವ ಹೊರತು ; ಮತ್ತು

(ಬಿ) ಆ ದಸ್ತಾವೇಜನ್ನು ಮುದ್ರಿಸಿದ ತರುವಾಯ ಯುಕ್ತ ಕಾಲದೊಳಗೆ ಮುದ್ರಕನು, ಘೋಷಣೆಯ ಒಂದು ಪ್ರತಿಯನ್ನು, ದಸ್ತಾವೇಜಿನ ಒಂದು ಪ್ರತಿಯೊಂದಿಗೆ,–

(i) ಅದು ರಾಜ್ಯದ ರಾಜಧಾನಿಯಲ್ಲಿ ಮುದ್ರಿತವಾಗಿರುವಲ್ಲಿ, ಮುಖ್ಯ ಚುನಾವಣಾ ಅಧಿಕಾರಿಗೆ, ಮತ್ತು

(ii) ಇತರೆ ಯಾವುದೇ ಸಂದರ್ಭದಲ್ಲಿ, ಅದು ಯಾವ ಜಿಲ್ಲೆಯಲ್ಲಿ ಮುದ್ರಿತವಾಗಿರುತ್ತದೋ, ಆ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿರುವ ಹೊರತು, ಯಾವುದೇ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರವನ್ನು ಮುದ್ರಿಸತಕ್ಕುದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕುದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ದಸ್ತಾವೇಜನ್ನು ಕೈಯಿಂದ ಪ್ರತಿ ಮಾಡುವುದನ್ನು ಹೊರತುಪಡಿಸಿ, ಅದರ ಬಹುಪ್ರತಿಗಳನ್ನು ತೆಗೆಯುವ ಯಾವುದೇ ಕಾರ್ಯ ವಿಧಾನವನ್ನು ಮುದ್ರಣವೆಂದು ಭಾವಿಸತಕ್ಕುದು ಮತ್ತು "ಮುದ್ರಕ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕುದು ; ಮತ್ತು

(ಬಿ) "ಚುನಾವಣೆ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರ" ಎಂದರೆ ಒಬ್ಬ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಗುಂಪಿನ ಚುನಾವಣೆಯನ್ನು ಅಭಿವೃದ್ಧಿಗೊಳಿಸುವ ಅಥವಾ ಅದರ ಮೇಲೆ ಪ್ರತಿಕೂಲ ಪ್ರಭಾವ ಬೀರುವ ಉದ್ದೇಶಕ್ಕಾಗಿ ಹಂಚಲಾದ ಯಾವುದೇ ಮುದ್ರಿತ ಕಿರುಹೊತ್ತಿಗೆ, ಕರಪತ್ರ ಅಥವಾ ಇತರ ದಸ್ತಾವೇಜು ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಪ್ರಕಟಣೆ ಪತ್ರ ಅಥವಾ ಭಿತ್ತಿಪತ್ರ, ಆದರೆ ಅದು ಒಂದು ಚುನಾವಣಾ ಸಭೆಯ ದಿನಾಂಕ, ಕಾಲ, ಸ್ಥಳ ಮತ್ತು ಇತರ ವಿವರಗಳನ್ನು ಅಥವಾ ಚುನಾವಣಾ ಏಜೆಂಟರು ಅಥವಾ ಕಾರ್ಯಕರ್ತರಿಗೆ ನೀಡುವ ಮಾಮೂಲು ಅನುದೇಶಗಳನ್ನು ಮಾತ್ರವೇ ಪ್ರಕಟಿಸುವ ಯಾವುದೇ ಕರಪತ್ರ, ಪ್ರಕಟಣ ಪತ್ರ ಅಥವಾ ಭಿತ್ತಿಪತ್ರಗಳನ್ನು ಒಳಗೊಳ್ಳುವುದಿಲ್ಲ.

(4) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**128. ಮತದಾನದ ರಹಸ್ಯವನ್ನು ಕಾಪಾಡುವುದು :–** (1) ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕುದು ಮತ್ತು ಹಾಗೆ ಕಾಪಾಡುವಲ್ಲಿ ನೆರವಾಗತಕ್ಕುದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸಲು ಉದ್ದೇಶಿಸುವ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕುದಲ್ಲ:

ಪರಂತು, ಈ ಉಪಪ್ರಕರಣದ ಉಪಬಂಧಗಳು, ರಾಜ್ಯ ಸಭೆಯ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ನಡೆಸುವ ಚುನಾವಣೆಯಲ್ಲಿ ಅಂಥ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಅಂಥ ಅಧಿಕಾರಿಗೆ, ಗುಮಾಸ್ತನಿಗೆ ಏಜೆಂಟ್‌ಗೆ ಅಥವಾ ಇತರ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**129. ಅಧಿಕಾರಿಗಳು, ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯ ನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು :–** (1) ಚುನಾವಣೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಅಥವಾ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಪೀಠಾಸೀನ ಅಧಿಕಾರಿ ಅಥವಾ ಮತದಾನ ಅಧಿಕಾರಿ, ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯ ನಿರ್ವಹಿಸಲು ಚುನಾವಣಾಧಿಕಾರಿ ಅಥವಾ ಪೀಠಾಸೀನ ಅಧಿಕಾರಿಯಿಂದ ನೇಮಕಗೊಂಡಿರುವ ಒಬ್ಬ ಅಧಿಕಾರಿ ಅಥವಾ ಗುಮಾಸ್ತನಾಗಿರುವ ಯಾವನೇ ವ್ಯಕ್ತಿಯು ಚುನಾವಣೆ ನಡೆಸುವಲ್ಲಿ ಅಥವಾ ಅವರ ವ್ಯವಸ್ಥೆಯಲ್ಲಿ ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ (ಮತ ನೀಡುವುದರ ಹೊರತಾಗಿ) ಯಾವುದೇ ಕಾರ್ಯವನ್ನು ಮಾಡತಕ್ಕುದಲ್ಲ.

(2) ಮೇಲೆ ಹೇಳಲಾದಂಥ ಯಾವನೇ ವ್ಯಕ್ತಿಯು, ಮತ್ತು ಪೊಲೀಸ್ ಪಡೆಯ ಯಾವನೇ ಸದಸ್ಯನು –

(ಎ) ಚುನಾವಣೆಯಲ್ಲಿ ತನ್ನ ಮತವನ್ನು ನೀಡುವಂತೆ ಯಾವನೇ ವ್ಯಕ್ತಿಯನ್ನು ಪ್ರೇರೇಪಿಸಲು ; ಅಥವಾ

(ಬಿ) ಚುನಾವಣೆಯಲ್ಲಿ ತನ್ನ ಮತವನ್ನು ನೀಡದಿರುವಂತೆ ಯಾವನೇ ವ್ಯಕ್ತಿಯನ್ನು ವಿಮುಖಗೊಳಿಸಲು ; ಅಥವಾ

(ಸಿ) ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಯಾವನೇ ವ್ಯಕ್ತಿಯ ಮತದಾನದ ಮೇಲೆ ಪ್ರಭಾವ ಬೀರಲು

– ಪ್ರಯತ್ನಿಸತಕ್ಕದಲ್ಲ.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(4) (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದು.

**130. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಮತ ಕೋರಿಕೆಯ ನಿಷೇಧ :–** (1) ಯಾವುವೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಂದು ಯಾವನೇ ವ್ಯಕ್ತಿಯು ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದ ಒಂದು ನೂರು ಮೀಟರ್ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕದಲ್ಲ, ಎಂದರೆ :–

(ಎ) ಮತಗಳ ಕೋರಿಕೆ ; ಅಥವಾ

(ಬಿ) ಯಾವನೇ ಮತದಾರನ ಮತವನ್ನು ಯಾಚಿಸುವುದು ; ಅಥವಾ

(ಸಿ) ಯಾವನೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡದಂತೆ ಯಾವನೇ ಮತದಾರನನ್ನು ಪ್ರೇರಿಸುವುದು ; ಅಥವಾ

(ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾವನೇ ಮತದಾರನನ್ನು ಪ್ರೇರಿಸುವುದು ; ಅಥವಾ

(ಇ) ಚುನಾವಣೆಗೆ ಸಂಬಂಧಿಸಿದ (ಅಧಿಕೃತ ನೋಟೀಸಿನ ಹೊರತು) ಯಾವುದೇ ನೋಟೀಸು ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದು.

**131. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ :–** (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಂದು ಯಾವನೇ ವ್ಯಕ್ತಿಯು,–

ಮತದಾನ ಮಾಡಲು ಮತದಾನ ಕೇಂದ್ರಕ್ಕೆ ಭೇಟಿ ನೀಡುವ ಯಾವನೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವಂತೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರತರಾಗಿರುವ ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟಾಗುವಂತೆ,–

(ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾನವ ಧ್ವನಿಯನ್ನು ವರ್ಧಿಸುವುದಕ್ಕಾಗಿ ಅಥವಾ ಪುನರುಚ್ಚರಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂತಹ ಯಾವುದೇ ಸಲಕರಣೆಯನ್ನು ಬಳಸತಕ್ಕದಲ್ಲ ಅಥವಾ ನಡೆಸತಕ್ಕದಲ್ಲ ; ಅಥವಾ

(ಬಿ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗತಕ್ಕದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಂಥ ಉಲ್ಲಂಘನೆಗೆ ಉದ್ದೇಶ ಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾವನೇ ವ್ಯಕ್ತಿಯು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(3) ಯಾವನೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿದ್ದಾನೆ ಅಥವಾ ಮಾಡಿದ್ದಾನೆ ಎಂದು ನಂಬಲು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯು ಕಾರಣವನ್ನು ಹೊಂದಿದ್ದರೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅವನು ಯಾವನೇ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅನಂತರ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದು.

(4) ಯಾವನೇ ಪೊಲೀಸ್ ಅಧಿಕಾರಿಯು (1)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವೆನಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಬಳಸಿದ ಯಾವುದೇ ಸಲಕರಣೆಯನ್ನು ಅಭಿಗ್ರಹಿಸಬಹುದು.

**132. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ :-** (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಸ್ವತಃ ದುರ್ವರ್ತಿಸುವ ಅಥವಾ ಪೀಠಾಸೀನ ಅಧಿಕಾರಿಯ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ಯಾವನೇ ವ್ಯಕ್ತಿಯನ್ನು ಪೀಠಾಸೀನ ಅಧಿಕಾರಿಯು ಅಥವಾ ಕರ್ತವ್ಯನಿರತ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ಈ ಬಗ್ಗೆ ಅಂಥ ಪೀಠಾಸೀನ ಅಧಿಕಾರಿಯು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಹಾಕಬಹುದು.

(2) (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾವನೇ ಮತದಾರನಿಗೆ ಆ ಕೇಂದ್ರದಲ್ಲಿ ಮತದಾನ ಮಾಡುವ ಅವಕಾಶವಿಲ್ಲದ ಹಾಗೆ ಅವನನ್ನು ತಡೆಗಟ್ಟುವಂತೆ ಚಲಾಯಿಸತಕ್ಕುದಲ್ಲ.

(3) ಒಂದು ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾವನೇ ವ್ಯಕ್ತಿಯು, ಪೀಠಾಸೀನ ಅಧಿಕಾರಿಯ ಅನುಮತಿ ಇಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(4) (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

**132ಎ. ಮತದಾನದ ಪ್ರಕ್ರಿಯೆಯನ್ನು ಪಾಲಿಸದಿರುವುದಕ್ಕೆ ದಂಡ :-** ಯಾವ ಮತದಾರನಿಗೆ ಮತಪತ್ರವನ್ನು ನೀಡಲಾಗಿದೆಯೋ ಆ ಯಾವನೇ ಮತದಾರನು ಮತದಾನಕ್ಕಾಗಿ ನಿಯಮಿಸಲಾಗಿರುವ ಪ್ರಕ್ರಿಯೆಯನ್ನು ಪಾಲಿಸಲು ನಿರಾಕರಿಸಿದರೆ, ಅವನಿಗೆ ನೀಡಿದ ಮತಪತ್ರವು ರದ್ದಿಯಾತಿಗೆ ಗುರಿಯಾಗತಕ್ಕುದು.

**133. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನುಬಾಹಿರವಾಗಿ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಅಥವಾ ದೊರಕಿಸಿಕೊಳ್ಳುವುದಕ್ಕೆ ದಂಡ :-** ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಅಥವಾ ಅದರ ಸಂಬಂಧದಲ್ಲಿ 123ನೇ ಪ್ರಕರಣದ (5)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವಂಥ ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕುದು.

**134. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು :-** (1) ಈ ಪ್ರಕರಣವು ಅನ್ವಯವಾಗುವ ಯಾವನೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಪದೀಯ ಕರ್ತವ್ಯದ ಉಲ್ಲಂಘನೆಯಲ್ಲಿ ಯಾವುದೇ ಕಾರ್ಯ ಅಥವಾ ಲೋಪದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(1ಎ) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

(2) ಮೇಲೆ ಹೇಳಿರುವ ಯಾವುದೇ ಅಂಥ ಕೃತ್ಯ ಅಥವಾ ಲೋಪದ ಸಂಬಂಧದಲ್ಲಿ ಹಾನಿ ಪರಿಹಾರಕ್ಕಾಗಿ ಯಾವನೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

(3) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ ಜಿಲ್ಲಾ ಚುನಾವಣಾಧಿಕಾರಿಗಳು, ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಪೀಠಾಸೀನ ಅಧಿಕಾರಿಗಳು, ಮತದಾನ ಅಧಿಕಾರಿಗಳು ಮತ್ತು ನಾಮನಿರ್ದೇಶನ ಪತ್ರಗಳ ಸ್ವೀಕಾರ ಅಥವಾ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವುದು, ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದು ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡಿರುವ ಯಾವನೇ ಇತರ ವ್ಯಕ್ತಿ; ಮತ್ತು "ಪದೀಯ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ತದನುಸಾರವಾಗಿ ಅರ್ಥೈಸತಕ್ಕುದು, ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಕರ್ತವ್ಯಗಳನ್ನು ಒಳಗೊಂಡಿರತಕ್ಕುದಲ್ಲ.

**134ಎ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಎಂದು ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರಿಗೆ ದಂಡ :-** ಸರ್ಕಾರದ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅಥವಾ ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಎಂದು ಕಾರ್ಯ ನಿರ್ವಹಿಸಿದರೆ ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**134ಬಿ. ಮತದಾನಕೇಂದ್ರಕ್ಕೆ ಅಥವಾ ಅದರ ಸಮೀಪಕ್ಕೆ ಆಯುಧ ಸಮೇತ ಹೋಗುವುದರ ನಿಷೇಧ:-** (1) ರಿಟರ್ನಿಂಗ್ ಆಫೀಸರ್, ಪೀಠಾಸೀನಾಧಿಕಾರಿ, ಮತದಾನ ಕೇಂದ್ರದಲ್ಲಿ ಕರ್ತವ್ಯದ ಮೇಲಿರುವ ಯಾರೇ ಪೊಲೀಸ್ ಅಧಿಕಾರಿ ಅಥವಾ ಆ ಮತದಾನ ಕೇಂದ್ರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನೇಮಕಗೊಂಡ ಯಾರೇ ಇತರ ವ್ಯಕ್ತಿಯ ಹೊರತು ಯಾರೇ ಇತರ ವ್ಯಕ್ತಿಯು

ಮತದಾನದ ದಿನದಂದು ಆಯುಧಗಳ ಅಧಿನಿಯಮ, 1959 (1959 ರ 54) – ಇದರಲ್ಲಿ ಪರಿಭಾಷಿಸಲಾದ ಯಾವುದೇ ವಿಧದ ಆಯುಧಗಳೊಂದಿಗೆ ಮತದಾನ ಕೇಂದ್ರದ ಸುತ್ತಮುತ್ತ ಹೋಗತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು (1) ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಆಯುಧಗಳ ಅಧಿನಿಯಮ, 1959 (1959 ರ 54) ರಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ, ಸದರಿ ಅಧಿನಿಯಮದಲ್ಲಿ ಪರಿಭಾಷಿಸಲಾಗಿರುವ ಆಯುಧಗಳು ಅವನ ಸ್ವಾಧೀನದಲ್ಲಿರುವುದು ಕಂಡುಬಂದರೆ ಅವು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅಂಥ ಆಯುಧಗಳಿಗೆ ಸಂಬಂಧಪಟ್ಟಂತೆ ನೀಡಲಾದ ಲೈಸೆನ್ಸನ್ನು ಆ ಅಧಿನಿಯಮದ 17 ನೇ ಪ್ರಕರಣದ ಮೇರೆಗೆ ರದ್ದುಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(4) (2)ನೇ ಉಪ–ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**135. ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ :–** (1) ಯಾವುದೇ ಚುನಾವಣೆಯಲ್ಲಿ ಮತದಾನ ಕೇಂದ್ರದಿಂದ ಮತಪತ್ರವನ್ನು ಅನಧಿಕೃತವಾಗಿ ತೆಗೆದುಕೊಂಡು ಹೋಗುವ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸುವ ಯಾವುದೇ ಅಂಥ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾವನೇ ವ್ಯಕ್ತಿಯು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಯಾವನೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವನ್ನು ಹೊಂದಿದ್ದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಆ ಮತದಾನ ಕೇಂದ್ರವನ್ನು ಬಿಡುವ ಮೊದಲು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಅವನನ್ನು ಪೊಲೀಸ್ ಅಧಿಕಾರಿಯು ಶೋಧನೆ ಮಾಡುವಂತೆ ಮಾಡಬಹುದು :

ಪರಂತು, ಒಬ್ಬ ಮಹಿಳೆಯನ್ನು ಶೋಧನೆ ಮಾಡುವುದು ಅವಶ್ಯವಿರುವಾಗ ಮತ್ತೊಬ್ಬ ಮಹಿಳೆಯಿಂದ ಶೋಧನೆಯನ್ನು ಕಟ್ಟುನಿಟ್ಟಾಗಿ ಸಭ್ಯತೆಯಿಂದ ನಡೆಸತಕ್ಕುದು.

(3) ಶೋಧನೆಯ ಬಳಿಕ ದಸ್ತಗಿರಿಯಾದ ವ್ಯಕ್ತಿಯ ಬಳಿ ಕಂಡುಬಂದ ಯಾವುದೇ ಮತಪತ್ರವನ್ನು, ಪೀಠಾಸೀನ ಅಧಿಕಾರಿಯು ಒಬ್ಬ ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕುದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿರುವಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕುದು.

(4) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

**135ಎ. ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ :–** (1) ಯಾವನೇ ವ್ಯಕ್ತಿಯು ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡಿದ್ದರೆ, ಅವನು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಮತ್ತು ಅಂಥ ಅಪರಾಧವನ್ನು ಸರ್ಕಾರಿ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯು ಮಾಡಿದರೆ, ಅವನು ಮೂರು ವರ್ಷಗಳಿಗೆ ಕಡಿಮೆ ಇಲ್ಲದ, ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

ವಿವರಣೆ :– ಈ ಉಪ ಪ್ರಕರಣದ ಮತ್ತು 20 ಬಿ ಪ್ರಕರಣದ ಉದ್ದೇಶಗಳಿಗಾಗಿ "ಮತಗಟ್ಟೆ ವಶಪಡಿಸಿಕೊಳ್ಳುವುದು" ಎಂಬುದು, ಇತರ ವಿಷಯಗಳ ಜೊತೆಗೆ, ಈ ಕೆಳಕಂಡ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ :–

(ಎ) ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ, ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಚುನಾವಣೆಗಳನ್ನು ಕ್ರಮಬದ್ಧವಾಗಿ ನಡೆಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಇತರ ಕಾರ್ಯ ಮಾಡುವುದು;

(ಬಿ) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಸ್ವಂತ ಬೆಂಬಲಿಗರು ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸುವುದು ಮತ್ತು ಇತರರು ತಮ್ಮ ಮತದಾನದ ಹಕ್ಕನ್ನು ಮುಕ್ತವಾಗಿ ಚಲಾಯಿಸದಂತೆ ತಡೆಯುವುದು ;

(ಸಿ) ಯಾವನೇ ಮತದಾರನನ್ನು ಬಲಪ್ರಯೋಗಿಸುವುದು ಅಥವಾ ಭಯ ಹುಟ್ಟಿಸುವುದು ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆದರಿಸುವುದು ಮತ್ತು ಅವನು ತನ್ನ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು ;

(ಡಿ) ಎಣಿಕೆ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆಯ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಮತಗಳನ್ನು ಕ್ರಮಬದ್ಧವಾಗಿ ಎಣಿಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಕಾರ್ಯವನ್ನು ಮಾಡುವುದು ;

(ಇ) ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು, ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯದ ಅಭಿವೃದ್ಧಿಗಾಗಿ ಮೇಲೆ ಹೇಳಿದ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಯಾವುವೇ ಅಂಥ ಚಟುವಟಿಕೆಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

(2) (1) ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**135ಬಿ. ಮತದಾನದ ದಿನದಂದು ನೌಕರರಿಗೆ ಸಂಬಳ ಸಹಿತ ರಜೆ ನೀಡುವುದು :-** (1) ಯಾವುದೇ ವ್ಯವಹಾರ, ವ್ಯಾಪಾರ, ಕೈಗಾರಿಕೋದ್ಯಮ ಅಥವಾ ಯಾವುದೇ ಇತರ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ಮತ್ತು ಲೋಕಸಭೆಗೆ ಅಥವಾ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಮತ ಹಾಕಲು ಹಕ್ಕು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ ಮತದಾನದ ದಿನದಂದು ರಜೆ ನೀಡತಕ್ಕದ್ದು.

(2) (1) ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಒಂದು ದಿನದ ರಜೆಯನ್ನು ಮಂಜೂರು ಮಾಡಿರುವ ಕಾರಣ ಅಂಥ ಯಾರೇ ವ್ಯಕ್ತಿಯ ಮಜೂರಿಯಲ್ಲಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ನಿಲ್ಲಿಸತಕ್ಕದ್ದಲ್ಲ ಮತ್ತು ಅಂಥ ದಿನಕ್ಕಾಗಿ ಅವನು ಸಾಮಾನ್ಯವಾಗಿ ಮಜೂರಿ ಪಡೆಯುವುದಿಲ್ಲ ಎಂಬ ಆಧಾರದ ಮೇಲೆ ಅಂಥ ವ್ಯಕ್ತಿಯನ್ನು ನಿಯೋಜಿಸಿಕೊಂಡಿದ್ದಾಗ್ಯೂ, ಅವನಿಗೆ ಆ ದಿವಸ ಒಂದು ದಿನದ ರಜೆಯನ್ನು ಮಂಜೂರು ಮಾಡಿರದಿದ್ದರೆ ಅವನು ಪಡೆಯಬಹುದಾಗಿದ್ದ ಮಜೂರಿಯನ್ನು ಅವನಿಗೆ ಸಂದಾಯ ಮಾಡತಕ್ಕದ್ದು.

(3) ನಿಯೋಜಕನು (1) ನೇ ಉಪ-ಪ್ರಕರಣದ ಅಥವಾ (2) ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅಂಥ ನಿಯೋಜಕನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(4) ಮತದಾರನು ನಿರತನಾಗಿರುವಂಥ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಅವನ ಗೈರುಹಾಜರಿಯಿಂದ ಅಪಾಯ ಅಥವಾ ಗಣನೀಯ ನಷ್ಟ ಉಂಟಾಗುವ ಸಂಭವವಿದ್ದರೆ ಅಂಥ ಯಾರೇ ಮತದಾರನಿಗೆ ಈ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

**135ಸಿ. ಮತದಾನದ ದಿನದಂದು ಮದ್ಯವನ್ನು ಮಾರಾಟ ಮಾಡದಿರುವುದು, ನೀಡದಿರುವುದು ಅಥವಾ ವಿತರಿಸದಿರುವುದು:-** (1) ಯಾವುದೇ ಮದ್ಯಸಾರಯುಕ್ತವಾದ, ಹುಳಿ ಹಿಡಿಸಿದ ಅಥವಾ ಮಾದಕ ಪಾನೀಯಗಳನ್ನು ಅಥವಾ ಅಂಥದೇ ಸ್ವರೂಪದ ಇತರ ದ್ರವ್ಯಗಳನ್ನು ಮತದಾನ ಪ್ರದೇಶದಲ್ಲಿನ ಯಾವುದೇ ಚುನಾವಣೆಗಾಗಿ ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯವು ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಆ ಮತದಾನ ಪ್ರದೇಶದಲ್ಲಿನ ಹೋಟೆಲು, ಆಹಾರ ಸೇವನಾ ಗೃಹಗಳು, ತಿಂಡಿ ತೀರ್ಥದ ಅಂಗಡಿ ಅಥವಾ ಯಾವುದೇ ಇತರ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾರಾಟ ಮಾಡತಕ್ಕದ್ದಲ್ಲ, ನೀಡತಕ್ಕದ್ದಲ್ಲ ಅಥವಾ ವಿತರಿಸತಕ್ಕದ್ದಲ್ಲ.

(2) (1) ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಒಬ್ಬ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ನಿರ್ಣೀತ ಅಪರಾಧಿಯಾಗಿರುವಲ್ಲಿ, ಅವನ ಸ್ವಾಧೀನದಲ್ಲಿ ಕಂಡುಬಂದ ಮದ್ಯಸಾರಯುಕ್ತವಾದ, ಹುಳಿ ಬರಿಸಿದ ಅಥವಾ ಮಾದಕ ಪಾನೀಯಗಳು ಅಥವಾ ಅಂಥದ್ದೇ ಸ್ವರೂಪದ ಇತರ ದ್ರವ್ಯಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

**136. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು :-** (1) ಯಾವುದೇ ಚುನಾವಣೆಯಲ್ಲಿ ಒಬ್ಬ ವ್ಯಕ್ತಿಯು,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ ; ಅಥವಾ

(ಬಿ) ಒಬ್ಬ ಚುನಾವಣಾಧಿಕಾರಿಯ ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ ; ಅಥವಾ

(ಸಿ) ಯಾವುದೇ ಮತಪತ್ರ ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಚಿಹ್ನೆ ಅಥವಾ ಗುರುತಿನ ಯಾವುದೇ ಘೋಷಣೆ ಅಥವಾ ಅಂಚೆ ಮತಪತ್ರದ ಮೂಲಕ ಮತದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಉಪಯೋಗಿಸಿರುವ ಅಧಿಕೃತ ಲಕೋಟೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ ; ಅಥವಾ

(ಡಿ) ಯುಕ್ತ ಪ್ರಾಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಯಿಂದ ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆ ; ಅಥವಾ

(ಇ) ಕಾನೂನಿನ ಮೂಲಕ ತಾನು ಹಾಗೆ ಹಾಕಲು ಅಧಿಕೃತನಾಗಿರುವ ಮತಪತ್ರವನ್ನು ಹೊರತುಪಡಿಸಿ ಇತರ ಯಾವುದೇ ವಸ್ತುವನ್ನು ಯಾವುದೇ ಮತಪೆಟ್ಟಿಗೆಯಲ್ಲಿ ಮೋಸದಿಂದ ಹಾಕಿದರೆ ; ಅಥವಾ

(ಎಫ್) ಚುನಾವಣಾ ಉದ್ದೇಶಗಳಿಗಾಗಿ ಆಗ ಬಳಕೆಯಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ಯುಕ್ತ ಪ್ರಾಧಿಕಾರವಿಲ್ಲದೆ ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ ; ಅಥವಾ

(ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಯುಕ್ತ ಪ್ರಾಧಿಕಾರವಿಲ್ಲದೆ ಮೇಲೆ ಹೇಳಿದ ಯಾವುದೇ ಕೃತ್ಯಗಳನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುವೇ ಅಂಥ ಕೃತ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ಅದನ್ನು ದುಷ್ಪ್ರೇರಿಸಿದರೆ

- ಅವನು ಚುನಾವಣಾ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕುದು.

(2) ಈ ಪ್ರಕರಣದ ಮೇರೆಗಿನ ಚುನಾವಣಾ ಅಪರಾಧದ ಬಗ್ಗೆ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು,-

(ಎ) ಮತದಾನ ಕೇಂದ್ರದಲ್ಲಿ ಚುನಾವಣಾಧಿಕಾರಿ, ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಪೀಠಾಸೀನ ಅಧಿಕಾರಿ ಅಥವಾ ಚುನಾವಣೆಗೆ ಸಂಬಂಧಿಸಿದ ಪದೀಯ ಕರ್ತವ್ಯದ ಮೇಲೆ ನಿಯೋಜಿತನಾಗಿರುವ ಯಾವನೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು ;

(ಬಿ) ಯಾವನೇ ಇತರ ವ್ಯಕ್ತಿಯಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ ಮತಗಳ ಎಣಿಕೆಯೂ ಸೇರಿದಂತೆ ಚುನಾವಣೆ ನಡೆಸುವುದರಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಭಾಗವಹಿಸುವುದು ಒಬ್ಬ ವ್ಯಕ್ತಿಯ ಕರ್ತವ್ಯವಾಗಿದ್ದರೆ, ಅವನು ಪದೀಯ ಕರ್ತವ್ಯದ ಮೇಲಿರುವನೆಂದು ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಪಯೋಗಿಸಿದ್ದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯ ಜವಾಬ್ದಾರನಾಗಿರುವನೆಂದು ಭಾವಿಸತಕ್ಕುದು, ಆದರೆ "ಪದೀಯ ಕರ್ತವ್ಯ" ಎಂಬ ಪದಾವಳಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಂಡಿರತಕ್ಕುದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕುದು.

**137.** (ನಿರಸನಗೊಳಿಸಲಾಗಿದೆ).

**138.** (ನಿರಸನಗೊಳಿಸಲಾಗಿದೆ).

## ಭಾಗ - VIII

## ಅನರ್ಹತೆಗಳು

**139-145.** (ಅಧ್ಯಾಯಗಳು I ರಿಂದ III - ಇವುಗಳನ್ನು ನಿರಸನಗೊಳಿಸಲಾಗಿದೆ).

ಅಧ್ಯಾಯ - **IV** - ಸದಸ್ಯರ ಅನರ್ಹತೆಗಳ ಬಗ್ಗೆ ವಿಚಾರಣೆಗಳನ್ನು ನಡೆಸುವ ಸಂಬಂಧದಲ್ಲಿ ಚುನಾವಣಾ ಆಯೋಗದ ಅಧಿಕಾರಗಳು.

**146. ಚುನಾವಣಾ ಆಯೋಗದ ಅಧಿಕಾರಗಳು :-** (1) 103ನೇ ಅನುಚ್ಛೇದದ ಮೇರೆಗೆ ಅಥವಾ, ಸಂದರ್ಭಾನುಸಾರ, ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, 1963 (1963ರ 20)ರ 14ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರಪತಿಗೆ, ಅಥವಾ 192ನೇ ಅನುಚ್ಛೇದದ ಮೇರೆಗೆ ರಾಜ್ಯಪಾಲನಿಗೆ ಯಾವುದೇ ಅಭಿಪ್ರಾಯವನ್ನು ನೀಡುವ ಸಂಬಂಧದಲ್ಲಿ, ಚುನಾವಣಾ ಆಯೋಗವು ಒಂದು ವಿಚಾರಣೆಯನ್ನು ನಡೆಸುವುದು ಅವಶ್ಯ ಅಥವಾ ಸರಿಯಾದುದೆಂದು ಪರ್ಯಾಲೋಚಿಸುವಲ್ಲಿ ಮತ್ತು ಸಂಬಂಧಪಟ್ಟ ಪಕ್ಷಕಾರರು ಅಂಥ ವಿಚಾರಣೆಯಲ್ಲಿ ಸ್ವಪ್ರೇರಣೆಯಿಂದ ದಾಖಲು ಮಾಡಿರುವ ಶಪಥ ಪತ್ರಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳ ಆಧಾರದ ಮೇಲೆ ವಿಚಾರಣೆ ನಡೆಸುತ್ತಿರುವ ವಿಷಯದ ಬಗ್ಗೆ ಚುನಾವಣಾ ಆಯೋಗವು ನಿರ್ಣಾಯಕ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲವೆಂದು ಅದಕ್ಕೆ ಮನದಟ್ಟಾಗುವಲ್ಲಿ, ಆಯೋಗವು, ಅಂಥ ವಿಚಾರಣೆಯ ಉದ್ದೇಶಗಳಿಗಾಗಿ, ಈ ಕೆಳಕಂಡ

ವಿಷಯಗಳ ಸಂಬಂಧದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯನ್ನು ಅಧಿವಿಚಾರಿಸುವಾಗ ಹೊಂದಿರುವ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನೇ ಹೊಂದಿರತಕ್ಕುದು, ಎಂದರೆ :-

(ಎ) ಯಾವನೇ ವ್ಯಕ್ತಿಗೆ ಸಮನು ನೀಡುವುದು ಮತ್ತು ಹಾಜರಾತಿಯನ್ನು ಒತ್ತಾಯಿಸುವುದು, ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು ;

(ಬಿ) ಸಾಕ್ಷ್ಯವಾಗಿ ಹಾಜರುಪಡಿಸಬಹುದಾದ ಯಾವುದೇ ದಸ್ತಾವೇಜು ಅಥವಾ ಇತರ ಮುಖ್ಯ ವಸ್ತುವನ್ನು ಪ್ರಕಟಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಗೊಳಿಸುವುದು ;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು ;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು ;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು.

(2) ಆಯೋಗವು, ಯಾವನೇ ವ್ಯಕ್ತಿಯನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಆ ವ್ಯಕ್ತಿಯು ಕ್ಲೇಮು ಮಾಡಬಹುದಾದ ಯಾವುದೇ ವಿಶೇಷಾಧಿಕಾರಕ್ಕೆ ಒಳಪಟ್ಟು, ಆಯೋಗದ ಅಭಿಪ್ರಾಯದಲ್ಲಿ ಆ ವಿಚಾರಣೆಯ ವಸ್ತು ವಿಷಯಕ್ಕೆ ಉಪಯುಕ್ತವಾಗಬಹುದಾದ ಅಥವಾ ಸುಸಂಗತವಾಗಬಹುದಾದಂಥ ಸಂಗತಿಗಳು ಅಥವಾ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸುವ ಅಧಿಕಾರವನ್ನು ಸಹ ಹೊಂದಿರತಕ್ಕುದು.

(3) ಆಯೋಗವನ್ನು ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕುದು ಮತ್ತು ಭಾರತ ದಂಡ ಸಂಹಿತೆ (1860ರ 45)ಯ 175ನೇ ಪ್ರಕರಣ, 178ನೇ ಪ್ರಕರಣ, 179ನೇ ಪ್ರಕರಣ, 180ನೇ ಪ್ರಕರಣ ಅಥವಾ 228ನೇ ಪ್ರಕರಣದಲ್ಲಿ ವಿವರಿಸಲಾದಂತೆ ಯಾವುದೇ ಅಂಥ ಅಪರಾಧವನ್ನು ಆಯೋಗದ ಎದುರಿನಲ್ಲಿ ಅಥವಾ ಸಮ್ಮುಖದಲ್ಲಿ ಮಾಡಿದಾಗ, ಆಯೋಗವು ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5) ರಲ್ಲಿ ಉಪಬಂಧಿಸಿರುವಂತೆ ಅಪರಾಧ ಘಟಿಸುವ ಸಂಗತಿಗಳನ್ನು ಮತ್ತು ಆಪಾದಿತನ ಹೇಳಿಕೆಯನ್ನು ದಾಖಲು ಮಾಡಿದ ತರುವಾಯ ಆ ಪ್ರಕರಣವನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಬ್ಬ ಮ್ಯಾಜಿಸ್ಟ್ರೇಟನಿಗೆ ಅದನ್ನು ಕಳುಹಿಸಿ ಕೊಡಬಹುದು ಮತ್ತು ಯಾವ ಮ್ಯಾಜಿಸ್ಟ್ರೇಟನಿಗೆ ಈ ಯಾವುದೇ ಅಂಥ ಪ್ರಕರಣವನ್ನು ಕಳುಹಿಸಲಾಗಿದೆಯೋ ಅವನು, ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 482ನೇ ಪ್ರಕರಣದ ಮೇರೆಗೆ ತನಗೆ ಆ ಪ್ರಕರಣವನ್ನು ಕಳುಹಿಸಲಾಗಿದ್ದಿದ್ದರೆ ಹೇಗೋ ಹಾಗೆ ಆಪಾದಿತನ ವಿರುದ್ಧ ದೂರನ್ನು ಸುನಾವಣೆ ಮಾಡಲು ಮುಂದುವರಿಯತಕ್ಕುದು.

(4) ಆಯೋಗದ ಮುಂದಿರುವ ಯಾವುದೇ ವ್ಯವಹರಣೆಯನ್ನು ಭಾರತ ದಂಡ ಸಂಹಿತೆ, 1860 (1860ರ 45)ರ 193ನೇ ಪ್ರಕರಣ ಮತ್ತು 228ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯೆಂಬುದಾಗಿ ಭಾವಿಸತಕ್ಕುದು.

**146ಎ. ಚುನಾವಣಾ ಆಯೋಗಕ್ಕೆ ವ್ಯಕ್ತಿಗಳು ನೀಡಿದ ಹೇಳಿಕೆಗಳು :-** ಚುನಾವಣಾ ಆಯೋಗದ ಮುಂದೆ ಸಾಕ್ಷ್ಯವನ್ನು ಕೊಡುವ ಕ್ರಮದಲ್ಲಿ ಒಬ್ಬ ವ್ಯಕ್ತಿಯು ನೀಡಿದ ಯಾವುದೇ ಹೇಳಿಕೆಯು, ಅಂಥ ಹೇಳಿಕೆಯ ಮೂಲಕ ಸುಳ್ಳು ಸಾಕ್ಷ್ಯವನ್ನು ನೀಡಿರುವುದಕ್ಕಾಗಿನ ಪ್ರಾಸಿಕ್ಯೂಷನ್ ಹೊರತು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಅವನನ್ನು ಗುರಿಪಡಿಸತಕ್ಕುದಲ್ಲ ಅಥವಾ ಆ ವ್ಯವಹರಣೆಯಲ್ಲಿ ಅದನ್ನು ಅವನ ವಿರುದ್ಧ ಉಪಯೋಗಿಸತಕ್ಕುದಲ್ಲ :

ಪರಂತು, ಆ ಹೇಳಿಕೆಯು –

(ಎ) ಉತ್ತರಿಸುವಂತೆ ಆಯೋಗವು ಅವನನ್ನು ಅಗತ್ಯಪಡಿಸಿರುವ ಪ್ರಶ್ನೆಗೆ ಉತ್ತರವಾಗಿ ನೀಡಿದುದಾಗಿರಬೇಕು; ಅಥವಾ

(ಬಿ) ವಿಚಾರಣೆಯ ವಸ್ತು ವಿಷಯಕ್ಕೆ ಸುಸಂಗತವಾಗಿರಬೇಕು.

**146ಬಿ. ಚುನಾವಣಾ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ :-** ಚುನಾವಣಾ ಆಯೋಗವು, (ಅದರ ಉಪವೇಶನಗಳ ಸ್ಥಳಗಳು ಮತ್ತು ಸಮಯವನ್ನು ನಿಗದಿಪಡಿಸುವುದು ಮತ್ತು ಉಪವೇಶನವು ಬಹಿರಂಗವಾಗಿರಬೇಕೆ ಅಥವಾ ಏಕಾಂತವಾಗಿರಬೇಕೆ ಎಂಬುದನ್ನು ತೀರ್ಮಾನಿಸುವುದೂ ಸೇರಿದಂತೆ) ಅದರ ಸ್ವಂತ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕುದು.

**146ಸಿ. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ :-** ಈ ಅಧ್ಯಾಯದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಆದೇಶದ ಹಿಂದೆ ಹೇಳಿದ ಉಪಬಂಧಗಳ ಅನುಸಾರವಾಗಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಅಥವಾ ಆಯೋಗವು ಸಂದರ್ಭಾನುಸಾರ ರಾಷ್ಟ್ರಪತಿಗೆ ಅಥವಾ ರಾಜ್ಯಪಾಲನಿಗೆ ಯಾವುದೇ ಅಭಿಪ್ರಾಯವನ್ನು ನೀಡಿರುವ ಸಂಬಂಧದಲ್ಲಿ ಅಥವಾ ಅಂಥ ಯಾವುದೇ ಅಭಿಪ್ರಾಯ, ಕಾಗದಪತ್ರ ಅಥವಾ ವ್ಯವಹರಣೆಗಳನ್ನು ಆಯೋಗದ ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ಪ್ರಕಟಿಸುವುದರ ಸಂಬಂಧದಲ್ಲಿ ಆಯೋಗದ ಅಥವಾ ಆಯೋಗದ ನಿರ್ದೇಶನಗಳ ಮೇರೆಗೆ ಕಾರ್ಯ ಮಾಡುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶ ಇರತಕ್ಕುದಲ್ಲ.

## ಭಾಗ - IX

## ಉಪ ಚುನಾವಣೆಗಳು

**147. ರಾಜ್ಯಸಭೆಯಲ್ಲಿ ಆಕಸ್ಮಿಕ ಖಾಲಿ ಸ್ಥಾನಗಳು :-** (1) ರಾಜ್ಯಸಭೆಗೆ ಆಯ್ಕೆಯಾದ ಸದಸ್ಯನ ಪದಾವಧಿಯು ಮುಕ್ತಾಯಗೊಳ್ಳುವ ಮುಂಚೆ ಅವನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆಯೆಂಬುದಾಗಿ ಘೋಷಿಸಿದಾಗ ಅಥವಾ ರಾಜ್ಯ ಸಭೆಗೆ ಅವನ ಆಯ್ಕೆಯು ಶೂನ್ಯವೆಂದು ಘೋಷಿತವಾದಾಗ, ಚುನಾವಣಾ ಆಯೋಗವು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು, ಸಂದರ್ಭಾನುಸಾರ ವಿಧಾನಸಭೆಯ ಚುನಾಯಿತ ಸದಸ್ಯರನ್ನು ಅಥವಾ ಸಂಬಂಧಪಟ್ಟ ಚುನಾಯಕ ಗಣದ ಸದಸ್ಯರನ್ನು ಕೇಳಿಕೊಳ್ಳಬಹುದು ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳು ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

(2) ಸಂವಿಧಾನದ (ಏಳನೆಯ ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭದ ದಿನಾಂಕದ ತರುವಾಯ, ಆದಷ್ಟು ಬೇಗನೆ ಅಸ್ಸಾಂ, ಒರಿಸ್ಸಾ ಮತ್ತು ಉತ್ತರಪ್ರದೇಶ ರಾಜ್ಯಗಳಿಗೆ ಮತ್ತು ದೆಹಲಿ, ಹಿಮಾಚಲ ಪ್ರದೇಶ ಮತ್ತು ಮಣಿಪುರ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಸ್ಥಾನಗಳಲ್ಲಿ ಆ ದಿನಾಂಕದಂದು ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಉಪ ಚುನಾವಣೆಗಳನ್ನು ನಡೆಸತಕ್ಕುದು.

**148.** (ನಿರಸನಗೊಳಿಸಲಾಗಿದೆ).

**149. ಲೋಕಸಭೆಯಲ್ಲಿನ ಆಕಸ್ಮಿಕ ಖಾಲಿಸ್ಥಾನಗಳು :-** (1) ಲೋಕಸಭೆಗೆ ಆಯ್ಕೆಯಾದ ಒಬ್ಬ ಸದಸ್ಯನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆಯೆಂದು ಘೋಷಿಸಿದಾಗ ಅಥವಾ ಲೋಕಸಭೆಗೆ ಅವನ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಿತವಾದಾಗ, ಚುನಾವಣಾ ಆಯೋಗವು, (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು ಸಂಬಂಧಪಟ್ಟ ಸಂಸದೀಯ ಚುನಾವಣಾ ಕ್ಷೇತ್ರವನ್ನು ಕೇಳಿಕೊಳ್ಳತಕ್ಕುದು, ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

(2) ಹಾಗೆ ಉಂಟಾದ ಖಾಲಿ ಸ್ಥಾನವು, ಅನುಸೂಚಿತ ಜಾತಿಗಳಿಗಾಗಿನ ಅಥವಾ ಯಾವುದೇ ಅನುಸೂಚಿತ ಬುಡಕಟ್ಟುಗಳಿಗಾಗಿನ ಯಾವುದೇ ಅಂಥ ಚುನಾವಣಾ ಕ್ಷೇತ್ರದಲ್ಲಿ ಮೀಸಲಿಟ್ಟಿರುವ ಖಾಲಿ ಸ್ಥಾನವಾಗಿದ್ದರೆ, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ಆ ಸ್ಥಾನಕ್ಕೆ ಆಯ್ಕೆಗೊಳ್ಳುವ ವ್ಯಕ್ತಿಯು ಸಂದರ್ಭಾನುಸಾರ ಅನುಸೂಚಿತ ಜಾತಿಗಳು ಅಥವಾ ಅಂಥ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವನಾಗಿರಲೇಬೇಕೆಂದು ನಿರ್ದಿಷ್ಟಪಡಿಸತಕ್ಕುದು.

**150. ರಾಜ್ಯ ವಿಧಾನಸಭೆಗಳಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು :-** (1) ರಾಜ್ಯ ವಿಧಾನಸಭೆಗೆ ಆಯ್ಕೆಯಾದ ಸದಸ್ಯನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆ ಎಂದು ಘೋಷಿಸಿದಾಗ ಅಥವಾ ವಿಧಾನಸಭೆಗೆ ಅವನು ಆಯ್ಕೆಯಾದುದು ಶೂನ್ಯವೆಂದು ಘೋಷಿಸಿದಾಗ, ಚುನಾವಣಾ ಆಯೋಗವು, (2)ನೇ ಉಪಪ್ರಕರಣಕ್ಕೊಳಪಟ್ಟು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು ಸಂಬಂಧಪಟ್ಟ ವಿಧಾನಸಭಾ ಚುನಾವಣಾ ಕ್ಷೇತ್ರವನ್ನು ಕೇಳಿಕೊಳ್ಳತಕ್ಕುದು, ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

(2) ಹಾಗೆ ಉಂಟಾದ ಖಾಲಿ ಸ್ಥಾನವು ಅನುಸೂಚಿತ ಜಾತಿಗಳಿಗಾಗಿನ ಅಥವಾ ಯಾವುದೇ ಅನುಸೂಚಿತ ಬುಡಕಟ್ಟುಗಳಿಗಾಗಿನ ಅಂಥ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ಮೀಸಲಿಟ್ಟಿರುವ ಖಾಲಿ ಸ್ಥಾನವಾಗಿದ್ದರೆ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ಆ ಸ್ಥಾನಕ್ಕೆ ಆಯ್ಕೆಗೊಳ್ಳುವ ವ್ಯಕ್ತಿಯು ಸಂದರ್ಭಾನುಸಾರ ಅನುಸೂಚಿತ ಜಾತಿ ಅಥವಾ ಅಂಥ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವನಾಗಿರಲೇಬೇಕೆಂದು ನಿರ್ದಿಷ್ಟಪಡಿಸತಕ್ಕುದು.

**151. ರಾಜ್ಯ ವಿಧಾನಪರಿಷತ್ತಿನಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು :-** ರಾಜ್ಯ ವಿಧಾನ ಪರಿಷತ್ತಿಗೆ ಆಯ್ಕೆಯಾದ ಒಬ್ಬ ಸದಸ್ಯನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅವನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆ ಎಂದು ಘೋಷಿಸಿದಾಗ ಅಥವಾ ವಿಧಾನ ಪರಿಷತ್ತಿಗೆ ಅವನು ಆಯ್ಕೆಯಾದುದು ಶೂನ್ಯವೆಂದು ಘೋಷಿಸಿದಾಗ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು ಸಂದರ್ಭಾನುಸಾರ ಸಂಬಂಧಪಟ್ಟ ವಿಧಾನ ಪರಿಷತ್ತಿನ

ಚುನಾವಣಾ ಕ್ಷೇತ್ರವನ್ನು ಅಥವಾ ರಾಜ್ಯ ವಿಧಾನಸಭೆಯ ಸದಸ್ಯರನ್ನು ಕೇಳಿಕೊಳ್ಳತಕ್ಕುದು ; ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

**151ಎ. 147, 149, 150 ಮತ್ತು 151 ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಕಾಲ ಪರಿಮಿತಿ :-** 147 ನೇ ಪ್ರಕರಣ, 149 ನೇ ಪ್ರಕರಣ, 150 ನೇ ಪ್ರಕರಣ ಮತ್ತು 151 ನೇ ಪ್ರಕರಣದಲ್ಲಿ ಏನೇ ಇದ್ದರೂ, ಸದರಿ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಸಲುವಾಗಿ ನಡೆಸುವ ಉಪ-ಚುನಾವಣೆಯು ಆ ಖಾಲಿ ಸ್ಥಾನವು ಉಂಟಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ ನಡೆಯತಕ್ಕದ್ದು :

ಪರಂತು ,-

(ಎ) ಖಾಲಿ ಸ್ಥಾನಕ್ಕೆ ಸಂಬಂಧಪಟ್ಟಂತೆ ಸದಸ್ಯನ ಉಳಿದ ಪದಾವಧಿಯು ಒಂದು ವರ್ಷಕ್ಕಿಂತ ಕಡಿಮೆ ಇದ್ದರೆ; ಅಥವಾ

(ಬಿ) ಚುನಾವಣಾ ಆಯೋಗವು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಉಪ-ಚುನಾವಣೆಯನ್ನು ಸದರಿ ಅವಧಿಯೊಳಗೆ ನಡೆಸುವುದು ಕಷ್ಟವೆಂದು ಪ್ರಮಾಣೀಕರಿಸಿದರೆ

- ಈ ಪ್ರಕರಣದಲ್ಲಿ ಇರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

## ಭಾಗ - X

### ಸಂಕೀರ್ಣ

**152. ಸಂಬಂಧಪಟ್ಟ ಚುನಾವಣಾಧಿಕಾರಿಗಳು ರಾಜ್ಯ ವಿಧಾನಸಭೆಗಳ ಮತ್ತು ಚುನಾಯಕ ಗಣಗಳ ಸದಸ್ಯರ ಪಟ್ಟಿಯನ್ನು ಇಟ್ಟುಕೊಂಡು ಬರುವುದು :-** (1) ರಾಜ್ಯ ಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ರಾಜ್ಯ ವಿಧಾನಸಭೆಯ ಚುನಾಯಿತ ಸದಸ್ಯರ ಮೂಲಕ ನಡೆಯುವ ಚುನಾವಣೆಗಾಗಿನ ಅಥವಾ ರಾಜ್ಯ ವಿಧಾನ ಪರಿಷತ್ತಿನಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ರಾಜ್ಯ ವಿಧಾನಸಭೆಯ ಸದಸ್ಯರ ಮೂಲಕ ನಡೆಯುವ ಚುನಾವಣೆಗಾಗಿನ ಚುನಾವಣಾಧಿಕಾರಿಯು ಅಂಥ ಚುನಾವಣೆಯ ಉದ್ದೇಶಗಳಿಗಾಗಿ, ಸಂದರ್ಭಾನುಸಾರ, ಆ ವಿಧಾನಸಭೆಯ ಚುನಾಯಿತ ಸದಸ್ಯರ ಪಟ್ಟಿಯನ್ನು ಅಥವಾ ಸದಸ್ಯರ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ತನ್ನ ಕಚೇರಿಯಲ್ಲಿ ಇಟ್ಟುಕೊಂಡು ಬರತಕ್ಕುದು.

(2) ರಾಜ್ಯಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರ ಮೂಲಕ ನಡೆಯುವ ಚುನಾವಣೆಗಾಗಿನ ಚುನಾವಣಾಧಿಕಾರಿಯು ಅಂಥ ಚುನಾವಣೆಯ ಉದ್ದೇಶಗಳಿಗಾಗಿ ಆ ಚುನಾಯಕ ಗಣದ ಸದಸ್ಯರ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ತನ್ನ ಕಚೇರಿಯಲ್ಲಿ ಇಟ್ಟುಕೊಂಡು ಬರತಕ್ಕುದು.

(3) (1) ಮತ್ತು (2)ನೇ ಉಪ ಪ್ರಕರಣಗಳಲ್ಲಿ ಉಲ್ಲೇಖಿಸಿದ ಪಟ್ಟಿಗಳ ಪ್ರತಿಗಳು ಮಾರಾಟಕ್ಕೆ ದೊರೆಯುವಂತೆ ಮಾಡತಕ್ಕುದು.

**153. ಚುನಾವಣೆಯನ್ನು ಪೂರ್ಣಗೊಳಿಸಲು ಸಮಯದ ವಿಸ್ತರಣೆ :-** ಚುನಾವಣಾ ಆಯೋಗವು ತಾನು ಸಾಕಷ್ಟು ಎಂದು ಪರ್ಯಾಲೋಚಿಸುವ ಕಾರಣಗಳಿಗಾಗಿ ಯಾವುದೇ ಚುನಾವಣೆಯನ್ನು ಪೂರ್ಣಗೊಳಿಸುವುದಕ್ಕಾಗಿನ ಸಮಯವನ್ನು 30ನೇ ಪ್ರಕರಣದ ಅಥವಾ 39ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ಅವಶ್ಯಕ ತಿದ್ದುಪಡಿಗಳನ್ನು ಮಾಡುವುದರ ಮೂಲಕ ವಿಸ್ತರಿಸಲು ಸಕ್ಷಮವಾಗಿರತಕ್ಕುದು.

**154. ರಾಜ್ಯಸಭೆಯ ಸದಸ್ಯರ ಪದಾವಧಿ :-** (1) (2) ಮತ್ತು (2ಎ) ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾಗಿರುವ ಸದಸ್ಯನನ್ನು ಹೊರತುಪಡಿಸಿ, ರಾಜ್ಯ ಸಭೆಯ ಒಬ್ಬ ಸದಸ್ಯನ ಪದಾವಧಿಯು ಆರು ವರ್ಷಗಳಾಗಿರತಕ್ಕುದು.

(2) ರಾಜ್ಯಸಭೆಯ ಮೊದಲ ರಚನೆಯಾದ ಮೇಲೆ, ರಾಷ್ಟ್ರಪತಿಯು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಪ್ರತಿ ವರ್ಗದ ಸ್ಥಾನಗಳನ್ನು ಧಾರಣ ಮಾಡಿರುವ ಸದಸ್ಯರಲ್ಲಿ ಮೂರನೇ ಒಂದು ಭಾಗದಷ್ಟು ಸದಸ್ಯರು ಆ ತರುವಾಯ ಪ್ರತಿ ಎರಡನೆಯ ವರ್ಷದಲ್ಲಿ ನಿವೃತ್ತರಾಗುವಂತೆ ಆಗ ಆಯ್ಕೆಗೊಂಡಿರುವ ಕೆಲವು ಸದಸ್ಯರ ಪದಾವಧಿಯನ್ನು ಮೊಟಕುಗೊಳಿಸಲು ತಾನು ಯುಕ್ತವೆಂದು ಯೋಚಿಸುವಂಥ ಉಪಬಂಧವನ್ನು ಆದೇಶದ ಮೂಲಕ ಮಾಡತಕ್ಕುದು.

(2ಎ) ಆದಷ್ಟು ಮಟ್ಟಿಗೆ, ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುವಂತೆ, ಮತ್ತು ಅನಂತರ ಪ್ರತಿ ಎರಡನೇ ವರ್ಷವು ಮುಕ್ತಾಯಗೊಂಡ ಮೇಲೆ, ರಾಷ್ಟ್ರಪತಿಯು, ಸಂವಿಧಾನದ (ಏಳನೆಯ ತಿದ್ದುಪಡಿ) ಅಧಿನಿಯಮ, 1956 ಇದರ ಪ್ರಾರಂಭದ ನಂತರ ಆದಷ್ಟು ಬೇಗನೆ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ, 147ನೇ ಪ್ರಕರಣದ (2)ನೇ

ಉಪಪ್ರಕರಣದ ಮೇರೆಗೆ ಆಯ್ಕೆಯಾದ ಸದಸ್ಯರ ಪದಾವಧಿಗಳ ಸಂಬಂಧದಲ್ಲಿ ಅವನು ಸೂಕ್ತವೆಂದು ಯೋಚಿಸುವಂಥ ಉಪಬಂಧಗಳನ್ನು ಆದೇಶದ ಮೂಲಕ ಮಾಡತಕ್ಕುದು.

(3) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾಗುವ ಸದಸ್ಯನು ಅವನ ಪೂರ್ವಾಧಿಕಾರಿಯ ಉಳಿದ ಪದಾವಧಿಗಾಗಿ ಸೇವೆ ಸಲ್ಲಿಸಲು ಆಯ್ಕೆಯಾಗತಕ್ಕುದು.

**155. ರಾಜ್ಯಸಭೆಯ ಸದಸ್ಯರ ಪದಾವಧಿಯ ಪ್ರಾರಂಭ :–** (1) ರಾಜ್ಯಸಭೆಯ ಯಾವ ಸದಸ್ಯನ ಹೆಸರನ್ನು 71ನೇ ಪ್ರಕರಣದ ಮೇರೆಗೆ ರಾಜಪತ್ರದಲ್ಲಿ ಅಧಿಸೂಚಿಸಲು ಅಗತ್ಯಪಡಿಸಲಾಗಿದೆಯೋ ಆ ಸದಸ್ಯನ ಪದಾವಧಿಯು ಅಧಿಸೂಚನೆಯ ದಿನಾಂಕದಂದು ಪ್ರಾರಂಭವಾಗತಕ್ಕುದು.

(2) ರಾಜ್ಯಸಭೆಯ ಯಾವ ಸದಸ್ಯನ ಹೆಸರನ್ನು 71ನೇ ಪ್ರಕರಣದ ಮೇರೆಗೆ ಅಧಿಸೂಚಿಸಬೇಕಾದ ಅಗತ್ಯವಿಲ್ಲವೋ ಅಂಥ ಸದಸ್ಯನ ಪದಾವಧಿಯು 67ನೇ ಪ್ರಕರಣದ ಮೇರೆಗೆ ಚುನಾಯಿತನೆಂದು ಅಂಥ ವ್ಯಕ್ತಿಯ ಹೆಸರನ್ನು ಒಳಗೊಂಡಿರುವ ಘೋಷಣೆಯನ್ನು ಅಥವಾ ರಾಜ್ಯಸಭೆಗೆ ಅಂಥ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿ ಸಂದರ್ಭಾನುಸಾರ 80ನೇ ಅನುಚ್ಛೇದದ (1)ನೇ ಖಂಡದ (ಎ) ಉಪಖಂಡದ ಮೇರೆಗೆ ಅಥವಾ ಯಾವುದೇ ಇತರ ಉಪಬಂಧದ ಮೇರೆಗೆ ಹೊರಡಿಸಿರುವ ಅಧಿಸೂಚನೆಯನ್ನು ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಪ್ರಾರಂಭಿಸತಕ್ಕುದು.

**156. ರಾಜ್ಯ ವಿಧಾನಪರಿಷತ್ತಿನ ಸದಸ್ಯರ ಪದಾವಧಿ :–** (1) ಆಕಸ್ಮಿಕ ಖಾಲಿಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾದ ಸದಸ್ಯನನ್ನು ಹೊರತುಪಡಿಸಿ, ರಾಜ್ಯ ವಿಧಾನ ಪರಿಷತ್ತಿನ ಸದಸ್ಯರ ಪದಾವಧಿಯು ಆರು ವರ್ಷಗಳಾಗಿರತಕ್ಕುದು, ಆದರೆ ಪರಿಷತ್ತು ಮೊದಲ ಸಲ ರಚನೆಯಾದ ಮೇಲೆ, ರಾಜ್ಯಪಾಲನು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ ಪ್ರತಿ ವರ್ಗದಲ್ಲಿಯೂ ಸ್ಥಾನಗಳನ್ನು ಹೊಂದಿರುವ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡನೇ ವರ್ಷದಲ್ಲಿ ನಿವೃತ್ತರಾಗುವಂತೆ ಆಯ್ಕೆಯಾದ ಕೆಲವು ಸದಸ್ಯರ ಪದಾವಧಿಯನ್ನು ಮೊಟಕುಗೊಳಿಸುವುದಕ್ಕಾಗಿ ತಾನು ಸೂಕ್ತವೆಂದು ಯೋಚಿಸುವಂಥ ಉಪಬಂಧವನ್ನು ಆದೇಶದ ಮೂಲಕ ಮಾಡತಕ್ಕುದು.

(2) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾಗುವ ಸದಸ್ಯನು ಅವನ ಪೂರ್ವಾಧಿಕಾರಿಯ ಉಳಿದ ಪದಾವಧಿಗಾಗಿ ಸೇವೆ ಸಲ್ಲಿಸಲು ಆಯ್ಕೆಯಾಗತಕ್ಕುದು.

**157. ವಿಧಾನಪರಿಷತ್ತುಗಳ ಸದಸ್ಯರ ಪದಾವಧಿಯ ಪ್ರಾರಂಭ :–** (1) ರಾಜ್ಯದ ವಿಧಾನ ಪರಿಷತ್ತಿನ ಯಾವ ಸದಸ್ಯನ ಹೆಸರನ್ನು 74ನೇ ಪ್ರಕರಣದ ಮೇರೆಗೆ ರಾಜಪತ್ರದಲ್ಲಿ ಅಧಿಸೂಚಿಸಲು ಅಗತ್ಯಪಡಿಸಲಾಗಿದೆಯೋ ಆ ಸದಸ್ಯನ ಪದಾವಧಿಯು ಅಧಿಸೂಚನೆಯ ದಿನಾಂಕದಂದು ಪ್ರಾರಂಭವಾಗತಕ್ಕುದು.

(2) ವಿಧಾನಪರಿಷತ್ತಿನ ಯಾವ ಸದಸ್ಯನ ಹೆಸರನ್ನು 74ನೇ ಪ್ರಕರಣದ ಮೇರೆಗೆ ಅಧಿಸೂಚಿಸಬೇಕಾದ ಅಗತ್ಯವಿಲ್ಲವೋ ಅಂಥ ಸದಸ್ಯನ ಪದಾವಧಿಯು, 67ನೇ ಪ್ರಕರಣದ ಮೇರೆಗೆ ಚುನಾಯಿತನಾಗಿದ್ದಾನೆಂದು ಅಂಥ ವ್ಯಕ್ತಿಯ ಹೆಸರನ್ನು ಒಳಗೊಂಡಿರುವ ಘೋಷಣೆಯನ್ನು ಅಥವಾ ಸಂದರ್ಭಾನುಸಾರ ಪರಿಷತ್ತಿಗೆ ಅಂಥ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿ 171ನೇ ಅನುಚ್ಛೇದದ (3)ನೇ ಖಂಡದ (ಇ) ಉಪಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಪ್ರಾರಂಭವಾಗತಕ್ಕುದು.

**158. ಅಭ್ಯರ್ಥಿಯ ಠೇವಣಿಯ ವಾಪಸಾತಿ ಅಥವಾ ಮಟ್ಟುಗೋಲು :–** (1) 34ನೇ ಪ್ರಕರಣದ ಮೇರೆಗೆ ಅಥವಾ 39ನೇ ಪ್ರಕರಣದ (2)ನೇ ಉಪಪ್ರಕರಣದೊಂದಿಗೆ ಓದಿಕೊಳ್ಳಲಾದ ಆ ಪ್ರಕರಣದ ಮೇರೆಗೆ ಇಟ್ಟಿರುವ ಠೇವಣಿಯನ್ನು, ಅದನ್ನು ಇಟ್ಟ ವ್ಯಕ್ತಿಗೆ ಅಥವಾ ಅವನ ಕಾನೂನು ಸಮ್ಮತ ಪ್ರತಿನಿಧಿಗೆ ವಾಪಸ್ಸು ಮಾಡತಕ್ಕುದು ಅಥವಾ ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಸಮುಚಿತ ಪ್ರಾಧಿಕಾರವು ಅದನ್ನು ಮಟ್ಟುಗೋಲು ಹಾಕಿಕೊಳ್ಳತಕ್ಕುದು.

(2) ಈ ಪ್ರಕರಣದಲ್ಲಿ ಇನ್ನು ಮುಂದೆ ನಮೂದಿಸಿರುವ ಸಂದರ್ಭಗಳಲ್ಲಿ ಹೊರತು, ಠೇವಣಿಯನ್ನು, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ನಂತರ ಕಾರ್ಯ ಸಾಧ್ಯವಾದಷ್ಟು ಬೇಗ ವಾಪಸು ಮಾಡತಕ್ಕುದು.

(3) ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರನ್ನು ಕಾಣಿಸದಿದ್ದರೆ, ಅಥವಾ ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಅವನು ಮರಣ ಹೊಂದಿದರೆ, ಪಟ್ಟಿಯನ್ನು ಪ್ರಕಟಿಸಿದ ನಂತರ ಅಥವಾ ಸಂದರ್ಭಾನುಸಾರ ಅವನ ಮರಣದ ನಂತರ, ಕಾರ್ಯ ಸಾಧ್ಯವಾದಷ್ಟು ಬೇಗ ಠೇವಣಿಯನ್ನು ವಾಪಸು ಮಾಡತಕ್ಕುದು.

(4) (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಮತದಾನ ನಡೆದಿರುವ ಒಂದು ಚುನಾವಣೆಯಲ್ಲಿ ಅಭ್ಯರ್ಥಿಯು ಚುನಾಯಿತನಾಗದಿದ್ದರೆ ಮತ್ತು ಅವನಿಗೆ ದೊರೆತಿರುವ ಸಿಂಧುವಾದ ಮತಗಳ ಸಂಖ್ಯೆಯು, ಎಲ್ಲ ಅಭ್ಯರ್ಥಿಗಳಿಗೆ ದೊರೆತಿರುವ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯ 1/6 ಭಾಗವನ್ನು ಅಥವಾ ಆ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚು ಸದಸ್ಯರನ್ನು ಚುನಾಯಿಸಬೇಕಾದ ಸಂದರ್ಭದಲ್ಲಿ, ಹಾಗೆ ಚಲಾಯಿಸಿದ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಯಿಂದ ವಿಭಾಗಿಸಿದಾಗ ಬರುವ ಭಾಗಲಬ್ಧದ 1/6 ಭಾಗವನ್ನು ಮೀರದಿದ್ದರೆ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು :

ಪರಂತು, ಏಕ ವರ್ಗಾವಣೀಯ ಮತದ ಮೂಲಕ ಅನುಪಾತೀ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿ ನಡೆದಿರುವ ಒಂದು ಚುನಾವಣೆಯಲ್ಲಿ ಅಭ್ಯರ್ಥಿಯು ಚುನಾಯಿತನಾಗದಿರುವಲ್ಲಿ, ಒಬ್ಬ ಅಭ್ಯರ್ಥಿಯ ಆಯ್ಕೆಯನ್ನು ಸುನಿಶ್ಚಿತಗೊಳಿಸಲು ಸಾಕಷ್ಟು ಎಂದು ಈ ಬಗ್ಗೆ ನಿಯಮಿಸಿದ ಮತಗಳ ಸಂಖ್ಯೆಯ 1/6 ಭಾಗಕ್ಕಿಂತ ಹೆಚ್ಚು ಮತಗಳನ್ನು ಅವನು ಪಡೆಯದಿದ್ದರೆ ಅವನು ಇಟ್ಟಿರುವ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದು.

(5) (2), (3) ಮತ್ತು (4)ನೇ ಉಪಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ,-

(ಎ) ಸಾರ್ವತ್ರಿಕ ಚುನಾವಣೆಯಲ್ಲಿ, ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳ ಅಥವಾ ಒಂದಕ್ಕಿಂತ ಹೆಚ್ಚು ವಿಧಾನಸಭಾ ಚುನಾವಣಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯಾಗಿದ್ದರೆ, ಒಂದಕ್ಕಿಂತ ಹೆಚ್ಚು ಠೇವಣಿಗಳನ್ನು ವಾಪಸ್ಸು ಮಾಡತಕ್ಕುದಲ್ಲ, ಮತ್ತು ಉಳಿದವುಗಳನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು ;

(ಬಿ) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ವಿಧಾನಪರಿಷತ್ ಚುನಾವಣಾ ಕ್ಷೇತ್ರಗಳಲ್ಲಿನ ಚುನಾವಣೆಯಲ್ಲಿ ಅಥವಾ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರದಲ್ಲಿನ ಒಂದು ಚುನಾವಣೆಯಲ್ಲಿ ಮತ್ತು ವಿಧಾನ ಪರಿಷತ್ತಿನ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ರಾಜ್ಯ ವಿಧಾನಸಭೆಯ ಸದಸ್ಯರ ಮೂಲಕ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯಾಗಿದ್ದರೆ, ಒಂದಕ್ಕಿಂತ ಹೆಚ್ಚು ಠೇವಣಿಯನ್ನು ವಾಪಸು ಮಾಡತಕ್ಕುದಲ್ಲ, ಮತ್ತು ಉಳಿದವುಗಳನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು.

**159. ಚುನಾವಣಾ ಕೆಲಸಕ್ಕಾಗಿ ನಿರ್ದಿಷ್ಟ ಪ್ರಾಧಿಕಾರಗಳ ಸಿಬ್ಬಂದಿಯನ್ನು ಒದಗಿಸುವುದು :-** (1) ಚುನಾವಣೆಗೆ ಸಂಬಂಧಿಸಿದ ಯಾವುವೇ ಕರ್ತವ್ಯಗಳನ್ನು ನಿರ್ವಹಿಸಲು ಅವಶ್ಯವಿರಬಹುದಾದಂಥ ಸಿಬ್ಬಂದಿಯನ್ನು ಯಾರೇ ರಿಟರ್ನಿಂಗ್ ಆಫೀಸರನಿಗೆ ಒದಗಿಸುವಂತೆ 324 ನೇ ಅನುಚ್ಛೇದದ (4) ನೇ ಖಂಡದ ಮೇರೆಗೆ ನೇಮಕಗೊಂಡ ಪ್ರಾದೇಶಿಕ ಕಮೀಷನರು ಅಥವಾ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯು (2) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳನ್ನು ಕೋರಿದಾಗ ಅವು ಹಾಗೆ ಒದಗಿಸತಕ್ಕದ್ದು.

(2) (1) ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳು ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:-

(i) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ;

(ii) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ನಿಗಮಿತವಾದ ಪ್ರತಿಯೊಂದು ವಿಶ್ವವಿದ್ಯಾನಿಲಯ.

(iii) ಕಂಪನಿಗಳ ಅಧಿನಿಯಮ, 1956 (1956 ರ 1) ರ 617 ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಸರ್ಕಾರಿ ಕಂಪನಿ;

(iv) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಿಯಂತ್ರಣಗೊಂಡ, ಅಥವಾ ಅವು ಒದಗಿಸಿದ ನಿಧಿಯಿಂದ ಪೂರ್ಣವಾಗಿ ಅಥವಾ ಗಣನಾರ್ಹವಾಗಿ ಹಣಕಾಸಿನ ನೆರವು ಪಡೆಯುತ್ತಿರುವ ಯಾವುದೇ ಇತರ ಸಂಸ್ಥೆ, ವ್ಯಾಪಾರ ಸಂಸ್ಥೆ ಅಥವಾ ಉದ್ಯಮ.

**160. ಚುನಾವಣಾ ಉದ್ದೇಶಗಳಿಗಾಗಿ ಸ್ಥಳಾವಕಾಶಗಳು, ವಾಹನಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು :-** (1) ರಾಜ್ಯದೊಳಗೆ ನಡೆಯುವ ಚುನಾವಣೆಯ ಸಂಬಂಧದಲ್ಲಿ,-

(ಎ) ಮತದಾನ ಕೇಂದ್ರವಾಗಿ ಉಪಯೋಗಿಸುವ ಉದ್ದೇಶಕ್ಕಾಗಿ ಅಥವಾ ಮತದಾನ ನಡೆದ ತರುವಾಯ ಮತಪೆಟ್ಟಿಗೆಗಳನ್ನು ಶೇಖರಿಸಿ ಇಡುವುದಕ್ಕಾಗಿ ಯಾವುವೇ ಸ್ಥಳಾವರಣಗಳ ಅಗತ್ಯ ಇದೆ ಎಂದು ಅಥವಾ ಅಗತ್ಯವಾಗುವ ಸಂಭವವಿದೆ ಎಂದು ; ಅಥವಾ

(ಬಿ) ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಕೇಂದ್ರದಿಂದ ಮತಪೆಟ್ಟಿಗೆಗಳ ಸಾಗಣೆಯ ಅಥವಾ ಅಂಥ ಚುನಾವಣೆಯನ್ನು ನಡೆಸುವ ಕಾಲದಲ್ಲಿ ಸುವ್ಯವಸ್ಥೆಯನ್ನು ಪಾಲಿಸುವುದಕ್ಕಾಗಿ ಪೊಲೀಸ್ ಪಡೆಯ ಸದಸ್ಯರ ಸಾಗಣೆಯ, ಅಥವಾ ಅಂಥ ಚುನಾವಣೆಯ ಸಂಬಂಧದಲ್ಲಿ ಯಾವುವೇ ಕರ್ತವ್ಯಗಳ ನಿರ್ವಹಣೆಗಾಗಿ ಯಾವನೇ ಅಧಿಕಾರಿ ಅಥವಾ ಇತರ ವ್ಯಕ್ತಿಯ ಸಾಗಣೆಯ ಉದ್ದೇಶಕ್ಕಾಗಿ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯು ಅಗತ್ಯವಾಗಿದೆಯೆಂದು ಅಥವಾ ಅಗತ್ಯವಾಗುವ ಸಂಭವವಿದೆಯೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ

- ಸರ್ಕಾರವು, ಸಂದರ್ಭಾನುಸಾರ, ಸ್ಥಳಾವರಣಗಳನ್ನು ಅಥವಾ ವಾಹನವನ್ನು ಅಥವಾ ದೋಣಿಯನ್ನು ಅಥವಾ ಪ್ರಾಣಿಯನ್ನು ಲಿಖಿತ ಆದೇಶದ ಮೂಲಕ ಕಡ್ಡಾಯವಾಗಿ ಕೋರಬಹುದು ಮತ್ತು ಅಂಥ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ ಹೆಚ್ಚಿನ ಆದೇಶಗಳನ್ನು ಮಾಡಬಹುದು :

ಪರಂತು, ಒಬ್ಬ ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಆ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಕಾನೂನು ಸಮ್ಮತವಾಗಿ ಉಪಯೋಗಿಸುತ್ತಿರುವ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯನ್ನು ಅಂಥ ಚುನಾವಣೆಯಲ್ಲಿನ ಮತದಾನವು ಪೂರ್ಣವಾಗುವವರೆಗೆ ಈ ಉಪಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರತಕ್ಕುದಲ್ಲ.

(2) ಸ್ವತ್ತಿನ ಮಾಲೀಕನೆಂದು ಅಥವಾ ಸ್ವತ್ತಿನ ಸ್ವಾಧೀನತೆ ಹೊಂದಿರುವ ವ್ಯಕ್ತಿಯೆಂದು ರಾಜ್ಯ ಸರ್ಕಾರವು ಭಾವಿಸುವಂಥ ವ್ಯಕ್ತಿಯನ್ನು ಸಂಬೋಧಿಸಿ ಲಿಖಿತ ಆದೇಶದ ಮೂಲಕ ಕಡ್ಡಾಯ ಕೋರಿಕೆಯನ್ನು ಕಾರ್ಯಗತಗೊಳಿಸತಕ್ಕುದು ಮತ್ತು ಅಂಥ ಆದೇಶವನ್ನು ಯಾರಿಗೆ ಅದನ್ನು ಸಂಬೋಧಿಸಲಾಗಿದೆಯೋ ಆ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ಜಾರಿಗೊಳಿಸತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿರುವಾಗ ಅಂಥ ಕಡ್ಡಾಯ ಕೋರಿಕೆಯ ಅವಧಿಯು ಅಂಥ ಸ್ವತ್ತು ಆ ಉಪಪ್ರಕರಣದಲ್ಲಿ ಸೂಚಿಸಿರುವ ಯಾವುದೇ ಉದ್ದೇಶಕ್ಕಾಗಿ ಯಾವ ಅವಧಿಗಾಗಿ ಬೇಕಾಗಿದೆಯೋ ಆ ಅವಧಿಯನ್ನು ಮೀರತಕ್ಕುದಲ್ಲ.

(4) ಈ ಪ್ರಕರಣದಲ್ಲಿ –

(ಎ) "ಸ್ಥಳಾವರಣಗಳು" ಎಂದರೆ ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ಗುಡಿಸಲು, ಶೆಡ್ ಅಥವಾ ಇತರೆ ನಿರ್ಮಾಣ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ ;

(ಬಿ) "ವಾಹನ" ಎಂದರೆ ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ, ಅದು ಯಂತ್ರಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು.

**161. ನಷ್ಟ ಪರಿಹಾರದ ಸಂದಾಯ :–** (1) 160ನೇ ಪ್ರಕರಣಕ್ಕನುಸಾರವಾಗಿ ರಾಜ್ಯ ಸರ್ಕಾರವು ಯಾವುವೇ ಸ್ಥಳಾವರಣಗಳನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲ ಹಿತಾಸಕ್ತರಾದ ವ್ಯಕ್ತಿಗಳಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕುದು. ಆ ನಷ್ಟ ಪರಿಹಾರದ ಮೊತ್ತವನ್ನು ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸತಕ್ಕುದು, ಎಂದರೆ :–

(i) ಆ ಸ್ಥಳಾವರಣಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಯಾವುದೇ ಬಾಡಿಗೆಯನ್ನು ಹಾಗೆ ಸಂದಾಯ ಮಾಡಬೇಕಾಗಿಲ್ಲದಿದ್ದರೆ ಆ ಜಾಗದಲ್ಲಿರುವ ಅಂಥವೇ ಸ್ಥಳಾವರಣಗಳಿಗಾಗಿ ಸಂದಾಯ ಮಾಡಬೇಕಾದ ಬಾಡಿಗೆ ;

(ii) ಸ್ಥಳಾವರಣಗಳ ಕಡ್ಡಾಯ ಕೋರಿಕೆಯ ಪರಿಣಾಮವಾಗಿ ಹಿತಾಸಕ್ತ ವ್ಯಕ್ತಿಯು ತನ್ನ ವಾಸಸ್ಥಳ ಅಥವಾ ವ್ಯವಹಾರ ಸ್ಥಳವನ್ನು ಬದಲಾಯಿಸಲೇಬೇಕಾದರೆ ಅಂಥ ಬದಲಾವಣೆಗೆ ಸಂಬಂಧಿಸಿದಂತೆ ಯುಕ್ತ ಪ್ರಾಸಂಗಿಕ ವೆಚ್ಚಗಳೇನಾದರೂ ಇದ್ದರೆ ಅವು :

ಪರಂತು, ಹಾಗೆ ನಿರ್ಧರಿಸಿದ ನಷ್ಟ ಪರಿಹಾರದ ಮೊಬಲಗಿನಿಂದ ಬಾಧಿತಗೊಂಡಿರುವ ಯಾವನೇ ಹಿತಾಸಕ್ತ ವ್ಯಕ್ತಿಯು ಆ ವಿಷಯವನ್ನು ಒಬ್ಬ ಮಧ್ಯಸ್ಥನಿಗೆ ವಹಿಸಿಕೊಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ನಿಯಮಿಸಿದ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಿದಲ್ಲಿ, ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗು ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿರುವ ಮಧ್ಯಸ್ಥನು ನಿರ್ಧರಿಸಬಹುದಾದಷ್ಟು ಆಗಿರತಕ್ಕುದು :

ಮತ್ತೂ ಪರಂತು, ನಷ್ಟ ಪರಿಹಾರವನ್ನು ಸ್ವೀಕರಿಸಲು ಸ್ವಾಮ್ಯದ ಬಗ್ಗೆ ಅಥವಾ ನಷ್ಟ ಪರಿಹಾರದ ಮೊಬಲಗಿನ ಹಂಚಿಕೆಯ ಬಗ್ಗೆ ಯಾವುದೇ ವಿವಾದ ಇರುವಲ್ಲಿ, ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥನಿಗೆ ಆ ವಿಷಯವನ್ನು ನಿರ್ಧರಣೆಗಾಗಿ ಆ ಸರ್ಕಾರವು ಕಳಿಸತಕ್ಕುದು ಮತ್ತು ಅದನ್ನು ಅಂಥ ಮಧ್ಯಸ್ಥನ ತೀರ್ಮಾನಕ್ಕನುಸಾರವಾಗಿ ನಿರ್ಧರಿಸತಕ್ಕುದು.

ವಿವರಣೆ :– ಈ ಉಪಪ್ರಕರಣದಲ್ಲಿ 'ಹಿತಾಸಕ್ತನಾದ ವ್ಯಕ್ತಿ' ಎಂದರೆ ಕಡ್ಡಾಯ ಕೋರಿಕೆಗೆ ನಿಕಟ ಪೂರ್ವದಲ್ಲಿ 160ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾಗಿರುವ ಸ್ಥಳಾವರಣಗಳ ವಾಸ್ತವಿಕ ಸ್ವಾಧೀನ ಹೊಂದಿದ್ದ ವ್ಯಕ್ತಿ ಅಥವಾ ಅಂಥ ವಾಸ್ತವಿಕ ಸ್ವಾಧೀನವನ್ನು ಹೊಂದಿದ್ದ ಯಾವನೇ ವ್ಯಕ್ತಿಯು ಇಲ್ಲದಿದ್ದಲ್ಲಿ, ಅಂಥ ಸ್ಥಳಾವರಣಗಳ ಮಾಲೀಕ.

(2) 160ನೇ ಪ್ರಕರಣದ ಅನುಸಾರವಾಗಿ ರಾಜ್ಯ ಸರ್ಕಾರವು ಯಾವುದೇ ವಾಹನ, ದೋಣಿ, ಅಥವಾ ಪ್ರಾಣಿಯನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲ, ಅದರ ಮಾಲೀಕನಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕುದು ; ಆ ಮೊಬಲಗನ್ನು ಅಂಥ ವಾಹನ, ದೋಣಿ ಅಥವಾ ಪ್ರಾಣಿಯ ಬಾಡಿಗೆಯ ಬಗ್ಗೆ ಆ ಪ್ರದೇಶದಲ್ಲಿ ಪ್ರಚಲಿತವಿರುವ ಬಾಡಿಗೆ ಅಥವಾ ದರಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ನಿರ್ಧರಿಸತಕ್ಕುದು :

ಪರಂತು, ಹಾಗೆ ನಿರ್ಧರಿಸಲಾದ ನಷ್ಟ ಪರಿಹಾರದ ಮೊಬಲಗಿನಿಂದ ಬಾಧಿತನಾಗಿರುವ ಅಂಥ ವಾಹನ, ದೋಣಿ ಅಥವಾ ಪ್ರಾಣಿಯ ಮಾಲೀಕನು ಆ ವಿಷಯವನ್ನು ಒಬ್ಬ ಮಧ್ಯಸ್ಥನಿಗೆ ಕಳುಹಿಸಿಕೊಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ನಿಯಮಿಸಿದ ಸಮಯದೊಳಗಾಗಿ ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ, ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗು, ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿರುವ ಮಧ್ಯಸ್ಥನು ನಿರ್ಧರಿಸಬಹುದಾದಷ್ಟು ಆಗಿರತಕ್ಕುದು :

ಮತ್ತೂ ಪರಂತು, ಕಡ್ಡಾಯ ಕೋರಿಕೆಗೆ ನಿಕಟ ಪೂರ್ವದಲ್ಲಿ ಆ ವಾಹನ ಅಥವಾ ದೋಣಿಯು ಕಂತು ಖರೀದಿ ಒಪ್ಪಂದದ ಕಾರಣದಿಂದ ಮಾಲೀಕನಲ್ಲದ ಇತರ ವ್ಯಕ್ತಿಯ ಸ್ವಾಧೀನದಲ್ಲಿದ್ದರೆ ಆ ಕಡ್ಡಾಯ ಕೋರಿಕೆಯ ಸಂಬಂಧದಲ್ಲಿ ಸಂದಾಯ ಮಾಡಬೇಕಾದ

ಒಟ್ಟು ನಷ್ಟ ಪರಿಹಾರವೆಂದು ಈ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ಮೊಬಲಗನ್ನು ಆ ವ್ಯಕ್ತಿ ಮತ್ತು ಮಾಲೀಕನು ಒಪ್ಪಿಕೊಳ್ಳಬಹುದಾದಂಥ ರೀತಿಯಲ್ಲಿ ಮತ್ತು ಒಪ್ಪಂದವು ಇಲ್ಲದಿರುವಲ್ಲಿ, ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥನು ತೀರ್ಮಾನಿಸಬಹುದಾದ ರೀತಿಯಲ್ಲಿ ಅವರ ನಡುವೆ ಹಂಚಿಕೆ ಮಾಡತಕ್ಕುದು.

**162. ಮಾಹಿತಿಯನ್ನು ಪಡೆಯುವ ಅಧಿಕಾರ :-** ರಾಜ್ಯ ಸರ್ಕಾರವು, 160ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರುವ ಅಥವಾ 161ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ ಆದೇಶದ ಮೂಲಕ, ಯಾವನೇ ವ್ಯಕ್ತಿಯನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯ ಸ್ವಾಧೀನದಲ್ಲಿರುವ ಮಾಹಿತಿಯನ್ನು ಒದಗಿಸುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

**163. ಸ್ಥಳಾವರಣಗಳು, ಮುಂತಾದವುಗಳನ್ನು ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರಗಳು :-** (1) ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು, ಯಾವುದೇ ಸ್ಥಳಾವರಣಗಳು, ವಾಹನ, ದೋಣಿ ಅಥವಾ ಪ್ರಾಣಿ ಇವುಗಳಿಗೆ ಸಂಬಂಧಿಸಿದಂತೆ 160ನೇ ಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಬೇಕೆ ಹೇಗೆ ಮತ್ತು ಹೊರಡಿಸದಿದ್ದರೆ ಯಾವ ರೀತಿಯಲ್ಲಿ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಥವಾ ಆ ಪ್ರಕರಣದ ಮೇರೆಗೆ ಹೊರಡಿಸಿರುವ ಯಾವುದೇ ಆದೇಶದ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ದೃಷ್ಟಿಯಿಂದ ಅಂಥ ಸ್ಥಳಾವರಣಗಳನ್ನು ಪ್ರವೇಶಿಸಬಹುದು ಮತ್ತು ಅಂಥ ಸ್ಥಳಾವರಣಗಳನ್ನು ಮತ್ತು ಅಲ್ಲಿರುವ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯನ್ನು ಪರಿಶೀಲಿಸಬಹುದು.

(2) ಈ ಪ್ರಕರಣದಲ್ಲಿ 'ಸ್ಥಳಾವರಣಗಳು' ಮತ್ತು 'ವಾಹನ' ಎಂಬ ಪದಗಳು 160ನೇ ಪ್ರಕರಣದಲ್ಲಿರುವ ಅರ್ಥಗಳನ್ನೇ ಹೊಂದಿರುತ್ತವೆ.

**164. ಕಡ್ಡಾಯವಾಗಿ ಕೋರಿದ ಸ್ಥಳಾವರಣಗಳಿಂದ ಹೊರಹಾಕುವಿಕೆ :-** (1) 160ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ ಕಡ್ಡಾಯವಾಗಿ ಕೋರಿದ ಯಾವುದೇ ಸ್ಥಳಾವರಣದ ಸ್ವಾಧೀನವನ್ನು ಇಟ್ಟುಕೊಂಡಿರುವ ಯಾವನೇ ವ್ಯಕ್ತಿಯನ್ನು ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾವನೇ ಅಧಿಕಾರಿಯು ಕ್ಷಿಪ್ರವಾಗಿ ಹೊರಹಾಕಬಹುದು.

(2) ಹಾಗೆ ಅಧಿಕೃತನಾದ ಯಾವನೇ ಅಧಿಕಾರಿಯು, ಬಹಿರಂಗವಾಗಿ ಕಾಣಿಸಿಕೊಳ್ಳದ ಯಾರೇ ಮಹಿಳೆಗೆ ಯುಕ್ತ ಎಚ್ಚರಿಕೆ ನೀಡಿ ಮತ್ತು ಹಿಂದೆ ಸರಿದುಕೊಳ್ಳಲು ಯುಕ್ತ ಸೌಲಭ್ಯವನ್ನು ಒದಗಿಸಿದ ತರುವಾಯ, ಯಾವುದೇ ಕಟ್ಟಡದ ಯಾವುದೇ ಬಾಗಿಲಿನ ಯಾವುದೇ ಬೀಗ ಅಥವಾ ಬೋಲ್ಟನ್ನು ಕಿತ್ತು ಹಾಕಬಹುದು ಅಥವಾ ತೆರೆಯಬಹುದು ಅಥವಾ ಬಾಗಿಲನ್ನು ಮುರಿದು ತೆಗೆಯಬಹುದು ಅಥವಾ ಹಾಗೆ ಹೊರಹಾಕುವುದನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

**165. ಸ್ಥಳಾವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡುವುದು :-** (1) 160ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿದ ಯಾವುವೇ ಸ್ಥಳಾವರಣಗಳನ್ನು ಬಿಡುಗಡೆ ಮಾಡಬೇಕಾಗಿರುವಾಗ ಅವುಗಳ ಸ್ವಾಧೀನವನ್ನು, ಆ ಸ್ಥಳಾವರಣಗಳನ್ನು ಕಡ್ಡಾಯವಾಗಿ ಕೋರಿದ್ದ ಸಮಯದಲ್ಲಿ ಯಾರಿಂದ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದ್ದಿತೋ ಆ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿ ಇರದಿದ್ದರೆ, ಅಂಥ ಸ್ಥಳಾವರಣಗಳ ಮಾಲೀಕನೆಂದು ರಾಜ್ಯ ಸರ್ಕಾರವು ಭಾವಿಸುವ ವ್ಯಕ್ತಿಗೆ ಒಪ್ಪಿಸತಕ್ಕುದು ಮತ್ತು ಹಾಗೆ ಸ್ವಾಧೀನತೆಯನ್ನು ಒಪ್ಪಿಸುವ ಮೂಲಕ, ರಾಜ್ಯ ಸರ್ಕಾರವು ಅಂಥ ಒಪ್ಪಿಸುವಿಕೆಯ ಸಂಬಂಧದಲ್ಲಿನ ಎಲ್ಲ ಹೊಣೆಗಳಿಂದ ಪೂರ್ಣವಾಗಿ ಮುಕ್ತಗೊಳ್ಳತಕ್ಕುದು, ಆದರೆ ಆ ಸ್ಥಳಾವರಣಗಳ ಸ್ವಾಧೀನತೆಯನ್ನು ಯಾರಿಗೆ ಒಪ್ಪಿಸಲಾಗಿದ್ದಿತೋ ಆ ವ್ಯಕ್ತಿಯ ವಿರುದ್ಧ ಕಾನೂನಿನ ಯುಕ್ತ ಕ್ರಮದ ಮೂಲಕ ಆ ಸ್ಥಳಾವರಣಗಳ ಸಂಬಂಧದಲ್ಲಿ ಯಾವನೇ ಇತರ ವ್ಯಕ್ತಿಯು ಜಾರಿಗೊಳಿಸಬಹುದಾದಂಥ ಯಾವುವೇ ಹಕ್ಕುಗಳಿಗೆ ಇದು ಬಾಧಕವಾಗತಕ್ಕುದಲ್ಲ.

(2) 160ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾಗಿರುವ ಯಾವುವೇ ಸ್ಥಳಾವರಣಗಳ ಸ್ವಾಧೀನವನ್ನು (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಒಪ್ಪಿಸಬೇಕಾಗಿದೆಯೋ ಆ ವ್ಯಕ್ತಿಯು ದೊರೆಯದಿದ್ದಲ್ಲಿ ಅಥವಾ ಅವನನ್ನು ಕೂಡಲೇ ಖಚಿತಪಡಿಸಿಕೊಳ್ಳಲಾಗದಿದ್ದಲ್ಲಿ ಅಥವಾ ಅವನ ಪರವಾಗಿ ಸ್ವಾಧೀನತೆಯನ್ನು ಸ್ವೀಕರಿಸಲು ಅಧಿಕೃತನಾದ ಯಾವನೇ ಏಜೆಂಟನು ಅಥವಾ ಯಾವನೇ ಇತರ ವ್ಯಕ್ತಿಯು ಇಲ್ಲದಿರುವಲ್ಲಿ, ರಾಜ್ಯ ಸರ್ಕಾರವು ಅಂಥ ಸ್ಥಳಾವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಿದೆ ಎಂದು ಘೋಷಿಸುವ ನೋಟೀಸನ್ನು ಅಂಥ ಸ್ಥಳಾವರಣಗಳ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕುದು ಮತ್ತು ಆ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸಿದಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳಾವರಣಗಳು ಅಂಥ ಪ್ರಕಟಣೆಯ ದಿನಾಂಕದಂದು ಮತ್ತು ದಿನಾಂಕದಿಂದ ಕಡ್ಡಾಯ ಕೋರಿಕೆಗೊಳಪಟ್ಟಿರುವುದು ನಿಂತು ಹೋಗತಕ್ಕುದು ಮತ್ತು ಅವುಗಳ ಸ್ವಾಧೀನತೆಗೆ ಹಕ್ಕುಳ್ಳ ವ್ಯಕ್ತಿಗೆ ಅವುಗಳನ್ನು ಒಪ್ಪಿಸಲಾಗಿದೆಯೆಂಬುದಾಗಿ ಭಾವಿಸತಕ್ಕುದು ಮತ್ತು ರಾಜ್ಯ ಸರ್ಕಾರವು ಸದರಿ ದಿನಾಂಕದ ತರುವಾಯ ಯಾವುದೇ ಅವಧಿಗಾಗಿ ಅಂಥ ಸ್ಥಳಾವರಣಗಳ ಸಂಬಂಧದಲ್ಲಿನ ಯಾವುದೇ ನಷ್ಟ ಪರಿಹಾರ ಅಥವಾ ಇತರ ಕ್ಲೇಮಿಗೆ ಹೊಣೆಯಾಗತಕ್ಕುದಲ್ಲ.

**166.** **ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಪ್ರಕಾರ್ಯಗಳ ಪ್ರತ್ಯಾಯೋಜನೆ :-** ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಹಿತವಾದ ಯಾವುವೇ ಅಧಿಕಾರಗಳನ್ನು ಅಥವಾ 160 ರಿಂದ 165ನೇ ಪ್ರಕರಣಗಳವರೆಗಿನ ಯಾವುವೇ ಉಪಬಂಧಗಳ ಮೂಲಕ ಆ ಸರ್ಕಾರಕ್ಕೆ ಪ್ರದಾನ ಮಾಡಲಾದ ಯಾವುವೇ ಅಧಿಕಾರಗಳನ್ನು ಅಥವಾ ವಿಧಿಸಲಾದ ಯಾವುದೇ ಕರ್ತವ್ಯವನ್ನು, ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿ ಅಥವಾ ಅಧಿಕಾರಿಗಳ ವರ್ಗವು ಚಲಾಯಿಸತಕ್ಕದೆಂದು ಅಥವಾ ನಿರ್ವಹಿಸತಕ್ಕದೆಂದು ನಿರ್ದೇಶಿಸಬಹುದು.

**167.** **ಕಡ್ಡಾಯ ಕೋರಿಕೆಗೆ ಸಂಬಂಧಿಸಿದ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ :-** ಯಾವನೇ ವ್ಯಕ್ತಿಯು 160ನೇ ಪ್ರಕರಣ ಅಥವಾ 162ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

**168.** (ನಿರಸನಗೊಳಿಸಲಾಗಿದೆ).

## ಭಾಗ - XI

## ಸಾಮಾನ್ಯ

**169.** **ನಿಯಮ ರಚನಾಧಿಕಾರ :-** (1) ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ :-

(ಎ) 33ಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಶಪಥಪತ್ರದ ನಮೂನೆ;

(ಎಎ) ಮತದಾನ ಕೇಂದ್ರಗಳಲ್ಲಿ ಪೀಠಾಸೀನ ಅಧಿಕಾರಿಗಳ ಮತ್ತು ಮತದಾನ ಅಧಿಕಾರಿಗಳ ಕರ್ತವ್ಯಗಳು;

(ಎಎಎ) ವಂತಿಗೆ ವರದಿಯ ನಮೂನೆ;

(ಬಿ) ಮತದಾರರ ಪಟ್ಟಿಗನುಸಾರವಾಗಿ ಮತದಾರರನ್ನು ತನಿಖೆ ಮಾಡುವುದು ;

(ಬಿಬಿ) ಕೇಬಲ್ ದೂರದರ್ಶನ ಜಾಲ ಮತ್ತು ಇತರ ವಿದ್ಯುನ್ಮಾನ ಮಾಧ್ಯಮದಲ್ಲಿ ಕಾಲವನ್ನು ಸಮಾನವಾಗಿ ಹಂಚಿಕೆ ಮಾಡುವ ವಿಧಾನ;

(ಸಿ) ಸಾಮಾನ್ಯವಾಗಿ ಮತ್ತು ಅನಕ್ಷರಸ್ಥ ಮತದಾರರ ಅಥವಾ ದೈಹಿಕ ಅಥವಾ ಇತರ ಅಸಮರ್ಥತೆಗೆ ಒಳಗಾಗಿರುವ ಮತದಾರರ ಸಂದರ್ಭದಲ್ಲಿ ಮತ ನೀಡುವ ರೀತಿ ;

(ಡಿ) ಒಂದು ಚುನಾವಣಾ ಕ್ಷೇತ್ರದ ಒಬ್ಬ ಮತದಾರನಾಗಿದ್ದು ಮತದಾನ ಮಾಡಲು ಹಕ್ಕುಳ್ಳವನಾಗಿರದ ಮತದಾನ ಕೇಂದ್ರಗಳಲ್ಲಿ ಕರ್ತವ್ಯಕ್ಕಾಗಿ ಅಧಿಕೃತನಾದ ಅಥವಾ ನೇಮಕಗೊಂಡ ಪೀಠಾಸೀನ ಅಧಿಕಾರಿ, ಮತದಾನ ಅಧಿಕಾರಿ, ಮತದಾನ ಏಜೆಂಟ್ ಅಥವಾ ಯಾವನೇ ಇತರ ವ್ಯಕ್ತಿಯು ಮತ ನೀಡುವ ರೀತಿ ;

(ಇ) ಒಬ್ಬ ವ್ಯಕ್ತಿಯು ಮತದಾರನೆಂದು ಮತದಾನ ಮಾಡಿದ ತರುವಾಯ ಮತ್ತೊಬ್ಬ ವ್ಯಕ್ತಿಯು ತಾನೇ ಅಂಥ ಮತದಾರನೆಂದು ಪ್ರತಿನಿಧಿಸಿ ನೀಡುವ ಮತದಾನದ ಸಂಬಂಧದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ;

(ಇಇ) ಮತದಾನ ಯಂತ್ರಗಳ ಮೂಲಕ ಮತ ನೀಡುವ ಮತ್ತು ದಾಖಲಿಸುವ ರೀತಿ ಮತ್ತು ಅಂಥ ಯಂತ್ರಗಳನ್ನು ಉಪಯೋಗಿಸಲಾಗುವ ಮತದಾನ ಕೇಂದ್ರಗಳಲ್ಲಿ ಮತದಾನದ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ ;

(ಎಫ್) ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯದ ಪದ್ಧತಿಗನುಸಾರವಾಗಿ ನಡೆಸುವ ಚುನಾವಣೆಗಳಲ್ಲಿ ಮತದಾನದ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ ;

(ಜಿ) ಚುನಾವಣಾ ಫಲಿತಾಂಶದ ಘೋಷಣೆಗೆ ಮುಂಚೆ ಮತಗಳ ಮರು ಎಣಿಕೆ ಮಾಡಬಹುದಾದಂಥ ಸಂದರ್ಭಗಳೂ ಸೇರಿದಂತೆ ಮತಗಳ ಪರಿಶೀಲನೆ ಮತ್ತು ಎಣಿಕೆ ;

(ಜಿಜಿ) ಮತದಾನ ಯಂತ್ರಗಳ ಮೂಲಕ ದಾಖಲಿಸಿದ ಮತಗಳ ಎಣಿಕೆಯ ಬಗೆಗಿನ ಪ್ರಕ್ರಿಯೆ ;

(ಹೆಚ್) ಮತಪೆಟ್ಟಿಗೆಗಳು, ಮತದಾನ ಯಂತ್ರ, ಮತಪತ್ರಗಳು ಮತ್ತು ಇತರ ಚುನಾವಣಾ ಕಾಗದ ಪತ್ರಗಳ ಸುರಕ್ಷಿತ ಅಭಿರಕ್ಷೆ, ಅಂಥ ಕಾಗದ ಪತ್ರಗಳನ್ನು ಪರಿರಕ್ಷಿಸಿಡಬೇಕಾದ ಅವಧಿ ಮತ್ತು ಅಂಥ ಕಾಗದ ಪತ್ರಗಳ ಪರಿಶೀಲಿಸುವಿಕೆ ಮತ್ತು ಹಾಜರುಪಡಿಸುವಿಕೆ ;

(ಹೆಚ್‌ಹೆಚ್) ಲೋಕಸಭೆಯನ್ನು ಅಥವಾ ಒಂದು ರಾಜ್ಯ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ನಡೆಸಬೇಕಾದ ಯಾವುದೇ ಚುನಾವಣೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಸರ್ಕಾರವು ಒದಗಿಸಬೇಕಾದ ಸಾಮಗ್ರಿ;

(ಐ) ಈ ಅಧಿನಿಯಮದ ಮೂಲಕ ನಿಯಮಿಸಬೇಕೆಂದು ಅಗತ್ಯಪಡಿಸಲಾದ ಯಾವುವೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು 30 ದಿನಗಳ ಅವಧಿಯವರೆಗೆ ಇರಿಸತಕ್ಕುದು, ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕುದು.

**170. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ** :- ಯಾವುದೇ ಸಿವಿಲ್ ನ್ಯಾಯಾಲಯವು ಚುನಾವಣಾಧಿಕಾರಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವನೇ ಇತರ ವ್ಯಕ್ತಿಯು ಚುನಾವಣೆಯ ಸಂಬಂಧದಲ್ಲಿ ಕೈಗೊಂಡಿರುವ ಯಾವುದೇ ಕ್ರಮದ ಅಥವಾ ನೀಡಿದ ಯಾವುದೇ ತೀರ್ಮಾನದ ಕಾನೂನು ಸಮ್ಮತತೆಯನ್ನು ಪ್ರಶ್ನಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ.

**171.** (ನಿರಸನಗೊಳಿಸಲಾಗಿದೆ).

* * * *

ದಿ ರೆಪ್ರೆಸೆಂಟೇಷನ್ ಆಫ್ ದಿ ಪೀಪಲ್ ಆ್ಯಕ್ಟ್, 1951 (1951 ರ 43) – ಇದರ ಮೇಲ್ಕಂಡ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ನವದೆಹಲಿ ಕಾರ್ಯದರ್ಶಿ,
ದಿನಾಂಕ : ಭಾರತ ಸರ್ಕಾರ.

The above translation in Kannada of the Representation of the People Act, 1951 (43 of 1951) has been authorised by the President to be published in the Official Gazette under clause (a) of Section 2 of the Authoritative Texts (Central Laws) Act, 1973.

New Delhi Secretary to the Govt.of India.
Date :